# ಪ್ರಸಾದ

ಸಂಪುಟ 29 ಸಂಚಿಕೆ 2 ಮಾರ್ಚ್-ಏಪ್ರಿಲ್ 2014

ಸಂಪಾದಕ

**ಪ್ರೊ. ಮಲೆಯೂರು ಗುರುಸ್ವಾಮಿ**

**ಜೆಎಸ್‌ಎಸ್ ಮಹಾವಿದ್ಯಾಪೀಠ**

ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ವೃತ್ತ

ಮೈಸೂರು 570 004



**ಸಂಸ್ಥಾಪಕರು**

'ಶ್ರೀಮನ್ಮಹಾರಾಜ ರಾಜಗುರುತಿಲಕ' ಪರಮಪೂಜ್ಯ ಲಿಂಗೈಕ್ಯ
**ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು**

**ಅಧ್ಯಕ್ಷರು**
**ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು**


**ಸಂಪಾದಕ ಸಮಿತಿ**
ಡಾ. ಶ್ರೀ ಇಮ್ಮಡಿ ಶಿವಬಸವ ಸ್ವಾಮಿಗಳು
ಶ್ರೀ ಬಿ.ಎನ್. ಬೆಟ್‌ಕೆರೂರ್
ಶ್ರೀ ಎಸ್.ಪಿ. ಮಂಜುನಾಥ್
ಶ್ರೀ ಮ.ಗು. ಸದಾನಂದಯ್ಯ
ಶ್ರೀ ಆರ್.ಎಸ್. ಪೂರ್ಣಾನಂದ
ಶ್ರೀ ಎಸ್. ನಂಜುಂಡಯ್ಯ
ಶ್ರೀ ಕೆ.ಸಿ. ಶಿವಪ್ಪ
ಡಾ. ಬಿ.ನಂ. ಚಂದ್ರಯ್ಯ
ಡಾ. ಓ.ಎಲ್. ನಾಗಭೂಷಣಸ್ವಾಮಿ
ಡಾ. ಪದ್ಮಾ ಶೇಖರ್
ಡಾ. ಎನ್.ಎಸ್. ತಾರಾನಾಥ
ಶ್ರೀಮತಿ ಎಚ್.ಟಿ. ಶೈಲಜಾ
ಪ್ರೊ. ಮಲೆಯೂರು ಗುರುಸ್ವಾಮಿ (ಸಂಪಾದಕ)


---

ಸಾಹಿತ್ಯ, ಸಂಸ್ಕೃತಿ, ಕಲೆ, ಧರ್ಮ, ವಿಜ್ಞಾನ, ಶಿಕ್ಷಣ, ಆರೋಗ್ಯ
ಮುಂತಾದ ವಿಚಾರಪೂರ್ಣ ಲೇಖನಗಳಿಗೆ ಸ್ವಾಗತವಿದೆ.
ಬರಹಗಳಲ್ಲಿನ ಅಭಿಪ್ರಾಯಗಳು ಆಯಾ ಲೇಖಕರವು

# ಪರಿವಿಡಿ


ಸಂಪಾದಕೀಯ 5

ಗುರುವಾಣಿ 9

ಸ್ವತಂತ್ರ ಸಿದ್ಧಲಿಂಗೇಶ್ವರರು 11
**ದೇಜಗೌ**

"ಭಾರತರತ್ನ" ಪ್ರೊ. ಸಿ.ಎನ್.ಆರ್. ರಾವ್ 21
**ಡಾ. ಶಂಕರ ರಾಮಚಂದ್ರ ಕಂದಗಲ್ಲ**

ಡಾ. ಜಿ.ಎಸ್. ಶಿವರುದ್ರಪ್ಪನವರ ಕಾವ್ಯಾನುಸಂಧಾನ 24
**ಪ್ರೊ. ಸಿ.ಪಿ. ಸಿದ್ಧಾಶ್ರಮ**

ಶಿವ-ಜಗತ್ತುಗಳ ಕಾರ್ಯಕಾರಣಭಾವ: ಒಂದು ಚಿಂತನೆ 43
**ವಿದ್ವಾನ್ ಎಚ್.ವಿ. ನಾಗರಾಜರಾವ್**

ಭಗವಾನ್ ಮಹಾವೀರ ಶಕೆಯ ಉಲ್ಲೇಖ 47
**ಡಾ. ಹೆಚ್.ಎ. ಪಾರ್ಶ್ವನಾಥ್**

ವಾರ್ತಾವಿಹಾರ 44


**ಮುಖಪುಟ ಚಿತ್ರ**

**ಸುತ್ತೂರು ಜೆಎಸ್‌ಎಸ್ ವಸತಿ ಶಾಲೆಯ ಸುವರ್ಣ ಮಹೋತ್ಸವವನ್ನು ಪ್ರಾಥಮಿಕ ಶಿಕ್ಷಣ ಸಚಿವ ಶ್ರೀ ಕಿಮ್ಮನೆ ರತ್ನಾಕರ ಅವರು ಉದ್ಘಾಟಿಸಿದರು. ಚಿತ್ರದಲ್ಲಿ ಜಗದ್ಗುರುಗಳವರು, ಶ್ರೀ ಬಿ.ಎನ್. ಬೆಟ್‌ಕೆರೂರ್, ಶ್ರೀ ಬಿ.ಕೆ. ಚಂದ್ರಶೇಖರ್, ಶ್ರೀ ವಿಶ್ವೇಶ್ವರ ಹೆಗ್ಗಡೆ ಕಾಗೇರಿ, ಶ್ರೀ ವಿ. ಶ್ರೀನಿವಾಸ ಪ್ರಸಾದ್, ಶ್ರೀ ಬಿ. ಸೋಮಶೇಖರ್ ಮತ್ತು ಶ್ರೀ ಬಸವರಾಜ ಹೊರಟ್ಟಿ ಯವರಿದ್ದಾರೆ**

## ಲೇಖಕರ ವಿಳಾಸ


**ದೇಜಗೌ**
ನಂ. 5/ಎ, 1ನೇ ಕ್ರಾಸ್
ದೇವಸ್ಥಾನದ ಹತ್ತಿರ, ಜಯಲಕ್ಷ್ಮೀಪುರಂ
ಮೈಸೂರು 570 012

**ಡಾ. ಶಂಕರ ರಾಮಚಂದ್ರ ಕಂದಗಲ್ಲ**
ಭೌತಶಾಸ್ತ್ರ ವಿಭಾಗದ ಮುಖ್ಯಸ್ಥರು
ಬಸವೇಶ್ವರ ವಿಜ್ಞಾನ ಮಹಾವಿದ್ಯಾಲಯ
ಬಾಗಲಕೋಟ

**ಪ್ರೊ. ಸಿ.ಪಿ. ಸಿದ್ಧಾಶ್ರಮ**
ಕನ್ನಡ ಪ್ರಾಧ್ಯಾಪಕ
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ
ಮೈಸೂರು 570 006

**ವಿದ್ವಾನ್ ಎಚ್.ವಿ. ನಾಗರಾಜರಾವ್**
ನಂ. 90, 9ನೇ ಕ್ರಾಸ್
ನವಿಲು ರಸ್ತೆ
ಕುವೆಂಪುನಗರ
ಮೈಸೂರು 570 023


## ಸಂಪಾದಕೀಯ

ಕೆಲವು ತಿಂಗಳುಗಳಿಂದ ಹಿಂದೆ ಯಾವುದೋ ಖಟ್ಲೆ ಸಂಬಂಧ ಕೌಟುಂಬಿಕ ನ್ಯಾಯಾಲಯದಲ್ಲಿ ನಾನು ಇರಬೇಕಾದ ಸನ್ನಿವೇಶ ಒದಗಿತ್ತು. ಅಲ್ಲಿ ಒಂದು ಯುವ ದಂಪತಿಗಳ ವಿಚಾರಣೆ ನಡೆದಿತ್ತು. ಈಗಾಗಲೇ ಅವರು ನ್ಯಾಯಾಲಯದ ಮೂಲಕವೇ ಬೇರ್ಪಟ್ಟಿದ್ದರು. ಅವರಿಗೆ ಒಂದು ಮಗು ಇತ್ತು. ಬೇರ್ಪಡುವಾಗ ಗಂಡ ಮಗುವಿನ ಎಲ್ಲ ಜವಾಬ್ದಾರಿಗಳನ್ನು ತಾನೇ ವಹಿಸಿಕೊಳ್ಳುವುದಾಗಿ ಒಪ್ಪಿಕೊಂಡಿದ್ದ. ಅದರಂತೆ ಅದನ್ನು ಪಾಲಿಸುತ್ತಲೂ ಬಂದಿದ್ದ. ಆತ ಒಬ್ಬ ಆಟೋ ಚಾಲಕ. ಈಗ ಆಕೆ ಮತ್ತೊಮ್ಮೆ ನ್ಯಾಯಾಲಯದ ಮೊರೆ ಹೊಕ್ಕಿದ್ದಳು. ಕಾರಣ, ಮಗುವಿನ ತಂದೆಯಾದವನು ಮಗುವನ್ನು ಸರಿಯಾಗಿ ನೋಡಿಕೊಳ್ಳುತ್ತಿಲ್ಲ ಎನ್ನುವುದು. ಆತ ತಾನು ಮಗುವನ್ನು ಸರಿಯಾಗಿ ನೋಡಿಕೊಳ್ಳುತ್ತಿದ್ದೇನೆ ಎಂದು ವಾದಿಸುತ್ತ, "ನೀವೇ ಕೇಳಿ ನೋಡಿ, ಮೊನ್ನೆ ತಾನೇ ಫೀಸ್ ಸಹ ಕಟ್ಟಿ ಶಾಲೆಗೆ ಸೇರಿಸಿದ್ದೇನೆ. ತಮ್ಮ ಮುಂದೆ ನಾನು ಸುಳ್ಳು ಹೇಳುವುದಿಲ್ಲ; ಬೇಕಿದ್ದರೆ ರಸೀತಿ ನೋಡಿ" ಎಂದು ಅದನ್ನು ತೋರಿಸಲು ಮುಂದಾದ. ಆ ಹಂತದಲ್ಲಿ ಆಕೆ, "ನೋಡಿ ಸ್ವಾಮಿ, ನೀವೇ ನೋಡಿ, ನಾನು ಬೇಡವೆಂದರೂ ಕೇಳದೆ ಮಗುವನ್ನು ಕನ್ನಡ ಮಾಧ್ಯಮ ಶಾಲೆಗೆ ಸೇರಿಸಿ, ಅದರ ಜೀವನ ಹಾಳು ಮಾಡುತ್ತಿದ್ದಾನೆ. ನನ್ನ ಮಗುವನ್ನು ಇಂಗ್ಲಿಷ್ ಮಾಧ್ಯಮದಲ್ಲಿ ಓದಿಸಬೇಕೆನ್ನುವುದು ನನ್ನ ಆಸೆ. ನಾನು ಮಾತ್ರ ಅವನನ್ನು ಕನ್ನಡ ಶಾಲೆಗೆ ಸೇರಿಸೋದಿಲ್ಲ. ಅವನು ಓದದೇ ಇದ್ದರೂ ಸರಿ. ನನ್ನ ಮಗನೂ ಇವನ ಹಾಗೆ ಆಟೋ ಓಡಿಸಿಕೊಂಡು ಜೀವನ ಮಾಡ್ಬೇಕಾ ಸ್ವಾಮಿ, ಅದಕ್ಕೆ ಮಾತ್ರ ನಾನು ಅವಕಾಶ ಕೊಡೋದಿಲ್ಲ" ಎಂದು ಗಟ್ಟಿ ಧ್ವನಿಯಲ್ಲಿ ಹೇಳತೊಡಗಿದಳು.

ಈ ಮಾತುಗಳನ್ನು ಕೇಳಿಸಿಕೊಳ್ಳುತ್ತಿದ್ದ ನನ್ನೊಳಗೆ ಸ್ವಲ್ಪ ಹೊತ್ತು ಮಂಕು ಕವಿದಂತೆ ಭಾಸವಾಯಿತು. 'ಕನ್ನಡ ಮಾಧ್ಯಮದಲ್ಲಿ ಓದಿದರೆ ನನ್ನ ಮಗ ಹಾಳಾಗಿ ಹೋಗುತ್ತಾನೆ; ಅವನಪ್ಪನ ಹಾಗೆ ಅವನೂ ಮುಂದೆ ಆಟೋ ಓಡಿಸಬೇಕಾಗುತ್ತದೆ' ಎನ್ನುವ ಅವಳ ನಂಬಿಕೆಗೆ ಇದ್ದಂತಹ ಚಾರಿತ್ರಿಕ ಹಾಗೂ ಸಾಮಾಜಿಕ ಕಾರಣಗಳನ್ನು ಕುರಿತು ಮನಸ್ಸು ಚಿಂತಿಸತೊಡಗಿತು. ಅದು ಅವಳೊಬ್ಬಳ ಮಾತಾಗಿರದೆ ನಮ್ಮ ಇಡೀ ಸಮುದಾಯದ ನಡುವೆ ಸುಪ್ತವಾಗಿ ಹೆಪ್ಪುಗಟ್ಟಿರುವ ಒಂದು ಭಾವನೆಯ ವ್ಯಕ್ತ ರೂಪವಾಗಿತ್ತು.

ಒಂದು ಭಾಷೆಯನ್ನು ಆಡುವುದರಿಂದ ದಕ್ಕಬಹುದಾದ ಸಾಮಾಜಿಕ ಸ್ಥಾನಮಾನಗಳು; ಒಂದು ಭಾಷೆಯ ಮಾಧ್ಯಮದಲ್ಲಿ ಪ್ರಭುತ್ವ ಸ್ಥಾಪಿಸುವುದರಿಂದ ವ್ಯಾವಹಾರಿಕವಾಗಿ ಏರಬಹುದಾದ ಎತ್ತರಗಳು - ಇವು 'ಪ್ರಸ್ತುತ ಸಮಸ್ಯೆ' ಮಾತ್ರವಾಗಿಲ್ಲ. ಇದಕ್ಕೊಂದು ದೊಡ್ಡ ಪರಂಪರೆಯೇ ಇದೆ. ಗ್ರೀಕ್, ಲ್ಯಾಟಿನ್, ಫ್ರೆಂಚ್ ಮುಂತಾದ ಭಾಷೆಗಳು ಪ್ರಭುತ್ವದ ಭಾಷೆಗಳಾಗಿದ್ದಾಗ, ಇಂಗ್ಲಿಷಿನವರು ಇನ್ನೂ ಪ್ರಭುಗಳಾಗದಿದ್ದ ದಿನಮಾನಗಳಲ್ಲಿ, ಕೇವಲ ಇಂಗ್ಲಿಷ್ ಭಾಷೆಯನ್ನು ಮಾತನಾಡುವವರನ್ನು 'ಬಾರ್ಬೇರಿಯನ್ಸ್' ಎಂದು ಕರೆಯಲಾಗುತ್ತಿತ್ತು. ಮುಂದೆ ಇಂಗ್ಲಿಷರು ತಮ್ಮ ವ್ಯಾಪಾರ ವಹಿವಾಟಿನಿಂದ, ತಂತ್ರಗಾರಿಕೆಯಿಂದ, ಸಾಹಸ ಪ್ರವೃತ್ತಿಯಿಂದ ಪ್ರಪಂಚದ ಬೇರೆ ಬೇರೆ ಭಾಗಗಳಲ್ಲಿ ವಸಾಹತುಗಳನ್ನು ಸ್ಥಾಪಿಸಿ, 'ಸೂರ್ಯ ಮುಳುಗದ ಸಾಮ್ರಾಜ್ಯ'ದ ಒಡೆಯರು ಎನ್ನಿಸಿಕೊಳ್ಳತೊಡಗುತ್ತಲೇ, ಅವರ ಭಾಷೆಯೂ ಎಲ್ಲ ಕಡೆ 'ಉನ್ನತ ಪೀಠ'ವನ್ನು ಅಲಂಕರಿಸಿತು. ಅವರು ತಮ್ಮ ಆಡಳಿತ ಪ್ರದೇಶಗಳನ್ನು ವಿಸ್ತರಿಸಿದಂತೆಯೇ, ತಮ್ಮ ಭಾಷೆಯನ್ನು 'ಮಡಿ ಮೈಲಿಗೆ'ಯ ಭಾವನೆಯಿಲ್ಲದೆ ಸಮೃದ್ಧಗೊಳಿಸಿದರು. ಪ್ರಪಂಚದ ಎಲ್ಲ ಜ್ಞಾನದ ಆವಿಷ್ಕಾರಗಳು ತಕ್ಷಣವೇ ಇಂಗ್ಲಿಷಿನಲ್ಲಿ ಲಭ್ಯವಾಗುವಂತೆ ನೋಡಿಕೊಂಡರು. ಅವರ ಭಾಷೆಯ ಶಬ್ದಕೋಶ, ವಿಶ್ವಕೋಶಗಳು ಭಾಷೆ ಮತ್ತು ವಿಷಯಗಳ ಕಣಜಗಳಾಗಿ ಮಾರ್ಪಟ್ಟವು. ಅದೊಂದು ಶ್ರೀಮಂತ, ಪ್ರತಿಷ್ಠಿತ ಭಾಷೆ ಎನಿಸಿಕೊಂಡಿತು.

ಭಾರತದಂತಹ ಅಭಿವೃದ್ಧಿಶೀಲ ದೇಶಗಳು ಎಂದೂ ಈ ಅಂಶಗಳಿಗೆ ಹೆಚ್ಚು ಒತ್ತು ಕೊಡಲಿಲ್ಲ ಎನ್ನುವುದು ಒಂದು ಅಂಶವಾದರೆ, ಇಲ್ಲಿ ನೂರಾರು ಭಾಷೆಗಳು, ಉಪಭಾಷೆಗಳ ಸಮಸ್ಯೆಯಿಂದ, ಹಾಗೆಯೇ ಆಡಳಿತಾತ್ಮಕ ವೈರುಧ್ಯಗಳಿಂದ, ಇದು ಸಾಧ್ಯವಾಗಲಿಲ್ಲ ಎನ್ನುವುದೂ ಅಷ್ಟೇ ಸತ್ಯವಾದ ಅಂಶವಾಗಿದೆ. ಜೊತೆಗೆ ನಮ್ಮ ಧರ್ಮ ಗ್ರಂಥಗಳು ಎಂದು ಹೇಳಿಕೊಳ್ಳುವ ಕೃತಿಗಳ ಭಾಷೆಗೂ, ಜನಸಾಮಾನ್ಯರಿಗೂ ಯಾವುದೇ ಸಂಬಂಧವಿಲ್ಲದೆ ಹೋಗಿ, ಗ್ರಂಥಭಾಷೆ ಮತ್ತು ಆಡುಭಾಷೆಗಳು ಬೇರೆಬೇರೆಯಾಗಿಯೇ ಬೆಳೆದು ಬಂದುವು. ಧಾರ್ಮಿಕ ಭಾಷೆಯಾದ ಸಂಸ್ಕೃತ ಎಂದೂ ವ್ಯಾವಹಾರಿಕ ಭಾಷೆಯಾಗದೇ ಇದ್ದ (ಅಲ್ಲಲ್ಲಿ ಆಗಿದ್ದರೂ ಅದು ಬಹುಸಂಖ್ಯಾತರ ಭಾಷೆ ಆಗಿರಲೇ ಇಲ್ಲ) ಕಾರಣಕ್ಕಾಗಿ – ಅದು ಬಹು ದೊಡ್ಡ ಭಾಷಾಸಂಪತ್ತನ್ನು ಹೊಂದಿದ್ದರೂ, ಶ್ರೇಷ್ಠ ಗ್ರಂಥಗಳ ಆಗರವಾಗಿದ್ದರೂ – ತನ್ನ ಚಲನಶೀಲತೆಯಲ್ಲಿ ಸೋತುಹೋಯಿತು.

ಈ ದೇಶಕ್ಕೆ ಬ್ರಿಟಿಷರು ಬಂದನಂತರ, ಇಂಗ್ಲಿಷ್ ಭಾಷೆ ವ್ಯಾಪಕವಾಗಿ ಪ್ರಚಾರ ಪಡೆಯಿತು. ಮೆಕಾಲೆ ಹಾಕಿಕೊಟ್ಟ ಮಾರ್ಗದರ್ಶಿ ಸೂತ್ರಗಳನ್ವಯ ಅದು ನಮ್ಮ ವಿದ್ಯಾಕ್ಷೇತ್ರವನ್ನು ಆಕ್ರಮಿಸಿತು. ಶಿಕ್ಷಣದ ಎಲ್ಲ ಹಂತಗಳಲ್ಲಿ – ಅದರಲ್ಲೂ ಉನ್ನತ ಶಿಕ್ಷಣದಲ್ಲಿ – ಬೇರೂರತೊಡಗಿತು. ಅಂದಿನ ದಿನಗಳಲ್ಲಿ ಉನ್ನತ ಶಿಕ್ಷಣ ಎನ್ನುವುದು



ಮೇಲ್ವರ್ಗದವರ ಸೊತ್ತು ಮಾತ್ರ ಆಗಿತ್ತು. ಸಂಕೀರ್ಣ ಸಾಮಾಜಿಕ ಕಾರಣಗಳಿಂದಾಗಿ, ಇಡೀ ಸಮುದಾಯಕ್ಕೆ ಅಂತಹ ಅವಕಾಶಗಳು ಲಭ್ಯವಾಗಲಿಲ್ಲ.

ಸ್ವಾತಂತ್ರ್ಯಾನಂತರದ ದಿನಗಳಲ್ಲಿ, ಕರ್ನಾಟಕದ ಮಟ್ಟಿಗೆ ಹೇಳುವುದಾದರೆ, ಹಾವನೂರ್ ವರದಿ ಅನುಷ್ಠಾನಕ್ಕೆ ಬಂದ ನಂತರ (ಶ್ರೀ ಡಿ. ದೇವರಾಜ ಅರಸು ಅವರ ಕಾಲಘಟ್ಟದಿಂದ) ಸಮಾಜದ ಎಲ್ಲ ವರ್ಗಗಳ ಜನ ವಿದ್ಯೆಗೆ ಕಣ್ತೆರೆಯತೊಡಗಿದರು. ಉನ್ನತ ವಿದ್ಯಾಭ್ಯಾಸ ಪಡೆದು ಮೇಲ್ಮಟ್ಟದ ಅಧಿಕಾರಿಗಳನ್ನು ಪಡೆದವರಲ್ಲಿ ಹೆಚ್ಚು ಜನ ಇಂಗ್ಲಿಷ್ ಮಾಧ್ಯಮದಲ್ಲಿ ಓದಿದವರು ಎನ್ನುವುದು ಕಣ್ಣಿಗೆ ಕಾಣತೊಡಗಿತು. ನಮ್ಮ ಮಕ್ಕಳೂ ಆ ಮಾಧ್ಯಮದಲ್ಲಿ ಓದಿದರೆ ಅಂತಹ ಅವಕಾಶಗಳು ನಮಗೂ ಸುಲಭವಾಗಿ ಸಿಕ್ಕಬಹುದು ಎನ್ನುವ ಅಂಶ ಎಲ್ಲರ ಮನಸ್ಸಿನಲ್ಲಿ ಮೊಳೆತು ಹೆಮ್ಮರವಾಗತೊಡಗಿತು. ಡಾ. ಸಿ.ಎನ್.ಆರ್. ರಾವ್ ಅವರಂಥವರು ಕೂಡ ಕನ್ನಡ ಮಾಧ್ಯಮದಲ್ಲಿ ಓದಿ ಭಾರತರತ್ನರಾಗಲಿಲ್ಲವೇ ಎನ್ನುವ ಮಾತುಗಳನ್ನು ಎಷ್ಟೇ ಹೇಳಿದರೂ, ಅದೊಂದು ಅಪವಾದವೇ ಹೊರತು ವಾಸ್ತವವಲ್ಲ ಎನ್ನುವ ಭಾವನೆಯನ್ನು ಹೋಗಲಾಡಿಸಲು ಸಾಧ್ಯವಿಲ್ಲದ ಸ್ಥಿತಿ ಇಂದು ನಿರ್ಮಾಣವಾಗಿದೆ. ಕನ್ನಡದ ಖ್ಯಾತ ಲೇಖಕರೊಬ್ಬರನ್ನು ನಾನು ಒಮ್ಮೆ "ನಿಮ್ಮ ಮಕ್ಕಳೂ ನಿಮ್ಮ ಹಾಗೆ, ಕಥೆ, ಕವನ ಬರೆಯುತ್ತಾರೋ ಹೇಗೆ?" ಎಂದು ಕೇಳಿದುದಕ್ಕೆ ಅವರು "ನನಗಿಂತಲೂ ಚೆನ್ನಾಗಿ ಬರೆಯುತ್ತಾರೆ, ಆದರೆ ಕನ್ನಡದಲ್ಲಲ್ಲ, ಇಂಗ್ಲಿಷ್‌ನಲ್ಲಿ" ಎಂದು ಬಹಳ ಹೆಮ್ಮೆಯಿಂದ ಹೇಳಿಕೊಂಡದ್ದು ನನಗೆ ಈ ಸಂದರ್ಭದಲ್ಲಿ ನೆನಪಿಗೆ ಬರುತ್ತದೆ. ಅಂದರೆ, ನಮ್ಮ ಸಮರ್ಥನೆಗಳು, ತರ್ಕಗಳು, ವಾಸ್ತವಾಂಶಗಳು ಮತ್ತು ಪೋಷಕರ ಭ್ರಮೆಗಳು, ನಂಬಿಕೆಗಳು ಏನೇ ಇರಲಿ, ಇಂಗ್ಲಿಷ್ ಭಾಷಾಮೋಹ ಹೆಚ್ಚು ಹೆಚ್ಚು ಹಬ್ಬುತ್ತಿರುವುದಂತೂ ಸತ್ಯ. ಕರ್ನಾಟಕ ರಾಜ್ಯದಲ್ಲಿ ಇತ್ತೀಚಿನ ಒಂದು ಅಂಕಿ ಅಂಶ ಹೀಗೆ ಹೇಳುತ್ತದೆ: 2011-12ರಲ್ಲಿ ಶೇ.12.72 ರಷ್ಟು ಇಂಗ್ಲಿಷ್ ಮಾಧ್ಯಮ ಶಾಲೆಗಳಿದ್ದದ್ದು, 2012-13ರಲ್ಲಿ ಶೇ.13.42ಕ್ಕೆ ಏರಿಕೆಯಾಗಿದೆ. ಕನ್ನಡ ಮಾಧ್ಯಮ ಶಾಲೆಗಳು 2011-12ರಲ್ಲಿ ಶೇ.78.37 ರಷ್ಟಿದ್ದರೆ, 2012-13ರಲ್ಲಿ ಶೇ.77.73ಕ್ಕೆ ಇಳಿದಿದೆ. ಅದೇ ರೀತಿ ಕನ್ನಡ ಮಾಧ್ಯಮ ವಿದ್ಯಾರ್ಥಿಗಳ ಸಂಖ್ಯೆ ಶೇ.74.67ರಿಂದ 73.31ಕ್ಕೆ ಇಳಿಕೆಯಾಗಿದೆ. 2006-2007ರಲ್ಲಿ ರಾಜ್ಯ 24,547 ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಗಳಿದ್ದದ್ದು 2012-13ರಲ್ಲಿ 22,105ಕ್ಕೆ ಇಳಿದಿದೆ. ಇಂಗ್ಲಿಷ್ ಮಾಧ್ಯಮದ ಆಕರ್ಷಣೆಯ ಕಾರಣದಿಂದಾಗಿ ಖಾಸಗಿ ಶಾಲೆಗಳ ಸಂಖ್ಯೆ ಹೆಚ್ಚಾಗಿದೆ.

ಭಾಷೆ ಎನ್ನುವುದು ಇಂದು ಕೇವಲ ವ್ಯಾವಹಾರಿಕ ಬದುಕಿನ ಕನಿಷ್ಠ ಅವಶ್ಯಕತೆಗಳನ್ನು ಪೂರೈಸಿಕೊಳ್ಳುವ ಸಂವಹನ ಮಾಧ್ಯಮವಾಗಿ ಉಳಿದಿಲ್ಲ. ಸಂವಹನ ಎನ್ನುವುದು ಕೇವಲ ವ್ಯಕ್ತಿಗಳ ನಡುವಣ ವ್ಯವಹಾರವಾಗಿ ಮಾತ್ರ ಉಳಿಯದೆ, ವಾಣಿಜ್ಯೀಕರಣದ

ವ್ಯಾಪ್ತಿಯನ್ನು ಪಡೆದುಕೊಂಡಿದೆ. ಭೌಗೋಳಿಕ ಮಿತಿಯನ್ನು ಮೀರಿ ಅದು ಎಲ್ಲ ಕಡೆಗೂ ಜಿಗಿದಿದೆ; ಗುಡಿಸಲಿನಿಂದ ಗ್ಲೋಬಲೈಜೇಶನ್ನಿನ ವ್ಯಾಪ್ತಿಯವರೆಗೆ ಅದು ಆವರಿಸಿಕೊಂಡಿದೆ. ಆವಶ್ಯಕತೆಯ ಸ್ತರದಿಂದ ಬಹಳ ದೂರ ಸರಿದು ಅದು ಅಧಿಕಾರದ, ಪ್ರತಿಷ್ಠೆಯ, ಪದವಿಗಳನ್ನು ದಕ್ಕಿಸಿಕೊಳ್ಳುವ ಮಂತ್ರದಂಡದಂತೆ ಕೆಲಸ ಮಾಡುತ್ತಿದೆ. ಇದನ್ನು ಹುಸಿ ಎನ್ನಿ, ಭ್ರಮೆ ಎನ್ನಿ, ಕಾಲಸಾಗರದ ಕೇವಲ ನೊರೆತೆರೆಗಳೆನ್ನಿ, ಕ್ಷಣಕಾಲದ ಸುಂಟರಗಾಳಿ ಎನ್ನಿ, ಸುನಾಮಿ ಎನ್ನಿ – ಅಂತೂ ಕನ್ನಡ ತಾಯಿ ಇಂದು ಸಂಕಷ್ಟಕ್ಕೆ ಸಿಲುಕಿರುವುದಂತೂ ಸತ್ಯ. ಎಲ್ಲಿಯ ತನಕ ಜನರ ಸುಪ್ತ ಮನಸ್ಸಿನಾಳಕ್ಕೆ ಇಳಿಯುವಂತಹ ಸಮರೋಪಾದಿಯ ಕಾರ್ಯಕ್ರಮಗಳನ್ನು ಹಮ್ಮಿಕೊಂಡು, ಕನ್ನಡವನ್ನು ಅನ್ನದ ಭಾಷೆಯನ್ನಾಗಿ, ಅಭಿಮಾನದ ಭಾಷೆಯನ್ನಾಗಿ, ಜ್ಞಾನಶಾಖೆಗಳ ಭಾಷೆಯನ್ನಾಗಿ, ಪ್ರತಿಷ್ಠೆಯ ಭಾಷೆಯನ್ನಾಗಿ ಮಾಡಲು ಎಲ್ಲರೂ – ಸರ್ಕಾರ, ಸಂಘಸಂಸ್ಥೆಗಳು, ಜನ, ನಾವು, ನೀವು ಎಲ್ಲರೂ – ತ್ರಿಕರಣಪೂರ್ವಕವಾಗಿ ಕ್ರಿಯಾಶೀಲರಾಗುವುದಿಲ್ಲವೋ ಅಲ್ಲಿಯತನಕ ನಾವು ನಮ್ಮ 'ಆಟೋ ಚಾಲಕನ ಹೆಂಡತಿಯ ಭಾವನೆ'ಯನ್ನು ಅಪರಾಧ ಎಂದು ಹೇಳಲಾಗುವುದಿಲ್ಲ. ಇಂತಹವರು ನಮ್ಮ ನಿಮ್ಮ ಮನೆಗಳಲ್ಲಿಯೂ ಇದ್ದಾರೆ ಎನ್ನುವುದನ್ನು ನಾವು ಅಲ್ಲಗಳೆಯಲಾಗುವುದಿಲ್ಲ.

ಶಾಸ್ತ್ರೀಯ ಭಾಷೆಯ ಸ್ಥಾನಮಾನಗಳನ್ನು ಪಡೆಯುವ ಸಂದರ್ಭದಲ್ಲಿ ನಾವು ಅಭಿಮಾನದಿಂದ ಮಂಡಿಸುವ ಕನ್ನಡದ ಶ್ರೀಮಂತ ಪರಂಪರೆ; ಹೆಮ್ಮೆಯಿಂದ ಹೇಳಿಕೊಳ್ಳುವ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರ ಪಟ್ಟಿ; ನಮ್ಮ ಸಮ್ಮೇಳನಗಳಲ್ಲಿ ಖರ್ಚಾಗುತ್ತಿರುವ ಕೋಟಿಗಟ್ಟಲೆ ರೂಪಾಯಿಯ ಪುಸ್ತಕಗಳು – ಇವುಗಳ ಬಗ್ಗೆ ಸಂತೋಷಪಡುವುದು ಒಂದು ಕಡೆಯಾದರೆ, ನಮ್ಮ ಮುಂದಿನ ತಲೆಮಾರಿನ ಜನ ಕನ್ನಡವನ್ನು ಅಭಿಮಾನದಿಂದ, ಪ್ರತಿಷ್ಠೆಯಿಂದ ಸ್ವೀಕರಿಸಿ ಅಪ್ಪಿಕೊಳ್ಳುವ ಅಗತ್ಯಗಳನ್ನು ಕುರಿತು ಗಂಭೀರ ಚಿಂತನೆ ನಡೆಸಬೇಕಾಗಿದೆ.

ರಾಜ್ಯದ ಉಚ್ಚ ನ್ಯಾಯಾಲಯದಲ್ಲಿ ಇತ್ತೀಚಿನ ದಿನಗಳಲ್ಲಿ ನಡೆಯುತ್ತಿರುವ ವಾದ ವಿವಾದಗಳನ್ನು ಗಮನಿಸಿದರೆ ಕನ್ನಡಕ್ಕೆ ಹಿನ್ನಡೆಯಾಗುವ ಎಲ್ಲ ಸೂಚನೆಗಳೂ ಕಂಡುಬರುತ್ತಿವೆ (ಇತ್ತೀಚೆಗೆ ತಾನೇ ಕನ್ನಡ ನಾಮಫಲಕಗಳ ಬಗೆಗೆ ನ್ಯಾಯಾಲಯದಿಂದ ಕನ್ನಡ ಹಿತಾಸಕ್ತಿಗಳಿಗೆ ವಿರುದ್ಧವಾಗುವ ತೀರ್ಮಾನ ಹೊರಬಂದಿದೆ). ಇದನ್ನು ಕರ್ನಾಟಕದ ಎಲ್ಲ ಸ್ತರದ ಜನಬೆಂಬಲದೊಂದಿಗೆ, ಕಾನೂನು ತಜ್ಞರು ಸಮರ್ಥವಾದ ವಾದವನ್ನು ಮಂಡಿಸಿ, ಕನ್ನಡ ಮಾಧ್ಯಮದ ಪರವಾದ ತೀರ್ಪನ್ನು ಪಡೆಯಬೇಕಾಗಿದೆ. ಅದೊಂದೇ ನಮಗುಳಿದಿರುವ ದಾರಿಯೇ ಹೊರತು ಕೇವಲ ಭಾವುಕ ಹೇಳಿಕೆಗಳಿಂದ ಏನೂ ಸಾಧನೆಯಾಗುವುದಿಲ್ಲ.

**ಮಲೆಯೂರು ಗುರುಸ್ವಾಮಿ**
ಸಂಪಾದಕ

# ಗುರುವಾಣಿ

ನ ಹಿ ಪ್ರಮಾಣಂ ಜಂತೂನಾಮುತ್ತರಕ್ಷಣಜೀವಿತಮ್
ಚರಮಶ್ವಾಸವೇಳಾಯಾಂ ಯತ್ಕೃತಂ ತತ್ ಸದಾ ಕುರು

(ಉಪನಿಷದ್ವಾಣಿ)

ಎಲ್ಲ ಜೀವಿಗಳಿಗೂ ಸಾವು ಒಂದು ಅನಿವಾರ್ಯ 'ಸ್ಥಿತಿ'. ಆದರೆ ಆ 'ಸ್ಥಿತಿ' ಯಾವಾಗ ಬರುತ್ತದೆ ಎಂದು ಯಾರಿಗೂ ತಿಳಿಯುವುದಿಲ್ಲ. ಮುಂದಿನ ಕ್ಷಣದಲ್ಲಿ ನಾನು ಬದುಕಿರುತ್ತೇನೋ, ಸಾಯುತ್ತೇನೋ ಎನ್ನುವುದನ್ನು ತಿಳಿಯಲು ಸಾಧ್ಯವಾಗಿದ್ದರೆ ಪ್ರಾಯಃ ವ್ಯಕ್ತಿ ಹೆಚ್ಚು ಧಾರ್ಮಿಕ ಜೀವಿಯಾಗುತ್ತಿದ್ದನೇನೋ? ಹಾಗೆಯೇ ಮನುಷ್ಯನ ವಿಚಿತ್ರ ಗುಣವನ್ನು ಗಮನಿಸಿದರೆ ಅದು ನೇತ್ಯಾತ್ಮಕ ಚಿಂತನೆಯನ್ನು ನಡೆಸುತ್ತಿರಲಿಲ್ಲವೆಂದು ಹೇಳುವುದೂ ಸಾಧ್ಯವಿಲ್ಲ! ಮುಂದೊಂದು ದಿನ ವೈದ್ಯಶಾಸ್ತ್ರದಲ್ಲಿ ಸಂಶೋಧನೆಗಳು ನಡೆದು ಸಾವಿನ ನಿರ್ದಿಷ್ಟ ದಿನ, ನಿರ್ದಿಷ್ಟ ಕ್ಷಣವನ್ನು ತಿಳಿಯಲು ಸಾಧ್ಯವಾಗಬಹುದು. ಸದ್ಯಕ್ಕಂತೂ 'ಸಾವಿನ' ಯಾವುದೇ ಸೂಕ್ಷ್ಮಗಳನ್ನು ಗ್ರಹಿಸಲು ನಮಗೆ ಸಾಧ್ಯವಾಗುತ್ತಿಲ್ಲ. ತುಂಬ ಆರೋಗ್ಯಶಾಲಿ ಎನಿಸಿಕೊಂಡವರ ಅನಿರೀಕ್ಷಿತ ಸಾವನ್ನು ಕಂಡಾಗ ಈ ಸತ್ಯ ಮನದಟ್ಟಾಗುತ್ತದೆ. ಆದ್ದರಿಂದ ಬದುಕಿರುವ ಆಯಾ ಕ್ಷಣಗಳಷ್ಟೇ ಸತ್ಯ. ಆದ್ದರಿಂದಲೇ ನಮ್ಮ ಉಪನಿಷತ್ಕಾರರು 'ಚರಮ ಶ್ವಾಸವೇಳಾಯಾಂ ಯತ್ಕೃತಂ ತತ್ ಸದಾ ಕುರು" ಎಂದು ಹೇಳಿದ್ದಾರೆ. ಅಂದರೆ, ಪ್ರತಿಯೊಂದು ಶ್ವಾಸವನ್ನೂ ಮರಣಕಾಲದಲ್ಲಿನ ಕೊನೆಯ ಉಸಿರೆಂದು ತಿಳಿದು ಬ್ರಹ್ಮಾನುಸಂಧಾನವನ್ನು ಮಾಡುತ್ತಿರಬೇಕು. ಇಂತಹ ಪ್ರಜ್ಞೆಯನ್ನು ಜೀವನದ ಪ್ರತಿ ಕ್ಷಣದೊಡನೆಯೂ ಅನುಸಂಧಾನ ಮಾಡುವ ವ್ಯಕ್ತಿ 'ಜೀವನ್ಮುಕ್ತ'ನೆನಿಸುತ್ತಾನೆ. ಆಗ ದೇಹಭಾವ ನಾಶವಾಗಿ ದೇವಭಾವ ಒಳಹೊರಗುಗಳನ್ನು ತುಂಬಿಕೊಳ್ಳುತ್ತದೆ. ಆಗ 'ನಾನು' ಎಂಬ ಭಾವ ಕೇವಲ ಹೊರಗಿನ ಅಂಗಗಳಾದ ಕಣ್ಣು, ಕಿವಿ, ಮೂಗುಗಳಿಗೆ ಸೀಮಿತವಾಗುವುದಿಲ್ಲ. ಅಷ್ಟೇ ಅಲ್ಲ, ಜಾತಿ ಗೋತ್ರಗಳು, ಸುಖ-ದುಃಖಗಳು, ಪುರಸ್ಕಾರ-ತಿರಸ್ಕಾರಗಳು, ಪುರುಷ-ಸ್ತ್ರೀಯೆಂಬ ಭಿನ್ನಭೇದಗಳೆಲ್ಲವೂ ನಾಶವಾಗಿ ಜೀವಿಗೆ ಆತ್ಮನ ನಿಸ್ತರಂಗಸ್ಥಿತಿಯ ಅನುಭವವುಂಟಾಗುತ್ತದೆ. ಆಧ್ಯಾತ್ಮೋಪನಿಷತ್ ಇದನ್ನೇ

ಅಹಂ ಮಮೇತಿ ಯೋ ಭಾವೋ ದೇಹಾಕ್ಷಾದಾವನಾತ್ಮನಿ
ಅಭ್ಯಾಸೋऽಯಂ ನಿರಸ್ತವ್ಯೋ ವಿದುಷಾ ಬ್ರಹ್ಮನಿಷ್ಠಯಾ

ಎಂದು ಸೂತ್ರಪ್ರಾಯವಾಗಿ ಹೇಳುತ್ತದೆ. ದ್ರಷ್ಟಾರರಿಂದ ಪ್ರಣೀತವಾದ 'ದರ್ಶನ'ದ

ಫಲಶ್ರುತಿ ಇದು. ಇಂತಹ ಅನುಭಾವಿಕ ನುಡಿಗಳು ಎಲ್ಲ ಸಮುದಾಯಗಳಿಗೂ, ಎಲ್ಲ ಕಾಲಘಟ್ಟಗಳಲ್ಲೂ ಅನುಕರಣೀಯವೂ, ಅನುಸರಣೀಯವೂ ಆಗಿರುತ್ತವೆ. ಏಕೆಂದರೆ ಈ ನಿಲುವು ಎಲ್ಲ ಉಪಾಧಿಗಳನ್ನೂ ಮೀರಿದಂಥದು. ಬೇರೆ ಬೇರೆ ಸ್ವರೂಪದ, ಬೇರೆ ಬೇರೆ ಸ್ತರದ ಮೋಹದ ಆವರಣಗಳಿಂದ ಬಂಧಿತನಾದ ವ್ಯಕ್ತಿಗೆ, ಈ 'ಅಹಂ ಬ್ರಹ್ಮಾಸ್ಮಿ' ಸ್ಥಿತಿಯ ಎತ್ತರ ಬಿತ್ತರಗಳ 'ಬಯಲ ನಿಲುವು' ದಕ್ಕುವುದು ಅಸಾಧ್ಯ.

ಶುದ್ಧ ಜ್ಞಾನವನ್ನು ಧಾರಣ ಮಾಡಿಕೊಂಡವರು ಮಾತ್ರ, ಬದುಕಿನ ನಶ್ವರತೆಯನ್ನು ಸಮಚಿತ್ತದಿಂದ ಮನನ ಮಾಡಿ, ಪ್ರತಿ ಕ್ಷಣವನ್ನೂ ಅರ್ಥಪೂರ್ಣವನ್ನಾಗಿಸಲು ಕಾರ್ಯೋನ್ಮುಖರಾಗುತ್ತಾರೆ. ಪ್ರತಿಯೊಂದು ಉಚ್ಛ್ವಾಸ-ನಿಃಶ್ವಾಸ ಅಂತಹವರಿಗೆ ಸಹಜವೂ, ಅಲೌಕಿಕವೂ ಆದ ಕ್ರಿಯೆಯಾಗಿ ಕಂಡುಬರುತ್ತದೆ. ಇಂಥ ಸಹಜ ಕ್ರಿಯೆಯ ಮೌಲ್ಯವನ್ನು ಅರಿತುಕೊಂಡವರ ಬದುಕಿನ ಎಲ್ಲ ಪ್ರಕ್ರಿಯೆಯೂ 'ಮಹತ್' ಶಕ್ತಿಯೊಡನೆ ನಡೆಸುವ ಅನುಸಂಧಾನವಾಗಿರುತ್ತದೆ. ಅಂಗ ಲಿಂಗವಾಗುವುದು, ಮಾಂಸಪಿಂಡ ಮಂತ್ರಪಿಂಡವಾಗುವುದು ಈ ತೆರನಾದ ಪ್ರಕ್ರಿಯೆಯ ಮೂಲಕ ಮಾತ್ರ ಸಾಧ್ಯವಾಗುವಂತಹುದು. ಅವಿರಳಜ್ಞಾನಿ ಚನ್ನಬಸವಣ್ಣನವರು ಹೇಳುವಂತೆ, "ಕಷ್ಟಜೀವಿ ಮನುಜರೆಲ್ಲರು ನೆಟ್ಟನೆ ಶಿವಭಕ್ತರಾಗುವುದು" ದುಸ್ಸಾಧ್ಯವಾದರೂ, ಸಾಧ್ಯತೆಗಳ ಮಾರ್ಗಗಳು ಅನಂತವಾಗಿ ಹರಡಿಕೊಂಡಿರುವಾಗ ಅವುಗಳ ಹುಡುಕಾಟದ ಪ್ರಯತ್ನವೂ ಒಂದು ಮಟ್ಟದ ಸಾಧನೆಯೇ ಆಗುತ್ತದೆ ಎಂಬುದನ್ನು ಅಲ್ಲಗಳೆಯಲಾಗುವುದಿಲ್ಲ. ಇದರ ಮೊದಲ ಪ್ರಯತ್ನವೇ, ನನ್ನ ಕೊನೆಯ 'ಶ್ವಾಸ' ಎಂದು, ಎಂತು ಇರಬಹುದೆಂಬುದನ್ನು ತಿಳಿಯದ 'ಪ್ರಜ್ಞೆ'ಯನ್ನು ಅರಿಯಲು, ಅರ್ಥೈಸಿಕೊಳ್ಳಲು ಯತ್ನಿಸುವುದು. ಅದಕ್ಕಾಗಿಯೇ ಬಸವಣ್ಣನವರು "ಮೃತ್ಯು ಮುಟ್ಟದ ಮುನ್ನ ಪೂಜಿಸು ಕೂಡಲ ಸಂಗಮದೇವನ" ಎಂದು ಎಚ್ಚರಿಸಿದ್ದಾರೆ. ಆ ಪೂಜೆಯ ಸ್ವರೂಪ, ಇಷ್ಟಲಿಂಗದಿಂದ ವಿಕಾಸ ಹೊಂದಿ, ಜಗದ ಮೂಲವಾದ ಅನಂತಲಿಂಗಕ್ಕೆ ಪ್ರಜ್ಞೆಯನ್ನು ವಿಸ್ತರಿಸುವುದೇ ಆಗಿದೆ.

ಆ ಅನಂತಲಿಂಗದ ಪೂಜೆಯ ಸ್ವರೂಪದ ಬಗ್ಗೆ –

ಗಗನವೇ ಗುಂಡಿಗೆ, ಆಕಾಶವೇ ಅಗ್ಘವಣಿ
ಚಂದ್ರ ಸೂರ್ಯರಿಬ್ಬರು ಪುಷ್ಪ, ಬ್ರಹ್ಮ ಧೂಪ, ವಿಷ್ಣು ದೀಪ
ರುದ್ರನೋಗರ ! ಸುಯಿಧಾನ ನೋಡಾ!
ಗುಹೇಶ್ವರಲಿಂಗಕ್ಕೆ ಪೂಜೆ ನೋಡಾ

ಅರಿವನ್ನು ಕಂಡವರ, ಕಂಡುಂಡವರ ಭಾವಪೂಜೆ ಈ ಎತ್ತರವನ್ನು ಏರಿದಾಗ ಪಡೆದುಕೊಂಡಾಗ ಜೀವನದ ಪ್ರತಿಕ್ಷಣವೂ ಅಮೃತತ್ವವನ್ನು ಪಡೆದುಕೊಳ್ಳುತ್ತದೆ; ಮರಣವೂ ಮಹಾನವಮಿಯಾಗಿ ಪರಿವರ್ತಿತವಾಗುತ್ತದೆ.

**ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು**

# ಸ್ವತಂತ್ರ ಸಿದ್ಧಲಿಂಗೇಶ್ವರರು

**ದೇಜಗೌ**

ಹನ್ನೆರಡನೆಯ ಶತಮಾನದಲ್ಲಿ ಕರ್ನಾಟಕದ ಕಲ್ಯಾಣದಲ್ಲಾದ ಸಾಹಿತ್ಯಕ, ಧಾರ್ಮಿಕ, ಸಾಮಾಜಿಕ, ಆರ್ಥಿಕ ಕ್ರಾಂತಿ ಜಗತ್ತಿನಲ್ಲೆಲ್ಲಿಯೂ ನಡೆದದ್ದಿಲ್ಲ. ಆ ಕಾಲದಲ್ಲಿ ಉದ್ಭವವಾದ ಶಿವಸಾಹಿತ್ಯವೆಂದು, ನಿತ್ಯಸಾಹಿತ್ಯವೆಂದು, ಪೂರ್ಣಜೀವನಸಾಹಿತ್ಯವೆಂದು, ಸರ್ವರ ಸಾಹಿತ್ಯವೆಂದು ಕರೆಯಬಹುದಾದ ವಚನ ಸಾಹಿತ್ಯ ಲೋಕದ ಯಾವ ಭಾಷೆಯಲ್ಲಿಯೂ ಇಲ್ಲ. ಅದು ಇಹಪರ ಸಾಧನೆಗೆ ಮಾರ್ಗದರ್ಶಿಯಾಗುವುದಲ್ಲದೆ, ತರತಮ ಭೇದಗಳನ್ನು ತೊಡೆದು, ಶೂದ್ರತ್ವ ಅಸ್ಪೃಶ್ಯತೆಗಳನ್ನು ನಿವಾರಿಸಿ, ಸ್ತ್ರೀಸ್ವಾತಂತ್ರ್ಯವನ್ನು ಜಗತ್ತಿನಲ್ಲಿ ಮೊಟ್ಟಮೊದಲು ಘೋಷಿಸಿದ ಅಮರ ಸಾಹಿತ್ಯವೂ ಹೌದು. ಅದು ಸಂಪೂರ್ಣವಾಗಿ ದೇಸಿ ಸಂಸ್ಕೃತಿಯ ಸಾಹಿತ್ಯವಾಗಿದ್ದು, ಶಿವತತ್ವ ಸುಂದರ ಜೀವನಸಾಹಿತ್ಯವಾಗಿದ್ದು, ಕನ್ನಡಕ್ಕೆ ಹೊಸ ಸತ್ವವನ್ನು ನೀಡುತ್ತದೆ.

ಕಲ್ಯಾಣಕ್ರಾಂತಿಯನಂತರ ವಚನಕಾರರು ನಾಡಿನ ನಾನಾ ಭಾಗಗಳಿಗೆ ಚೆದುರಿಹೋಗಲಾಗಿ, ವಚನಸೃಷ್ಟಿಗೆ ವಿರಾಮ ಪ್ರಾಪ್ತವಾಗುತ್ತದೆ. ವಚನರಾಶಿಯನ್ನು ಸಂಗ್ರಹಿಸುವಲ್ಲಿ, ಸಂರಕ್ಷಿಸುವಲ್ಲಿ, ಅವುಗಳಿಗೆ ವ್ಯಾಖ್ಯಾನ ಬರೆಯುವಲ್ಲಿ ಉಳಿದ ಹಾಗೂ ಅನಂತರ ಬಂದ ವಚನಕಾರರು ತೊಡಗಿಸಿಕೊಳ್ಳುತ್ತಾರೆ. ಸುಮಾರು ಎರಡು ಮೂರು ಶತಮಾನಗಳ ತನಕ ವಚನಸೃಷ್ಟಿ ನಿಂತುಹೋಗಿ ಅದರ ಪ್ರಸಾರಕಾರ್ಯ ಮಾತ್ರ ಸಾಗುತ್ತದೆ. ವಿಜಯನಗರದ ದೊರೆ ಪ್ರೌಢದೇವರಾಯನ ಕಾಲದಲ್ಲಿ ವಚನವಾಙ್ಮಯದ ಪುನರುಜ್ಜೀವನ ಪ್ರಾರಂಭವಾಗುತ್ತದೆ. ರಾಜನ ದಂಡನಾಯಕನಾದ ಜಕ್ಕಣ್ಣಾಚಾರ್ಯನಿಂದ ಈ ಪವಿತ್ರ ಕಾರ್ಯ ಜರುಗುತ್ತದೆ. ಈ ಯುಗದ ಶಿಖರಪ್ರಾಯ ವಚನಕಾರ ತೋಂಟದ ಸಿದ್ಧಲಿಂಗಯತಿ. ಅವನ ಗ್ರಂಥದ ಹೆಸರು 'ಷಟ್ಸ್ಥಲ ಜ್ಞಾನ ಸಾರಾಮೃತ'. ಅವನ ಶಿಷ್ಯವೃಂದದಲ್ಲಿ ಪ್ರಸಿದ್ಧನಾದವನು ಸ್ವತಂತ್ರ ಸಿದ್ಧಲಿಂಗೇಶ್ವರ. ಈತ ಸುಮಾರು 1480ರಲ್ಲಿ ಹುಟ್ಟಿರಬಹುದು. ಬಹುಶಃ ಈತನ ಜನ್ಮಸ್ಥಳ ಚಾಮರಾಜನಗರ ತಾಲ್ಲೂಕಿನ ಹರದನಹಳ್ಳಿ. ಪರಿವ್ರಾಜಕರಾದನಂತರ ಪರ್ಯಟನಕಾಲದಲ್ಲವರು ಕೃಷ್ಣರಾಜಪೇಟೆ ತಾಲ್ಲೂಕಿನ ಕಾಪನಹಳ್ಳಿಯ ಸಮೀಪದ ಗಜರಾಜಗಿರಿಯಲ್ಲಿ ತಳವೂರಿ, ಅದನ್ನು ಶಿವಯೋಗ ನಿಲಯವನ್ನಾಗಿ ಮಾರ್ಪಡಿಸಿ, ಸುತ್ತಮುತ್ತಣ ಹಳ್ಳಿಗಳಲ್ಲಿ ಷಟ್ಸ್ಥಲ

ಜ್ಞಾನದ ಮೂಲಕ ಶಿವಯೋಗವನ್ನು ಹರಡುತ್ತಾರೆ. ಸಹಸ್ರ ಸಹಸ್ರ ಮಂದಿ ಅವರ ಶಿಷ್ಯರಾಗುತ್ತಾರೆ. ಅವರು ಸಮಾಧಿಸ್ಥರಾದ ನಂತರವೂ ಆ ಗಿರಿಯು ಪಾವನಕ್ಷೇತ್ರವಾಗಿ ಅಸಂಖ್ಯ ಭಕ್ತರನ್ನು ಆಕರ್ಷಿಸುತ್ತಿದೆ. ಯಾವುದೋ ಕಾರಣವಾಗಿ ಟಿಪ್ಪುಸುಲ್ತಾನ ಸ್ವಾಮಿಗಳ ಗದ್ದುಗೆಯನ್ನು ವಿನೂತನಗೊಳಿಸಿದನೆಂಬ ಕಥೆಯಿದೆ. ಸ್ವಾಮೀಜಿಯ ಮಹಿಮೆಗೆ ಇದೂ ಒಂದು ನಿದರ್ಶನ.

ಹನ್ನೆರಡನೆಯ ಶತಮಾನದಲ್ಲಿ ನಡೆದ ಬಹುಮುಖ ಕ್ರಾಂತಿಗೆಣೆಯಾದ ಕ್ರಾಂತಿ ಜಗತ್ತಿನ ಇತಿಹಾಸದಲ್ಲಿಯೇ ದುರ್ಲಭ. ಸಾಹಿತ್ಯಿಕ, ಧಾರ್ಮಿಕ, ಸಾಮಾಜಿಕ, ಆರ್ಥಿಕ ಹಾಗೂ ವೈಚಾರಿಕ ಕ್ರಾಂತಿಗಳು ನಡೆದ ಪರಿಣಾಮವಾಗಿ ರಾಜಕೀಯ ಕ್ರಾಂತಿಯೂ ಸಂಭವಿಸುತ್ತದೆ. ಬಹುಮುಖೀ ಕ್ರಾಂತಿಗೆ ತೆರೆದುಕೊಂಡ ಅಂದಿನ ಬದುಕು ವಚನಸಾಹಿತ್ಯದಲ್ಲಿ ಪ್ರತಿಬಿಂಬಿತವಾಗುತ್ತದೆ. ಆದರೆ ಹದಿನೈದನೆಯ ಶತಮಾನದ ಮತ್ತು ಅನಂತರದ ವಚನಸಾಹಿತ್ಯದಲ್ಲಿ ಹಿಂದಿನ ವೈಭವವಾಗಲಿ, ವೈವಿಧ್ಯವಾಗಲಿ, ಬದುಕಿನ ನಾನಾ ಮುಖಗಳಾಗಲಿ ಕಾಣುವುದಿಲ್ಲ. ಉದ್ದಕ್ಕೂ ಎದ್ದುಕಾಣುವುದು ಪ್ರಮುಖವಾಗಿ ಷಟ್ಸ್ಥಲಜ್ಞಾನ, ಅಷ್ಟಾವರಣಾದಿಗಳನ್ನೊಳಗೊಂಡ ಧಾರ್ಮಿಕ ವಾತಾವರಣ. ಅಂತೆಯೇ ಸ್ವತಂತ್ರ ಸಿದ್ಧಲಿಂಗೇಶ್ವರರು ರಚಿಸಿದ ಎಲ್ಲ 430 ವಚನಗಳೂ ಷಟ್ಸ್ಥಲಜ್ಞಾನವನ್ನು ಪ್ರತಿಪಾದಿಸುತ್ತವೆ. ಈ ವಚನಗಳ ಜತೆಗೆ ಅವರು 'ಮುಕ್ತ್ಯಂಗನಾ ಕಂಠಮಾಲೆ' ಮತ್ತು 'ಜಂಗಮ ರಗಳೆ'ಗಳನ್ನು ಬರೆದಿದ್ದಾರೆ.

ಇಡೀ ಜಗತ್ತಿನಲ್ಲಿಯೇ ಭರತಖಂಡ ಏಕೈಕ ಧಾರ್ಮಿಕ ಪ್ರಯೋಗಶಾಲೆ. ಜಗತ್ತಿನ ಎಲ್ಲ ಧರ್ಮಗಳಿಗೂ ಇದು ಆಶ್ರಯಸ್ಥಾನವಾಗಿದೆ. 'ಏಕಂ ಸತ್ ವಿಪ್ರಾ ಬಹುಧಾ ವದಂತಿ' ಎಂದು ಮೊಟ್ಟಮೊದಲು ಭಾರತ ಜಗತ್ತಿಗೆ ನೀಡಿದ ಸಂದೇಶ. ಕ್ರೈಸ್ತ ಮತ್ತು ಇಸ್ಲಾಂ ಧರ್ಮಗಳು ಹುಟ್ಟುವುದಕ್ಕೆ ಮುಂಚೆ ಬಹು ಪೂರ್ವದಲ್ಲಿಯೇ ಹಿಂದೂ, ಬೌದ್ಧ ಮತ್ತು ಜೈನ ಧರ್ಮಗಳು ಮೂಡಿದ್ದುವು ಮಾತ್ರವಲ್ಲ, ಆ ಧರ್ಮಗಳ ಪ್ರಚಾರಕರು ಪಾಶ್ಚಾತ್ಯ ದೇಶಗಳಲ್ಲಿ ಸಂಚರಿಸುತ್ತಿದ್ದುದೂ ಉಂಟು. ಅಷ್ಟೇ ಅಲ್ಲ, ವ್ಯಾಪಾರ, ವ್ಯವಹಾರಗಳಿಗಾಗಿ ಅಲ್ಲಿಯ ಜನ ಇಂಡಿಯಾಕ್ಕೆ ಬಂದಾಗ ಇಲ್ಲಿಯ ಧರ್ಮಗಳು ಅವರ ಮೇಲೆ ಪ್ರಭಾವ ಬೀರುತ್ತಿದ್ದುದು ಸಹಜವಷ್ಟೆ.

ಭಾರತೀಯರ ಜೀವನದಲ್ಲಿ ಧರ್ಮಕ್ಕೆ ಪ್ರಪ್ರಥಮ ಸ್ಥಾನ. ಅದು ಅವರ ಸಂಸ್ಕೃತಿಯ ಜೀವಾಳವೂ ಹೌದು. ಇಲ್ಲಿ ಜನಿಸಿದಷ್ಟು ಮಂದಿ ಸಂತರು, ಋಷಿಗಳು, ಸನ್ಯಾಸಿಗಳು, ಧರ್ಮಚಿಂತಕರು, ತಪಸ್ವಿಗಳು, ಮಹಾತ್ಮರು ಮತ್ತೆಲ್ಲಿಯೂ ಹುಟ್ಟಿಲ್ಲ. ಹೀಗಾಗಿ ಧರ್ಮಜಿಜ್ಞಾಸೆ ಅವರ ಜೀವನದ ಪ್ರಮುಖ ಪ್ರವೃತ್ತಿಯಾಗಿದೆ. ಅದರ ಪ್ರತಿಫಲವಾಗಿ ಇಲ್ಲಿ ಹುಟ್ಟಿದಷ್ಟು ಧರ್ಮಗಳು ಮತ್ತೆಲ್ಲಿಯೂ ಹುಟ್ಟಿಲ್ಲ. ಇಲ್ಲಿಯ ಜನ ಜಗತ್ತಿನ ಎಲ್ಲ ಧರ್ಮಗಳಿಗೂ ಆಸರೆಯಿತ್ತು, ಅವುಗಳ ಬೆಳವಣಿಗೆಗೆ ಪ್ರೋತ್ಸಾಹವಿತ್ತರು. ಯಾವ



ಧರ್ಮವನ್ನು ದ್ವೇಷಿಸದೆ, ಎಲ್ಲ ಧರ್ಮಗಳನ್ನು ಗೌರವಿಸಿದರು. ಹನ್ನೆರಡನೆಯ ಶತಮಾನದಲ್ಲಿ ತಲೆಯೆತ್ತಿದ ವೀರಶೈವ ಧರ್ಮದ ಮೂಲಕ ಹಿಂದೂ ಧರ್ಮದ ದೋಷ ನ್ಯೂನತೆಗಳನ್ನು ನಿರಾಕರಿಸಿ, ಹೊಸ ತತ್ತ್ವ ನೀತಿ ನಿಯಮಗಳನ್ನು ರೂಪಿಸಿ, ಲೌಕಿಕಾ ಮುಷ್ಮಿಕ ಜೀವನವನ್ನು ಪರಿಷ್ಕರಿಸಿ, ವೀರಶೈವ ಅಥವಾ ಲಿಂಗಾಯತ ಧರ್ಮದ ಹೆಸರಿನಲ್ಲಿ ಬಸವೇಶ್ವರರು ಧಾರ್ಮಿಕ ಕ್ರಾಂತಿಯನ್ನು ನಡೆಸುತ್ತಾರೆ. ಭಾರತೀಯ ಧರ್ಮ ಸದಾ ವಿಕಾಸಮುಖಿಯಾಗಿದೆಯೆನ್ನುವುದಕ್ಕೆ ಇದೊಂದು ನಿದರ್ಶನ.

ಪಂಚಾಚಾರ, ಷಟ್ಸ್ಥಲ ಮತ್ತು ಅಷ್ಟಾವರಣಗಳು ವೀರಶೈವ ಧರ್ಮದ ಸಿದ್ಧಾಂತ ಗಳಷ್ಟೆ. ಅವುಗಳ ಪ್ರಚಾರವೇ ಎಲ್ಲ ವಚನಕಾರರ ಗುರಿ. ಸ್ವತಂತ್ರ ಸಿದ್ಧಲಿಂಗೇಶ್ವರರು ಸಹ ಭಕ್ತರು ಲಿಂಗಾಂಗಸಾಮರಸ್ಯವನ್ನು ಸಾಧಿಸಬೇಕಾದ ಕ್ರಮವನ್ನು ಷಟ್ಸ್ಥಲದ ಮೂಲಕ ವಿವರಿಸುತ್ತಾರೆ. ಷಟ್‌ಸ್ಥಲದಲ್ಲಿ ಶೂನ್ಯಸ್ಥಿತಿಯಲ್ಲಿದ್ದ, ಅಂದರೆ ನಿರಾಕಾರವಾಗಿದ್ದ, ಶಿವಶಕ್ತಿ ಸಾಕಾರವಾದದ್ದನ್ನು ವಿವರಿಸಲಾಗಿದೆ.

> ಹುಟ್ಟು ಹೊಂದೆಂಬುದಿಲ್ಲದ ದೇವಾ, ನಿಮ್ಮಿಂದ ನೀವೆ
> ಶೂನ್ಯದಲ್ಲಿ ನಿಂದು ಸ್ವಯಂಭುವಾದಿರಲ್ಲ
> ಬೀಜವೃಕ್ಷದಂತೆ ಸಾಕಾರವು ನಿರಾಕಾರವು ನೀವೆಯಾದಿರಲ್ಲ
> ಸಕಲವೆಲ್ಲಕ್ಕೆ ಮೂಲಿಗರಾದಿರಲ್ಲಾ
> ನಿಮ್ಮ ನಿಜವ ನೀವೇ ಅರಿವುತ್ತಿರ್ದಿರಲ್ಲ
> ನಿಮ್ಮ ಮಹಿಮೆಯ ನೀವೇ ಬಲ್ಲಿರಿ
> ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರ

ಶಿವನಿಗೆ ತಾಯಿತಂದೆಯರಿಲ್ಲ. ನಿರಾಕಾರವಾಗಿದ್ದ ಅವನೇ ಸ್ವಯಂಭುವಾಗುತ್ತಾನೆ, ಸಾಕಾರವಾಗುತ್ತಾನೆ. ತುಪ್ಪದಲ್ಲಿರುವ ಕಂಪಿನಂತೆ, ಚಿನ್ನದಲ್ಲಿರುವ ಬಣ್ಣದಂತೆ ಅವನು ಎಲ್ಲರ ಅಂತರಂಗದಲ್ಲಿ ನೆಲೆಸಿದ್ದಾನೆ.

> ಆದಿಮಧ್ಯಾವಸಾನಂಗಳಿಂದತ್ತತ್ತಲಾದ
> ಶಿವಾಂಗರೂಪ ತಾನೆಂದರಿಯದೆ
> ನಿತ್ಯ ನಿರ್ಗುಣ ನಿರವಯ ಅಗಣಿತ ಅಕ್ಷಯ ತಾನೆಂದರಿಯದೆ

ಅಜ್ಞಾನದ ಬಲದಿಂದ ಅಹಂಕಾರವಶನಾಗಿ, ನಾನು ಕರ್ತನು, ನಾನು ಭೋಕ್ತನೆಂದು ಬಗೆದು ಶಿವನೊಳಗಾಗದವರು ಎಂದೆಂದೂ ಭವದಲ್ಲಿ ಬಳಲುತ್ತಿರುವರೆಂದು ವಚನಕಾರರು ಜನರನ್ನೆಚ್ಚರಿಸುತ್ತಾರೆ.

ಕಾಲೇ ಕಂಬವಾಗಿರುವ ದೇಹವೆಂಬ ಮನೆಗೆ ನರದ ಕಟ್ಟು, ಚರ್ಮದ ಹೊದಿಕೆ. ಒಂಬತ್ತು ಬಾಗಿಲಿರುವ ಆ ಮನೆಗೆ ಹೋಹ ಬಾಹರಿಗೆ ಲೆಕ್ಕವಿಲ್ಲ. ಇಂದ್ರಿಯಗಳೇ ಆ ಬಾಗಿಲುಗಳು. ಒಡೆಯನಿಲ್ಲದ ಆ ಮನೆ ಎಂದು ಕೆಡುತ್ತದೆಂದು ಹೇಳುವಂತಿಲ್ಲ. ಆದ್ದರಿಂದ ದೇಹದಾಸೆಯನ್ನು ತೊರೆದು, ವಿರಕ್ತನಾಗಿ ಮುಕ್ತಿಯನ್ನು ಗಳಿಸೆಂದು ಅವರು

ಬೋಧಿಸುತ್ತಾರೆ. ಇಡೀ ಜಗತ್ತು ಮಾಯಾಸಂಸಾರದ ಬಾಧೆಯಲ್ಲಿ ಬಳಲುತ್ತಿದೆ. ಪಂಚೇಂದ್ರಿಯವೆಂಬ ಹೆಡೆಯುಳ್ಳ ಸಂಸಾರಸರ್ಪದ ವಿಷದಿಂದ ಸಮಸ್ತ ಲೋಕದವರು ಸಾಯುತ್ತಿದ್ದಾರೆ; ಸಂಸಾರವಂದಿಗರನ್ನೆಲ್ಲ ಮಾಯೆ ಕಾಡುತ್ತಿದೆ ಎಂಬುದನ್ನು ಮಾನವರು ತಿಳಿಯಬೇಕು. ಸಂಸಾರವೆಂಬ ಮಹಾವ್ಯಾಧಿ ಬಾಧಿಸಿ, ಮನುಷ್ಯನನ್ನು ನಡೆವೆಣನನ್ನಾಗಿ ಮಾಡಿ ಕಾಡುತ್ತಿದೆ. ಮನವೆಂಬ ಮರ್ಕಟನನ್ನು ಹದ್ದುಬಸ್ತಿನಲ್ಲಿಡದಿದ್ದರೆ ಕಾಡುಬೀಡುಗಳಲ್ಲಿ ತೊಳಲಿಸಿ ಬಳಲಿಸುತ್ತದೆ. ಇಂಥ ಅಸ್ಥಿರವಾದ ಸಂಸಾರವನ್ನು ತೊರೆದು, ಗುರುವನ್ನರಸಿಕೊಂಡು ಹೋಗುವುದಾದರೆ, ಪರಶಿವನೇ ಗುರುವಿನ ರೂಪದಲ್ಲಿ ಪ್ರತ್ಯಕ್ಷನಾಗುತ್ತಾನೆ. ಮರಹು ಅಜ್ಞಾನಗಳೆಂಬ ಅಂಧಕಾರ ಆವರಿಸಿದೊಡೆ ಯಾರಾದರಾಗಲಿ ಮಾಡಬಾರದ ಕರ್ಮವನ್ನು ಮಾಡುತ್ತಾರೆಂಬುದು ದಿಟ. ಆಶೆಯೆಂಬ ವೇಶ್ಯೆಗೆ ಸೋತು ಕೆಟ್ಟವರೇ ಎಲ್ಲೆಲ್ಲು. ಯತಿಗಳಾಗಲಿ, ವ್ರತಿಗಳಾಗಲಿ ಅವಳಿಗೆ ಸೋತವರೇ ಬಹಳ. ಸಂಚಿತ ಪ್ರಾರಬ್ಧ, ಆಗಾಮಿ ಕರ್ಮಗಳ ಕಾಟ ಬಲುಹು.

ಈ ಎಲ್ಲ ಜಂಜಡಗಳಿಂದ, ವೈವಿಧ್ಯಮಯ ವ್ಯಸನಗಳಿಂದ ಪಾರಾಗಿ, ಲಿಂಗಾಂಗ ಸಾಮರಸ್ಯದ ಕಡೆಗೆ ಸಾಗಬೇಕಾದರೆ ಅನೇಕ ಸಾಧನೋಪಾಯಗಳನ್ನು ವಚನಕಾರರು ಸೂಚಿಸುತ್ತಾರೆ.

> ಕಾಯದಲ್ಲಿ ಮಂತ್ರವನಿರಿಸಿ, ಮಂತ್ರಕಾಯನ ಮಾಡಿದನು
> ಜೀವವ ಶುದ್ಧ ಮಾಡಿ, ಜೀವದಲ್ಲಿ ಲಿಂಗವನಿರಿಸಿ
> ಲಿಂಗಪ್ರಾಣಿಯ ಮಾಡಿದನು
> ಕಾಯವೇ ಜ್ಞಾನ ಕಾಯವಾಯಿತ್ತು, ಜೀವ ಶಿವವಾಯಿತ್ತು
> ಕಾಣಬಾರದ ಲಿಂಗವ ಕಾಣಿಸಿಕೊಟ್ಟನೆನ್ನ ಕರದಲ್ಲಿ
> ತಿಳಿಯಬಾರದ ಜ್ಞಾನವ ತಿಳಿಸಿ ಮನದಲ್ಲಿ ನೆಲೆಗೊಳಿಸಿದ

ಇದು ಸಿದ್ಧಲಿಂಗೇಶ್ವರರ ಅನುಭವ. ಅವರು ತೋರಿಸಿದ ಮಾರ್ಗದಲ್ಲಿ ಅನುಷ್ಠಾನ ಗೈದದ್ದಾದರೆ ಸರ್ವರಿಗೂ ಅಂಥದೇ ಶಿವಾನುಭಾವವಾಗುವುದು ಸಾಧ್ಯ.

> ನರಜನ್ಮದಲಿ ಹುಟ್ಟಿದವನು ಗುರುಹಸ್ತ ಸೋಂಕಿದ ಬಳಿಕ
> ಹರನಾಗದಿಪ್ಪನೇ ಅಯ್ಯಾ?

ಎಂಬ ಸಿದ್ಧೇಶ್ವರರ ವಚನ ಸುಳ್ಳಾಗುವುದುಂಟೆ? ಭಾಳದಲ್ಲಿ ಭಸಿತವನಿಟ್ಟುಕೊಂಡರೆ ಏಳು ಜನ್ಮದ ಪಾಪಗಳು ಹರಿದುಹೋಗುತ್ತವೆಂದು ಸಿದ್ಧಲಿಂಗೇಶ್ವರರು ವಿಭೂತಿಯ ಮಹಿಮೆಯನ್ನು ಹೊಗಳುತ್ತಾರೆ.

> ಪ್ರಣವದ ಬೆಳಗು, ಪಂಚಾಕ್ಷರಿಯ ಕಳೆ
> ಪರಮನಂಗಚ್ಛವಿ ಶ್ರೀ ವಿಭೂತಿ ನೋಡಾ
> ಶಾಂತಿಯ ನೆಲೆವನೆ, ಸರ್ವರಕ್ಷೆಯ ತವರೆನಿಸಿ

ಸಮಸ್ತ ಕಾಮಿತಗಳನ್ನೀಯುವ ಶಕ್ತಿ ಶ್ರೀವಿಭೂತಿಗಿದೆ. ಹಾಗೆಯೇ ರುದ್ರಾಕ್ಷಿ ಮುಕ್ತಿಯ



ಬೀಜವೆನ್ನುತ್ತಾರೆ. ಆದರೆ ತನ್ನಲ್ಲಿರುವ ವಸ್ತುವನ್ನು, ಅಂದರೆ ಲಿಂಗವನ್ನು ನಿಷ್ಠೆಯಿಂದ ನೆರೆಯುವ ತನಕ ಅಹಂಕಾರ ಮಮಕಾರಗಳಳಿಯುವುದಿಲ್ಲ. ಲಿಂಗದ ಕಲೆಯನ್ನರಿತರೆ ಮಾತ್ರ ಭಕ್ತಿ ವಿರಕ್ತಿ ಜ್ಞಾನ ಆನಂದ ಕ್ಷಮೆ ದಮೆ ಸದಾಚಾರಗಳು ದೊರೆಕೊಳ್ಳುತ್ತವೆ. ಅಂಥ ಲಿಂಗ ಯಾವುದು?

> ಮೃತ್ ಕಾಷ್ಠ ಪಾಷಾಣಂಗಳಿಂದಲಾದವೆಲ್ಲ ಲಿಂಗವೆ?
> ಲೋಹ ಬೆಳ್ಳಿ ತಾಮ್ರ ಸುವರ್ಣದಿಂದಲಾದವೆಲ್ಲ ಲಿಂಗವೆ?

ಅಲ್ಲ, ಅಲ್ಲ. ಪರಮಾನಂದ ಪರಬ್ರಹ್ಮವೇ ಲಿಂಗವೆಂದರಿದ ಅರಿವು ಅಖಂಡರೂಪು ಎಂಬ ನಿಜವನ್ನು ಭಕ್ತರು ಅರಿಯಬೇಕು.

ಆಚಾರವಿಲ್ಲದ ಲಾಂಛನಗಳಿಂದ ಏನೂ ಪ್ರಯೋಜನವಿಲ್ಲ. ಸತ್ಕ್ರಿಯಾಚಾರ ಸಂಪನ್ನನಿಗೆ ಸಮ್ಯಗ್‌ಜ್ಞಾನ ಉದಯವಾಗುತ್ತದೆ.

> ಆಚಾರವೇ ಭಕ್ತಂಗೆ ಅಲಂಕಾರವು
> ಆಚಾರವೇ ಭಕ್ತಂಗೆ ಸರ್ವಪೂಜ್ಯವು
> ಇಂತೀ ಆಚಾರವುಳ್ಳವನೆ ಭಕ್ತನು
> ಆಚಾರವುಳ್ಳವನೆ ಯುಕ್ತನು, ಆಚಾರವುಳ್ಳವನೆ ಮುಕ್ತನು

ಎಂದು ಸಿದ್ಧಲಿಂಗೇಶ್ವರರು ಸ್ಪಷ್ಟಪಡಿಸುತ್ತಾರೆ. ಜ್ಞಾನವಿಲ್ಲದವನಿಗೆ ಆಚಾರವಿಲ್ಲ ಎಂದು ಅವರು ಹೇಳುತ್ತಾರೆ.

ಆಚಾರವೆಂದರೆ ಕ್ರಿಯೆ. ಜ್ಞಾನ ಮತ್ತು ಕ್ರಿಯೆ ಪರಸ್ಪರಾವಲಂಬಿಗಳು. ಮುಕ್ತಿಗೆ ಎರಡೂ ಬೇಕು.

ಭಕ್ತಿಯೇ ಮುಕ್ತಿಯ ಜನನಿ ಎಂಬುದು ವಚನಕಾರರ ಅಭಿಮತ. ಭಕ್ತಿ ಜ್ಞಾನ ವೈರಾಗ್ಯಗಳೇ ಮುಕ್ತಿಗೆ ಸೋಪಾನಗಳು. ಶಿವಪ್ರಸಾದವ ಕೊಳ್ಳುವವನೇ ಭಕ್ತ. ಶಿವಕಾರ್ಯದಲ್ಲಿ ನಿರತನಾದವನೇ ಭಕ್ತ. ಬಹಿರಂಗದಲ್ಲಿ ಸದಾಚಾರಿಯಾಗಿ ಅಂತರಂಗ ಶುದ್ಧವಿಲ್ಲದಿದ್ದರೆ ಅವನನ್ನು ಶಿವ ಮೆಚ್ಚನು.

> ಶಮೆ ದಮೆ ವಿವೇಕ ವೈರಾಗ್ಯ ಪರಿಪೂರ್ಣಭಾವ ಶಾಂತಿ
> ಕಾರುಣ್ಯ ಶ್ರದ್ಧೆ ಸತ್ಯ ಸದ್ಭಕ್ತಿ ಶಿವಜ್ಞಾನ ಶಿವಾನಂದ
> ಉದಯವಾದ ಮಹಾಭಕ್ತನ ಹೃದಯದಲ್ಲಿ ಶಿವನಿಪ್ಪ
> ಆತನ ದರ್ಶನ ಸ್ಪರ್ಶನ ಸಂಭಾಷಣೆಯಿಂದ
> ಕೇವಲ ಮುಕ್ತಿಯಪ್ಪುದು ತಪ್ಪದಯ್ಯ

ಎಂದು ಸಿದ್ಧಲಿಂಗೇಶ್ವರರು ಭಕ್ತನ ಗುಣಲಕ್ಷಣಗಳನ್ನು ವಿವರಿಸುತ್ತಾರೆ. ಭಕ್ತನು ಜಾತಿವರ್ಣಾಶ್ರಮಗಳಿಂದ ಮುಕ್ತನಾಗುತ್ತಾನೆ. ಅವನಿಗೆ ದೇಹಾಭಿಮಾನವಿರುವುದಿಲ್ಲ. ನಿಜವಾದ ಭಕ್ತನ ಇಂದ್ರಿಯಗಳು, ತನುಗುಣಗಳು, ಅಂತಃಕರಣಗಳು,

ಅವಸ್ಥಾತ್ರಯಗಳೆಲ್ಲವೂ ಲಿಂಗಾರ್ಪಿತವಾದಾಗ ಅವನು ಪ್ರಸಾದಿಯಾಗುತ್ತಾನೆ, ಶಿವಯೋಗಿಯಾಗುತ್ತಾನೆ. ಅವನನ್ನು ಸಂಸಾರ ಬಂಧಿಸಲಾರದು.

ಅಂಗಲಿಂಗವೆಂಬ ಸಂದು ಸಂಶಯವಳಿದು,
ಲಿಂಗಾಂಗದ್ವೈತ್ಯವನರಿದು ಕೂಡಿದ ಶಿವಯೋಗಿಗೆ
ನಿಶ್ಚಿಂತತ್ವವೇ ಶಿವಧ್ಯಾನ;
ಸಕಲ ಕ್ರೀಗಳು ಲಯವಾದ ಇರವೇ ಶಿವಪೂಜೆ
ಸೋಹಂ ದಾಸೋಹಂಭಾವವಳಿದು
ಆ ಶಿವೋಹಂಭಾವ ತನ್ನಲ್ಲಿ ನಿಂದುದೇ ನಮಸ್ಕಾರ
............................
ಶಿವನೊಳಗೆ ತಾನು, ತನ್ನೊಳಗೆ ಶಿವನು
ಅಡಗಿ ಸಮರಸವಾದುದೇ
ಪರಮ ನಿರ್ವಾಣವೆನಿಸುವುದು

ಪ್ರಸಾದಿಯ ಶರೀರವೆಲ್ಲವೂ ಶಿವನ ಚೈತನ್ಯದ ಆವಾಸಸ್ಥಾನವಾಗುತ್ತದೆ. ಅವನು ಸರ್ವೇಂದ್ರಿಯಗಳ ಸುಖವನ್ನು ಶಿವನಿಗರ್ಪಿಸುತ್ತಾನೆ. ಶಿವನು ಸಹ ಪ್ರಸಾದಿಯ ಇಂದ್ರಿಯಗಳ ಮೂಲಕ ಸುಖಾತಿಶಯವನ್ನನುಭವಿಸುತ್ತಾನೆ.

ಜಗತ್ತಿನಲ್ಲಿ ಪ್ರಾಣಲಿಂಗದ ನೆಲೆಯನರಿದ ಯೋಗಿಯ ಮುಂದೆ ಉಳಿದೆಲ್ಲ ವಿದ್ವಜ್ಜನರು ಮೂಢರೆಂಬುದು ವಚನಕಾರರ ನಿರ್ಣಯ.

ವೇದ ಶಾಸ್ತ್ರ ಆಗಮ ವಿಜ್ಞಾನ ತರ್ಕವ್ಯಾಕರಣಾದಿಗಳ ಕಲಿತು
ಬಲ್ಲವರೆನಿಸಿಕೊಂಡರೇನು?
ಪ್ರಾಣಲಿಂಗದ ನೆಲೆಯನರಿದ ಯೋಗಿಯ ಮುಂದೆ
ಇವರೆಲ್ಲ ಮೂಢರಲ್ಲದೆ ಬಲ್ಲವರಲ್ಲ
ಅದೇನು ಕಾರಣವೆಂದಡೆ:
ಅವರು ಸ್ವಾನುಭಾವ ಜ್ಞಾನಾನುಭಾವಿಗಳಲ್ಲವಾದ ಕಾರಣ
ಇಂತಿವರು ಒಂದು ಕೋಟಿ ಶಾಸ್ತ್ರಜ್ಞರಾದರೂ
ಸಮ್ಯಜ್ಞಾನಿಯಾದ ಒಬ್ಬ ಶರಣಂಗೆ ಸರಿಯಲ್ಲ

ಎಲ್ಲ ವಿದ್ಯೆಗಳು ಶರೀರಕ್ಕೆ ಅರ್ಥಾತ್ ಅಂಗಕ್ಕೆ ಸಂಬಂಧಿಸಿದರೆ, ಶಿವಾನುಭಾವ ಮಾತ್ರ ಮುಕ್ತಿಗೆ, ಆತ್ಮಾರ್ಪಣೆಗೆ, ಶಿವಸಾಯುಜ್ಯಕ್ಕೆ, ಲಿಂಗಾಂಗಸಾಮರಸ್ಯಕ್ಕೆ ಸೇರಿದುದಾಗಿರುತ್ತದೆ. ಅದೇ ಜೀವಿಯ ಏಕಮಾತ್ರ ಲಕ್ಷ್ಯವಾಗಿರಬೇಕೆಂಬುದು ಈ ವಚನದ ರಹಸ್ಯ.

ಇಲ್ಲಿಯ ವಚನಗಳು ಸಂಪೂರ್ಣವಾಗಿ ಷಟ್ಸ್ಥಲಕ್ಕೆ ಸಂಬಂಧಿಸಿದ್ದರೂ, ಅಲ್ಲೊಮ್ಮೆ ಇಲ್ಲೊಮ್ಮೆ ಅಪರೂಪವಾಗಿ ಆರ್ಥಿಕ ಕ್ಷೇತ್ರದ ಬಗ್ಗೆ ಸಮಾಜಕ್ಕೆ ಬುದ್ಧಿವಾದ ಹೇಳುವುದುಂಟು.



ಅರ್ಥದಲ್ಲೇನೂ ಸುಖವಿಲ್ಲ,
ಅರ್ಥವ ಗಳಿಸಿ ಆತ್ಮಪುತ್ರರ್ಗಿರಿಸಬೇಡ ಆರಿಗಾರೂ ಇಲ್ಲ,
ಶಿವನಲ್ಲದೆ ಹಿತವರಿಲ್ಲವೆಂದರಿದು
ಶಿವನೊಡವೆಯ ಶಿವನವರಿಗೆ ಕೊಡು ಮರುಳೆ
ಅರ್ಥದಲ್ಲೇನೂ ಸುಖವಿಲ್ಲ.
ಅರ್ಥವನಾರ್ಜಿಸುವಲ್ಲಿ ದುಃಖ ಆರ್ಜಿಸಿದ ಧನವ ರಕ್ಷಿಸುವಲ್ಲಿ ದುಃಖ
ನಾಶವಾದಡೆ ದುಃಖ, ವೆಚ್ಚವಾದಡೆ ದುಃಖ,
ಈ ಪರಿಯಲ್ಲಿ ಅರ್ಥದಿಂದ ಸದಾ ದುಃಖ ಪಡೆದವರಿಗೆ
ಸುಖವಿಲ್ಲವೆಂದರಿಯದೆ
ಧನದರ್ಥದ ಮರವೆಯಲ್ಲಿ ಬಳಲುತ್ತಿಹ ಮನುಜರಿಗಿನ್ನಾವ
ಗತಿಯು ಇಲ್ಲವಯ್ಯಾ
ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರ

ಇಲ್ಲಿ ಬಸವಣ್ಣನವರ ಆರ್ಥಿಕ ಚಿಂತನೆಯ ಅನುಕರಣವಿದೆ. ಹಣದ ಗಳಿಕೆಯಿಂದ ದುಃಖವಲ್ಲದೆ ಸುಖವೆಂದೂ ಇಲ್ಲ ಎಂಬ ವಾಸ್ತವಿಕ ಸತ್ಯದ ವಿಚಾರವಿದೆ.

ಒಟ್ಟಿನಲ್ಲಿ ಷಟ್ಸ್ಥಲಜ್ಞಾನವೆಂಬ ಅಧ್ಯಾತ್ಮಶಾಸ್ತ್ರ ಭಾರತೀಯ ಧಾರ್ಮಿಕ ಕ್ಷೇತ್ರಕ್ಕೆ ವೀರಶೈವ ಮತ ಕೊಟ್ಟಿರುವ ವಿಶಿಷ್ಟ ಮೌಲಿಕ ಕಾಣಿಕೆ. ಅದು ನಿವೃತ್ತಿಮಾರ್ಗವಲ್ಲ, ಪ್ರವೃತ್ತಿಮಾರ್ಗವೆಂಬುದನ್ನು ಮರೆಯಬಾರದು. ಪ್ರಪಂಚದ ಸಕಲ ವಸ್ತುಗಳೂ ಪ್ರಸಾದವೆಂದರಿತಾಗ, ಮನುಷ್ಯ ತಾನು ಮಾಡುವ ಕಾರ್ಯವೆಲ್ಲವೂ ಶಿವಾರ್ಪಿತವೆಂದು ತಿಳಿದಾಗ, ಶಿವನ ಹೆಸರಿನಲ್ಲಿ ಎಲ್ಲ ಸಾಧನೆಗಳನ್ನು ನಡೆಸಿದಾಗ, ಆಚಾರವಿಚಾರಗಳೆಲ್ಲವೂ ಶಿವಮಯವಾದಾಗ ನರಲೋಕ ಹರಲೋಕವಾಗುವುದರಲ್ಲಿ ಸಂಶಯವಿಲ್ಲವೆಂಬುದು ಸಿದ್ಧಲಿಂಗೇಶ್ವರರ ವಚನಗಳ ಸಾರ.

ಸಿದ್ಧಲಿಂಗೇಶ್ವರರ ಅಭಿವ್ಯಕ್ತಿ ಮಾಧ್ಯಮ ವಚನ ಕಾವ್ಯ. ಲಯವಿನ್ಯಾಸದಿಂದ, ಭಾವಸಮೃದ್ಧಿಯಿಂದ ಕೂಡಿದ ಅರ್ಥಗರ್ಭಿತವಾದ ಸರಳ ಕ್ಲಿಷ್ಟ ಸಂಕೀರ್ಣ ಶ್ರೀಮಂತ ಶೈಲಿಯ ವಚನಪ್ರವಾಹವನ್ನಿಲ್ಲಿ ಕಾಣಬಹುದು. ಉಪಮೆ ರೂಪಕಾದಿ ದೃಷ್ಟಾಂತ ಅರ್ಥಾಲಂಕಾರಗಳ ಹಾಗೂ ಶಬ್ದಾಲಂಕಾರಗಳ ಪ್ರತಿಮೆಗಳ ಬಾಹುಳ್ಯ ಇಲ್ಲಿಯ ವಿಶೇಷ. ಹೆಜ್ಜೆಹೆಜ್ಜೆಗೂ ಕಣ್ಣಿಗೆ ಬೀಳುವ ಈ ಅಲಂಕಾರಗಳು ಕವಿಯ ಕಲ್ಪನಾಪ್ರತಿಭೆಗೆ ಸಾಕ್ಷಿಯಾಗಿವೆ.

1. ಬಡಕಲ ಪಶುವಿಂಗೆ ಬಲುದಂಡಿಯ ಕಟ್ಟಿದರೆ ಎಳೆದೆಳೆದು ಸಾವಂತೆ
2. ದೇಹವೆಂಬ ಹುತ್ತಿನೊಳಗೆ ನಿದ್ರೆಯೆಂಬ ಕಾಳೋರಗನೆದ್ದು
3. ಹಾವಾಡಿಗ ಹಾವನಾಡಿಸುವಲ್ಲಿ ತನ್ನ ಕಾಯ್ದುಕೊಂಡು ಹಾವನಾಡಿಸುವಂತೆ
4. ಅಗ್ನಿ ರಜ್ಜುವಿನಿಂದ ಕಟ್ಟುವಡೆವುದೆ?

5. ಸಂಸಾರವೆಂಬ ಘೋರಾರಣ್ಯದೊಳಗೊಬ್ಬಳು
   ಜಗವ ನುಂಗಿ ಉಗುಳುವ ಬಲುರಕ್ಕಸಿಯಿದ್ದಾಳೆ
6. ಹುಲ್ಲು ಹೊರೆಯೊಳಗೊಂದು ಕಿಚ್ಚು ಹುಟ್ಟಿ ಸುಡುವುದ ಕಂಡೆ
7. ತಿರುಳು ಕರಗಿದ ಬೀಜ ಮರಳಿ ಹುಟ್ಟಬಲ್ಲುದೆ ಅಯ್ಯಾ?
8. ವಿವೇಕವೆಂಬ ವಸ್ತ್ರವ ಹೊದಿಸಿ, ಶ್ರದ್ಧೆಯೆಂಬ ಧೂಪವ ಬೀಸುವೆ
9. ಸ್ಫಟಿಕದ ಘಟದಂತೆ ಒಳ ಹೊರಗೆ ಒಂದೆ ಪರಿ ನೋಡಾ
10. ಗಿಡದ ಮೇಲಣ ಪಕ್ಷಿಯಂತೆ, ಪದ್ಮಪತ್ರದ ಜಲದಂತೆ
    ದೇಹ ಸಂಗದಲ್ಲಿದ್ದರೂ ಇಲ್ಲದಂತಿಹನು

ಇಲ್ಲಿ ಬರುವ ನೂರಾರು ಅಲಂಕಾರಗಳಲ್ಲಿ ಕೆಲವನ್ನು ಮಾತ್ರ ಇಲ್ಲಿ ಸಂಗ್ರಹಿಸಲಾಗಿದೆ.

ಅಲಂಕಾರಗಳಂತೆ ಪ್ರತಿಮಾವಿಧಾನವೂ ಅಧ್ಯಾತ್ಮದಂಥ ಅಸಾಮಾನ್ಯ ತತ್ತ್ವಗಳನ್ನು ಜನರಿಗೆ ತಲುಪಿಸಲು ಅನುಭವವೇದ್ಯವಾಗಿಸಲು ಅನುಕೂಲವಾಗುತ್ತವೆ. ಅಂಥ ಪ್ರತಿಮೆಗಳನ್ನೊಂದನ್ನಿಲ್ಲಿ ಉದಾಹರಿಸಲಾಗಿದೆ.

ದೇಹವೆಂಬುದೊಂದು ನಡುಮನೆಗೆ
ಕಾಲುಗಳೆರಡು ಕಂಭ ಕಂಡಯ್ಯಾ
ಬೆನ್ನೆಲು ಬೆಮ್ಮರ ಎಲುಗಳು
ನರದ ಕಟ್ಟು ಚರ್ಮದ ಹೊದಕೆ
ಒಂದು ಮಠಕ್ಕೆ ಒಂಬತ್ತು ಬಾಗಿಲು
ಆ ದಾರಿಯಾಗೆ ಹೋಹ ಬಾಹರಿಗೆ ಲೆಕ್ಕವಿಲ್ಲ
ಒಡೆಯರಿಲ್ಲದ ಮನೆಯಂತೆ, ಆವಾಗ ಕೆಡುವದೆಂದರಿಯಬಾರದು
ಬಿಡು ಮನೆಯಾಸೆಯ ಬೇಗ ವಿರಕ್ತನಾಗು ಮರುಳೆ
ಪಡೆವೆ ಮುಂದೆ ಮುಕ್ತಿಯ
ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರನಲ್ಲಿ ಒಂದಾದ ಸೌಖ್ಯವನು

ವಚನಕಾರರ ಕಲ್ಪನಾಪ್ರತಿಭೆಗೆ ಇದೊಂದು ಸಾರ್ಥಕ ನಿದರ್ಶನವಾಗಿದೆ. ಒಟ್ಟಿನಲ್ಲಿ ಈ ವಚನಗಳಲ್ಲಿ ಕಾವ್ಯಸೌರಭವಿದೆ; ಅಧ್ಯಾತ್ಮದ ಕೆನೆಯಿದೆ. ಶಿವ ಸತ್ಯ ಸೌಂದರ್ಯಗಳ ಸಮ್ಮಿಲನವೇ ಶ್ರೇಷ್ಠ ಕಾವ್ಯವೆಂಬ ಕವಿವಾಣಿ ಈ ಕೃತಿಗೂ ಅನ್ವಯಿಸುತ್ತದೆ.

ಪ್ರಾಚೀನ ವಚನಕಾರರಾದ ಬಸವ ಅಲ್ಲಮಾದಿಗಳ ಪ್ರಭಾವ ಈ ವಚನಕಾರರ ಮೇಲೆ ದಟ್ಟವಾಗಿ ಮುದ್ರೆಯೊತ್ತಿದೆ. ಅವರ ಮಾತಿನ ಬೆಡಗುಗಳು, ನುಡಿಗಟ್ಟಿನ ಧ್ವನಿಗಳು, ಚಿಂತನೆಯ ಹೊಳಹುಗಳು ಇವರ ವಚನಗಳಲ್ಲಿಯೂ ಎದ್ದು ಕಾಣುತ್ತವೆ. ಯಾವ ವಚನಕಾರನೇ ಆಗಲಿ, ಪ್ರಾಚೀನರ ತೇಜಸ್ಸಿನಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ.



ಬಸವಣ್ಣನವರು ಇವರ ಮೇಲೆ ಹೇಗೆ ಪ್ರಭಾವ ಬೀರಿದ್ದಾರೆನ್ನುವುದಕ್ಕೆ ಕೆಲವು ವಚನಗಳನ್ನಿಲ್ಲಿ ಉದಾಹರಿಸಬಹುದು:

| | ಬಸವೇಶ್ವರ | | ಸಿದ್ಧಲಿಂಗೇಶ್ವರ |
|---|---|---|---|
| 1. | ಇಂದಿಂಗೆಂತು ನಾಳಿಂಗೆಂತು ಎಂದು<br>ಬೆಂದ ಒಡಲ ಹೊಱೆಯ<br>ಹೋಯಿತ್ತೆನ್ನ ಸಂಸಾರ | 1. | ಇಂದಿಂಗೆಂತು ನಾಳಿಂಗೆಂತೆಂದು ಬೆಂದ<br>ಒಡಲಿಗೆ...ಭ್ರಮೆಗೊಂಡು ಬಳಲ<br>ಬೇಡ ಮರುಳೇ |
| 2. | ಊರ ಮುಂದೆ ಹಾಲ ಹಳ್ಳ<br>ಹರಿವುತ್ತಿರಲು ಓಱೆಯಾಚಿನ ಬೆನ್ನಲಿ<br>ಹರಿಯಲದೇಕಯ್ಯಾ | 2. | ಹಾಲ ಹಳ್ಳ ಹರಿವುತ್ತಿರಲು ಅದ ಬಿಟ್ಟು<br>ಓರೆಯಾವಿನ ಬೆನ್ನ ಬಳಿಯಲಿ<br>ಹರಿಯಲುಂಟೆ |
| 3. | ಕೊಂಬಿನ ಮೇಲಿನ ಮರ್ಕಟದಂತೆ<br>ಲಂಘಿಸುವುದೆನ್ನ ಮನವು ನಿಂದಲ್ಲಿ<br>ನಿಲವೀಯದೆನ್ನ ಮನವು ಹೊಂದಿದಲ್ಲಿ<br>ಹೊಂದಲೀಯದೆನ್ನ ಮನವು<br>ಕೂಡಲಸಂಗಮದೇವಾ,<br>ನಿಮ್ಮ ಚರಣ ಕಮಲದಲ್ಲಿ<br>ಭ್ರಮರನಾಗಿರಿಸು ನಿಮ್ಮ ಧರ್ಮ | 3. | ಏನ ಮಾಡುವೆನಯ್ಯಾ?<br>ಈ ಮನವೆಂಬ ಮರ್ಕಟದ ಸಂಗದಿಂದ<br>ಮರ್ಕಟ ವಿಧಿಯಾಯಿತ್ತಯ್ಯಾ<br>ತನುವೆಂಬ ವೃಕ್ಷದಲ್ಲಿ ಇಂದ್ರಿಯಗಳೆಂಬ<br>ಶಾಖೋಪಶಾಖೆಗಳಿಗೆ<br>ಲಂಘಿಸುತ್ತಿದೆ ನೋಡಯ್ಯಾ<br>ಸಜ್ಜನರಿಗೆ ದುರ್ಜನರ ಸಂಗದಿಂದ<br>ದುರ್ಜನಿಕೆ ಬಂದಂತಾಯಿತಾ<br>ಈ ಮನದ ಮರ್ಕಟತನವ ಮಾಣಿಸಿ<br>ನಿಮ್ಮಲ್ಲಿ ಕಟ್ಟಿ ಬಂಧನವಾಗಿರಿಸೀ ಮನವ<br>ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರ |
| 4. | ಸ್ವಧರ್ಮದಲ್ಲಿ ಗಳಿಸಿದ ಪಿತನ ಧನವ<br>ಅಧರ್ಮದಲ್ಲಿ ಕೆಡಿಸುವ ಸುತನಂತೆ<br>ಶಿವನ ಸೊಮ್ಮ ಶಿವಂಗೆ ಮಾಡದೆ<br>ಅನ್ಯಕ್ಕೆ ಮಾಡಿದಡೆ<br>ತನ್ನ ಶಕ್ತಿ ತನ್ನನೆ ಕೆಡಿಸುವುದು<br>ಕೂಡಲಸಂಗಮದೇವಾ | 4. | ಅರ್ಥಗಳಲ್ಲೇನೂ ಸುಖವಿಲ್ಲ, ಅರ್ಥವ<br>ಗಳಿಸಿ ಆತ್ಮಪುತ್ರರ್ಗಿರಿಸಬೇಡ<br>ಆರಿಗಾರೂ ಇಲ್ಲ, ಶಿವನಲ್ಲದೆ<br>ಹಿತವರಿಲ್ಲವೆಂದರಿದು ಶಿವನೊಡವೆಯ<br>ಶಿವನವರಿಗೆ ಕೊಡು ಮರುಳೆ |
| 5. | ಅಂಗಯ್ಯೊಳಗಣ ಲಿಂಗವ ನೋಡುತ್ತ<br>ಕಂಗಳು ಕಡೆಗೋಡಿವರಿಯುತ್ತ ಸುರಿಯುತ್ತ<br>ಎಂದಿಪ್ಪೆನೊ? | 5. | ಅಂಗೈಯ ಲಿಂಗದಲ್ಲಿ ಕಂಗಳು ನಟ್ಟು<br>ಎವೆ ಹಳಚದೆ, ಮನ ಕವಪಡೆದೆ |
| 6. | ಎನ್ನ ಚಿತ್ತ ಅತ್ತಿಯ ಹಣ್ಣು<br>ನೋಡಯ್ಯಾ! ವಿಚಾರಿಸಿದಡೆ ಏನೂ<br>ಹುರುಳಿಲ್ಲವಯ್ಯಾ | 6. | ಅಂತರಂಗ ಶುದ್ಧವಿಲ್ಲದವರೊಳಗೆ<br>ಅತ್ತಿಯ ಹಣ್ಣಿನಂತೆ ಕ್ಷುದ್ರ ಬಿಡದು<br>ನೋಡಯ್ಯಾ |

ಸ್ವತಂತ್ರ ಸಿದ್ಧಲಿಂಗೇಶ್ವರರು ತಾವು ರಚಿಸಿದ ವಚನರಾಶಿಯಿಂದ ಅನುಭಾವದ ಮತ್ತು ಮುಕ್ತಿಯ ರತ್ನದಂತಿರುವ ಕೆಲವು ವಚನಗಳನ್ನಾಯ್ದು 'ಮುಕ್ತ್ಯಂಗನಾ ಕಂಠಮಾಲೆ' ಪೋಣಿಸಿದ್ದಾರೆ. ಅವರ ಮತ್ತೊಂದು ಗ್ರಂಥ 'ಜಂಗಮ ರಗಳೆ'. ಜಂಗಮದ

ಮಹತ್ತನ್ನು ಪರಿಚಯಿಸುವ ಕೃತಿಯಿದು.

ನಿನ್ನ ನಾನಱಿಯದ ಮುನ್ನ ನೀನೆಲ್ಲಿದ್ದೆ?
ಎನ್ನೊಳಗಿದ್ದು ನಿನ್ನ ತೋಱಲಿಕೆ ನೀನೆ ರೂಪಾದೆ.
ಇನ್ನು ಜಂಗಮವೆ ಲಿಂಗವೆಂದು ನಂಬಿದೆ
ಕೂಡಲಸಂಗಮದೇವಾ

ಜಗತ್ತಿನಲ್ಲಿ ಪ್ರಕೃತಿಯ ಮೂಲಕ ಸಸ್ಯಜೀವಿ, ಪ್ರಾಣಿಜೀವಿಗಳ ಮತ್ತು ಮಾನವಜೀವಿಗಳ ಮೂಲಕ ನಡೆಯುವ ಪ್ರತಿಯೊಂದು ಸತ್ಸಂಗತಿಗಳು ಶಿವನ ಪ್ರೇರಣೆಯಿಂದ ನಡೆಯುತ್ತವೆ. ಅವೆಲ್ಲವೂ ಅವನ ಲೀಲೆಗಳು, ಮಾತ್ರವಲ್ಲ, ಅವನೇ ಅವುಗಳಲ್ಲಿ ಹುದುಗಿದ್ದಾನೆಂಬ ಬಸವೇಶ್ವರರ ಸೂಕ್ತಿ ಸಿದ್ಧಲಿಂಗೇಶ್ವರರ ವಚನಗಳಿಗೂ ಅನ್ವಯಿಸುತ್ತದೆ.

ಶಿವಯೋಗಿ ಸುಳಿದ ಸುಳುಹು ಜಗತ್ಪಾವನ,
ಮೆಟ್ಟಿದ ಧರೆಯೆಲ್ಲಾ ಪವಿತ್ರ,
ನಿಮಿಷವಿರ್ದಾ ಸ್ಥಲವೆಲ್ಲಾ ಅವಿಮುಕ್ತ ಕ್ಷೇತ್ರ.
ಹೊಕ್ಕ ಜಲವೆಲ್ಲಾ ಪುಣ್ಯತೀರ್ಥಂಗಳು.
ಏರಿದ ಬೆಟ್ಟವೆಲ್ಲಾ ಶ್ರೀಪರ್ವತ.
ಕೃಪೆಯಿಂದ ನೋಡಿದ ಜನರೆಲ್ಲ ಸಾಲೋಕ್ಯರು.
ಒಡನೆ ಸಂಭಾಷಣೆ ಮಾಡಿದವರೆಲ್ಲಾ ಸದ್ಯೋನ್ಮುಕ್ತರು.
ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರಾ,
ನಿಮ್ಮ ಸುಳುಹಿನ ಘನತೆಯನುಪಮಿಸಬಾರದು

ಸ್ವಾಮಿ ಸಿದ್ಧೇಶ್ವರಲಿಂಗರ ಮೇಲಿನ ವಚನ ಭರತಖಂಡದಲ್ಲಿ ಮಾತ್ರವಲ್ಲ, ಜಗತ್ತಿನಲ್ಲಿ ಜನ್ಮ ತಾಳಿದ ಎಲ್ಲ ಯೋಗಿಗಳಿಗೂ, ಸಿದ್ಧಪುರುಷರಿಗೂ, ಸಂತ ಕವಿಗಳಿಗೂ ಅನ್ವಯಿಸುತ್ತದೆ.

□

ರಕ್ಕಸಿಗಿಬ್ಬರು ಮಕ್ಕಳು; ತೊಟ್ಟಿಲ ಮೇಲೈವರು.
ರಕ್ಕಸಿ ಬಾಣತಿಯಾದಡೆ ಮಕ್ಕಳಿಗಿನ್ನೆಂತೊ!
ತೊಟ್ಟಿಲ ತೂಗುವೆ, ಜೋಗುಳವಾಡುವೆ.
ರಕ್ಕಸಿ-ಬಾಣತಿಯ ತೊಟ್ಟಿಲು ನುಂಗಿತ್ತು,
ಇದೇನು ಹೇಳಾ ಗುಹೇಶ್ವರಾ?
-ಅಲ್ಲಮಪ್ರಭು

# "ಭಾರತರತ್ನ" ಪ್ರೊ. ಸಿ.ಎನ್.ಆರ್. ರಾವ್

ಡಾ. ಶಂಕರ ರಾಮಚಂದ್ರ ಕಂದಗಲ್ಲ

ಅಂತಾರಾಷ್ಟ್ರೀಯ ಮಟ್ಟದಲ್ಲಿ ಶ್ರೇಷ್ಠ ರಸಾಯನ ವಿಜ್ಞಾನಿಯೆಂದು ಖ್ಯಾತನಾಮರಾದ ಪ್ರೊ. ಸಿ.ಎನ್.ಆರ್. ರಾವ್ ಭಾರತೀಯ ವಿಜ್ಞಾನ ಲೋಕದ ಅನರ್ಘ್ಯರತ್ನ. 2013 ನವೆಂಬರ್ 16 ರಂದು ಭಾರತದ ಅತ್ಯುಚ್ಚ ನಾಗರಿಕ ಪುರಸ್ಕಾರವಾದ 'ಭಾರತರತ್ನ' ಪದವಿಯನ್ನು ಸಿ.ಎನ್.ಆರ್. ರಾವ್ ಪಡೆದು ಇಡೀ ದೇಶದ ಗಮನ ಸೆಳೆದರು. ವಿಜ್ಞಾನ ಕ್ಷೇತ್ರಕ್ಕೆ "ಭಾರತ ರತ್ನ" ಪುರಸ್ಕಾರವನ್ನು ತಂದವರಲ್ಲಿ ಪ್ರೊ. ರಾವ್ ನಾಲ್ಕನೆಯವರು. ಈ ಮೊದಲು ಸರ್ ಸಿ.ವಿ. ರಾಮನ್, ಶ್ರೀ ಮೋಕ್ಷಗುಂಡಂ ವಿಶ್ವೇಶ್ವರಯ್ಯ ಮತ್ತು ಡಾ. ಎ.ಪಿ.ಜೆ. ಅಬ್ದುಲ್ ಕಲಾಂರವರು "ಭಾರತರತ್ನ" ಪುರಸ್ಕಾರಕ್ಕೆ ಭಾಜನರಾಗಿದ್ದಾರೆ.

ಚಿಂತಾಮಣಿ ನಾಗೇಶ ರಾಮಚಂದ್ರರಾವ್ ಎಂಬುದು ಪ್ರೊ. ಸಿ.ಎನ್.ಆರ್. ರಾವ್‌ರವರ ಪೂರ್ಣ ಹೆಸರು. ಈಗ ಅವರು ಪ್ರಧಾನಮಂತ್ರಿಗಳ ವೈಜ್ಞಾನಿಕ ಸಲಹಾ ಮಂಡಳಿಯ ಮುಖ್ಯಸ್ಥರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ವಿಶ್ವದ 60 ವಿಶ್ವವಿದ್ಯಾಲಯಗಳು ಪ್ರೊ. ರಾವ್ ಅವರಿಗೆ ಗೌರವ ಡಾಕ್ಟರೇಟ್ ನೀಡಿವೆ. ಸುಮಾರು 1,500 ಸಂಶೋಧನಾ ಲೇಖನಗಳನ್ನು, 45 ವಿಜ್ಞಾನ ಗ್ರಂಥಗಳನ್ನು ರಾವ್ ರಚಿಸಿದ್ದಾರೆ. ವಿಜ್ಞಾನದ ಹಲವಾರು ಪ್ರಮುಖ ಪದವಿ ಮತ್ತು ಪ್ರಶಸ್ತಿಗಳನ್ನು ಪ್ರೊ. ರಾವ್ ಸ್ವೀಕರಿಸಿದ್ದಾರೆ. ವಿಶ್ವದ ಹಲವಾರು ವಿಜ್ಞಾನ ಸಂಘಟನೆಗಳ ಸದಸ್ಯತ್ವ ಪಡೆದಿದ್ದಾರೆ. ಪದ್ಮಶ್ರೀ, ಪದ್ಮವಿಭೂಷಣ, ಕರ್ನಾಟಕ ರತ್ನ ಅಲ್ಲದೇ, ಇದೀಗ 'ಭಾರತರತ್ನ' ಪುರಸ್ಕಾರವನ್ನು ಪಡೆದು ಭಾರತೀಯ ವಿಜ್ಞಾನಲೋಕಕ್ಕೆ ಮೆರಗು ಮತ್ತು ಸಂಭ್ರಮಗಳನ್ನು ತಂದುಕೊಟ್ಟಿದ್ದಾರೆ.

## ಬಾಲ್ಯ ಮತ್ತು ಶಿಕ್ಷಣ

ಸಿ.ಎನ್.ಆರ್. ರಾವ್ ಕನ್ನಡಿಗರೆಂಬುದು ನಮ್ಮ ನಾಡಿನ ಹೆಮ್ಮೆ. 1934 ಜೂನ್ 20 ರಂದು ಬೆಂಗಳೂರಿನ ಕನ್ನಡಿಗ ಕುಟುಂಬವೊಂದರಲ್ಲಿ ರಾವ್ ಜನಿಸಿದರು. ನಾಗೇಶರಾವ್ ಮತ್ತು ನಾಗಮ್ಮ ದಂಪತಿಗಳ ಏಕಮೇವ ಸುಪುತ್ರ. ಪ್ರೊ. ರಾವ್ ಚಿಕ್ಕಂದಿನಲ್ಲಿ ತಂದೆತಾಯಿಗಳಿಂದ ಉತ್ತಮ ಶಿಕ್ಷಣ ಮತ್ತು ಸಂಸ್ಕಾರಗಳನ್ನು ಪಡೆದರು.

ತಾಯಿ ಹಿಂದೂ ಸಾಹಿತ್ಯ ಸಂಸ್ಕೃತಿಗಳ ಮನನ ಮಾಡಿಕೊಟ್ಟರೆ ತಂದೆ ಗಣಿತ ಮತ್ತು ಇಂಗ್ಲಿಷ್ ಭಾಷೆಯಲ್ಲಿ ಪ್ರೌಢಿಮೆ ದೊರಕಿಸಿಕೊಟ್ಟರು. ಜನನಿ ಜನಕರಿಂದ ಮನೆಯ ಮೊದಲ ಪಾಠಗಳನ್ನು ಕಲಿತ ಧನ್ಯರು ಇವರು. ಬೆಂಗಳೂರಿನ ಬಸವನಗುಡಿಯ ಆಚಾರ್ಯ ಪಾಠಶಾಲೆಯಲ್ಲಿ ಮಾಧ್ಯಮಿಕ ಶಿಕ್ಷಣ ಪಡೆದರು. ಮಾತೃಭಾಷೆಯಲ್ಲಿ ಅಂದರೆ ಕನ್ನಡ ಮಾಧ್ಯಮದಲ್ಲಿ ಅವರ ತಂದೆ ಶಿಕ್ಷಣ ಕೊಡಿಸಿದರು. 1947 ರಲ್ಲಿ ಉತ್ತಮ ಶ್ರೇಣಿಯಲ್ಲಿ ಅವರು ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ತೇರ್ಗಡೆಯಾದರು. ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ಬಿ.ಎಸ್ಸಿ. ಪದವಿ ಪಡೆದರು. ಪದವಿ ಅಧ್ಯಯನ ಮಾಡುವಾಗಲೇ ಅವರು ಇಂಗ್ಲಿಷ್ ಮತ್ತು ಸಂಸ್ಕೃತ ಭಾಷೆಯಲ್ಲಿ ಸಂವಹನ ಕೌಶಲ್ಯಗಳಲ್ಲಿ ಪರಿಣತರಾದರು. ಬಿ.ಎಸ್ಸಿ. ಪದವಿ ಪಡೆದಾಗ ಅವರ ವಯಸ್ಸು ಕೇವಲ 17 ವರ್ಷ. ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆಯಲ್ಲಿ ಅಧ್ಯಯನ ಮುಂದುವರಿಸುವ ಅಪೇಕ್ಷೆ ರಾವ್ ಅವರದಾಗಿತ್ತು. ಆದರೆ ಅವರ ಶಿಕ್ಷಕರು ಅವರ ಮನವೊಲಿಸಿ ಬನಾರಸ್ ಹಿಂದೂ ವಿಶ್ವವಿದ್ಯಾಲಯದಲ್ಲಿ ಅಧ್ಯಯನಕ್ಕೆ ಕಳುಹಿಸಿದರು. ಅವರು ಬನಾರಸ್ ಹಿಂದೂ ವಿಶ್ವವಿದ್ಯಾಲಯದಿಂದ ರಸಾಯನಶಾಸ್ತ್ರದಲ್ಲಿ ಎಂ.ಎಸ್ಸಿ. ಪಡೆದರು. ಅನಂತರ ಶಿಷ್ಯವೇತನ ಪಡೆದು ಖರಗ್‌ಪುರದ ಐ.ಐ.ಟಿ.ಯಲ್ಲಿ ಸಂಶೋಧನೆ ಮಾಡಿ ಪಿಎಚ್.ಡಿ ಪದವಿ ಪಡೆದರು. ಸಂಶೋಧನಾ ಕಾರ್ಯಕ್ಕೆ ಎಂ.ಐ.ಟಿ. ಕೊಲಂಬಿಯಾ ಮತ್ತು ಪರ್‌ಡ್ಯು ವಿಶ್ವವಿದ್ಯಾಲಯಗಳಿಂದ ಆರ್ಥಿಕ ಸಹಾಯ ಪಡೆದರು. ಪಿಎಚ್.ಡಿ. ಪದವಿ ಪಡೆದಾಗ ಅವರ ವಯಸ್ಸು 24 ವರ್ಷ.

**ವೃತ್ತಿಜೀವನ**

1959 ರಲ್ಲಿ ಬೆಂಗಳೂರಿಗೆ ಹಿಂತಿರುಗಿದ ರಾವ್ ಭಾರತೀಯ ವಿಜ್ಞಾನ ಸಂಸ್ಥೆಯಲ್ಲಿ ಉಪನ್ಯಾಸಕರಾಗಿ ವೃತ್ತಿಜೀವನ ಪ್ರಾರಂಭಿಸಿದರು. ಮೂರು ವರ್ಷಗಳ ನಂತರ ಅವರು ಖರಗ್‌ಪುರದ ಭಾರತೀಯ ತಂತ್ರಜ್ಞಾನ ಸಂಸ್ಥೆಯ (ಐ.ಐ.ಟಿ.) ರಸಾಯನಶಾಸ್ತ್ರ ವಿಭಾಗದ ಮುಖ್ಯಸ್ಥರಾಗಿ ನೇಮಕಗೊಂಡರು. 1964 ರಲ್ಲಿ ಸರ್ ಸಿ.ವಿ. ರಾಮನ್‌ರವರು ಇವರನ್ನು ಭಾರತೀಯ ಫೆಲೋ ಆಗಿ ಆಯ್ಕೆ ಮಾಡಿಕೊಂಡರು. ಅಲ್ಲಿ ಹಲವಾರು ವರ್ಷಗಳ ಸೇವೆ ಸಲ್ಲಿಸಿದ ಅವರು 1976 ರಲ್ಲಿ ಭಾರತೀಯ ವಿಜ್ಞಾನ ಸಂಸ್ಥೆಗೆ (ಐ.ಐ.ಎಸ್.ಸಿ.) ಮರಳಿದರು. ಅಲ್ಲಿ ಹೊಸದಾಗಿ "ಘನಸ್ಥಿತಿ ಮತ್ತು ರಾಚನಿಕ ರಸಾಯನಶಾಸ್ತ್ರ ಘಟಕ"ವನ್ನು ಕಟ್ಟಿ ಶ್ಲಾಘನೀಯ ಕಾರ್ಯ ನಿರ್ವಹಿಸಿದರು. 1984 ರಲ್ಲಿ ಭಾರತೀಯ ವಿಜ್ಞಾನ ಸಂಸ್ಥೆಯ ನಿರ್ದೇಶಕ ಹುದ್ದೆಯನ್ನೇರಿದರು. 1994 ರವರೆಗೆ ಇಲ್ಲಿ ಅವರು ಕಾರ್ಯ ನಿರ್ವಹಿಸಿದರು. ನಂತರ ಆಕ್ಸ್‌ಫರ್ಡ್, ಕೇಂಬ್ರಿಜ್, ಕ್ಯಾಲಿಫೋರ್ನಿಯ ಮುಂತಾದ ವಿಶ್ವವಿದ್ಯಾನಿಲಯಗಳಲ್ಲಿ ಸಂದರ್ಶಕ ಪ್ರಾಧ್ಯಾಪಕರಾಗಿ ಕೆಲಸ ಮಾಡಿದರು.



ಇದೀಗ ಪ್ರೊ. ರಾವ್ ಅವರು ರಾಷ್ಟ್ರೀಯ ಸಂಶೋಧನಾ ಪ್ರಾಧ್ಯಾಪಕರಾಗಿ, ಲೀನಸ್ ಪಾಲಿಂಗ್ ಸಂಶೋಧನಾ ಪ್ರಾಧ್ಯಾಪಕರಾಗಿ ಮತ್ತು ಬೆಂಗಳೂರಿನ ಜವಾಹರಲಾಲ್ ನೆಹರೂ ಉನ್ನತ ಸಂಶೋಧನಾ ಕೇಂದ್ರದ ಗೌರವಾಧ್ಯಕ್ಷರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಜವಾಹರಲಾಲ್ ನೆಹರೂ ಉನ್ನತ ವಿಜ್ಞಾನ ಸಂಶೋಧನಾ ಕೇಂದ್ರವನ್ನು ಅವರೇ ಸ್ವತಃ ಮುತುವರ್ಜಿ ವಹಿಸಿ ಸ್ಥಾಪಿಸಿದರೆಂಬುದು ಗಮನಾರ್ಹ. 1985-89 ರ ಅವಧಿಯಲ್ಲಿ ಪ್ರಧಾನಮಂತ್ರಿಗಳ ವೈಜ್ಞಾನಿಕ ಸಲಹಾ ಮಂಡಳಿಯ ಮುಖ್ಯಸ್ಥರಾಗಿ ಕಾರ್ಯ ನಿರ್ವಹಿಸಿದ್ದ ರಾವ್ ಅವರು ಪುನಃ 2005 ರಲ್ಲಿ ಅದೇ ಹುದ್ದೆಗೆ ನೇಮಕವಾಗಿ ಕಾರ್ಯ ನಿರ್ವಹಿಸುತ್ತಿರುವುದು ಅವರ ಕಾರ್ಯಸಾಮರ್ಥ್ಯ ಮತ್ತು ದಕ್ಷತೆಗಳಿಗೆ ಸಂದ ಗೌರವವಾಗಿದೆ. ಇದಲ್ಲದೆ ಅವರು ಅಂತಾರಾಷ್ಟ್ರೀಯ ಪದಾರ್ಥ ವಿಜ್ಞಾನ ಕೇಂದ್ರದ (International Centre for Material Science) ನಿರ್ದೇಶಕರಾಗಿರುವುದು ಕೂಡ ಹೆಮ್ಮೆಯ ಸಂಗತಿ.

**ರಾವ್ ಅವರ ಕೌಟುಂಬಿಕ ಜೀವನ**

1960 ರಲ್ಲಿ ರಾವ್ ಅವರು ಇಂದುಮತಿಯವರನ್ನು ಕೈಹಿಡಿದು ದಾಂಪತ್ಯಜೀವನಕ್ಕೆ ಕಾಲಿಟ್ಟರು. ಅವರಿಗೆ ಸಂಜಯ ಮತ್ತು ಸುಚಿತ್ರಾ ಎಂಬ ಇಬ್ಬರು ಮಕ್ಕಳಿದ್ದಾರೆ. ಮಗ ಸಂಜಯ ಬೆಂಗಳೂರಿನ ಶಾಲಾಕಾಲೇಜುಗಳಲ್ಲಿ ವಿಜ್ಞಾನವನ್ನು ಜನಪ್ರಿಯಗೊಳಿಸುವ ಕಾರ್ಯದಲ್ಲಿ ತೊಡಗಿಸಿಕೊಂಡಿದ್ದಾರೆ. ಮಗಳು ಸುಚಿತ್ರಾ ಪುಣೆಯ ಭಾರತೀಯ ವಿಜ್ಞಾನ ಶಿಕ್ಷಣ ಮತ್ತು ಸಂಶೋಧನಾ ಸಂಸ್ಥೆಯ ನಿರ್ದೇಶಕ ಶ್ರೀ ಕೆ.ಎಂ. ಗಣೇಶ್‌ರವರನ್ನು ಮದುವೆಯಾಗಿ ಮಹಾರಾಷ್ಟ್ರದಲ್ಲಿ ನೆಲೆಸಿದ್ದಾರೆ. ರಾವ್ ಅವರು ಆಧುನಿಕ ಸಂಪರ್ಕಸಾಧನಗಳಿಂದ ಬಲುದೂರ. ಕಂಪ್ಯೂಟರನ್ನು ತಮ್ಮ ಮೇಜಿನಿಂದ ದೂರ ಸರಿಸಿರುವ ರಾವ್ ಅವರು ತಾವೇ ಸ್ವತಃ ಇಮೇಲ್‌ಗಳನ್ನು ನೋಡುವುದಿಲ್ಲ. ಬಹುತರವಾಗಿ ಅವರು ಮೊಬೈಲ್ ಬಳಸುವುದು ತಮ್ಮ ಪತ್ನಿಯನ್ನು ಸಂಪರ್ಕಿಸಲು ಮಾತ್ರ ಎಂದು ಹೇಳುವುದುಂಟು.

□

# ಡಾ. ಜಿ.ಎಸ್. ಶಿವರುದ್ರಪ್ಪನವರ ಕಾವ್ಯಾನುಸಂಧಾನ

**ಪ್ರೊ. ಸಿ.ಪಿ. ಸಿದ್ಧಾಶ್ರಮ**

(ಹಿಂದಿನ ಸಂಚಿಕೆಯಿಂದ)

ಭಾರತೀಯರು ಮೊದಲಿನಿಂದಲೂ ಸ್ವೋಪಜ್ಞತೆಯನ್ನು ಮರೆಯದೆ ಅನ್ಯದೇಶೀಯತೆಯನ್ನು ನಚ್ಚುವ, ಮೆಚ್ಚುವ, ಒಪ್ಪುವ ಪರಾವಲಂಬಿ ಜೀವಿಗಳು. ಭಾರತಕ್ಕೆ ಸ್ವಾತಂತ್ರ್ಯ ಬಂದಿದ್ದರೂ ಆ ಸ್ವಾತಂತ್ರ್ಯದ ಅರ್ಥವನ್ನು ಅರಿಯದ, ಆಚರಿಸಲಾರದ ತಿಳಿಗೇಡಿಗಳು. ಬ್ರಿಟಿಷರು ಭಾರತವನ್ನು ಬಿಟ್ಟು ತೊಲಗಿದ್ದರೂ ಗುಲಾಮಗಿರಿಯಿಂದ ನಾವು ಮುಕ್ತಿ ಪಡೆಯದ ಜನ. ರಾಜಪ್ರಭುತ್ವವಿದ್ದಾಗ ಸರ್ವಾಧಿಕಾರದ ಅಡಿಯಲ್ಲಿ ಆಳಾಗಿ, ಗುಲಾಮರಾಗಿ ಬದುಕಿದ ನಾವು ಬ್ರಿಟಿಷ್‌ನವರು ನಮ್ಮನ್ನು ಆಳುತ್ತಿದ್ದಾಗಲೂ ಅವರ ಸರ್ವಾಧಿಕಾರವನ್ನು ಒಪ್ಪಿ ಅವರ ಗುಲಾಮರಂತೆ ಇದ್ದವರು. ಮಹಾತ್ಮ ಗಾಂಧೀಜಿಯವರ ಅಹಿಂಸಾತ್ಮಕ ಹೋರಾಟದಿಂದ ರಾಜಕೀಯ ಸ್ವಾತಂತ್ರ್ಯ ಲಭಿಸಿದರೂ ಅದನ್ನು ಅರಿತು ಆಚರಿಸದೆ ನಡೆನುಡಿಯಲ್ಲಿ ಅನ್ಯದೇಶೀಯತೆಯನ್ನೇ ರೂಢಿಸಿಕೊಂಡ ಮೂರ್ಖರು, ನಾವು:

ನಾವು ಗುಲಾಮರು, ನಮಗೆಂದಿಗೂ
ಬೇಕಾಗಿಲ್ಲ ಬಿಡುಗಡೆ, ನಾವು ಹುಟ್ಟು
ಗುಲಾಮರು; ನಮ್ಮದಲ್ಲದ ನೊಗವ
ಸದಾ ಹೆಗಲಲ್ಲೆ ಹೊತ್ತು ಮೆರೆಯುವವರು

ಶತಮಾನಗಳ ಕಾಲ ಕೊರಳ ಪಟ್ಟಿಯಲ್ಲೇ
ಬೆಳೆದ ನಾಯಿಗಳು ನಾವು, ಬಿಚ್ಚಿದರೂ
ಮತ್ತೆ ಅಭ್ಯಾಸಬಲದಿಂದ ಅಲ್ಲೇ ನಿಂತು
ಟೇಬಲ್ಲಿನಿಂದುದುರುವೆಂಜಲಿಗಾಗಿ
ನಾಲಗೆ ಚಾಚಿ ನಿಂತ ಸೊಣಗಗಳು ನಾವು
ಶುದ್ಧ ಗುಲಾಮರು

ಇಲ್ಲ, ನಮಗೆ ನಾಚಿಕೆಯಿಲ್ಲ; ನಾಚಿಕೆ
ಯೆಂದರೇನೆಂದೂ ನಮಗೆ ಗೊತ್ತಿಲ್ಲ
ಹೊತ್ತುಹೊತ್ತಿಗೆ ಕತ್ತೆಯ ಕಾಲು ಹಿಡಿದು
ಬೆಲೆಯಿದ್ದವರನ್ನೆಲ್ಲ ಕೊಲೆ ಮಾಡಿ ಬಡಿದು
ದೊಡ್ಡ ಮಾತುಗಳ ಹಲಗೆ ಹಿಡಿದು ಕುಣಿ



ದಿದ್ದೇವೆ, ನಮ್ಮತನವೆಲ್ಲವನ್ನೂ ಹರಾಜಿಗಿಟ್ಟು
ನಿಂತಿದ್ದೇವೆ ಸ್ವಾಮಿ, ನಾವು ಗುಲಾಮರು (ಗುಲಾಮರು-ತೆರೆದ ದಾರಿ)

ಎಂದು ಮುಂತಾಗಿ ಕವಿ ಶಿವರುದ್ರಪ್ಪನವರು ಖೇದದಿಂದ ನುಡಿದಿರುವುದು ಭಾರತೀಯರ ಗುಲಾಮಗಿರಿತನವನ್ನು ಬೆತ್ತಲು ಮಾಡುತ್ತದೆ.

ನಡೆ-ನುಡಿ, ಆಚಾರ-ವಿಚಾರ, ಸಂಸ್ಕೃತಿ-ವಿದ್ಯೆ ವಿಚಾರಗಳಲ್ಲಿ ದೇಶೀಯತೆಯನ್ನೇ ರೂಢಿಸಿಕೊಂಡು ನಮ್ಮ ಸ್ವಂತಿಕೆ, ಸ್ವೋಪಜ್ಞತೆಯನ್ನು ಮೈಗೂಡಿಸಿಕೊಂಡು ಜನ, ರಾಷ್ಟ್ರ ಸ್ವಾವಲಂಬಿಯಾಗಿ ದೇಶ ಸಮೃದ್ಧಿಯ ಹಾದಿಯಲ್ಲಿ ಸಾಗಿ ತಲೆಯೆತ್ತಿ ನಿಲ್ಲಬೇಕೆಂಬುದು ಸ್ವತಂತ್ರ ಭಾರತದ ಕನಸಾಗಿತ್ತು. ಆದರೆ ದೇಶಕ್ಕೆ ರಾಜಕೀಯ ಸ್ವಾತಂತ್ರ್ಯ ಲಭಿಸಿದರೂ ಅನ್ಯದೇಶೀಯವಾದುದೇ ಪರಮ ಶ್ರೇಷ್ಠವೆಂಬ ಭ್ರಮೆಯಲ್ಲಿ ಮುಳುಗಿರುವ ನಾಡು ಮತ್ತು ಜನತೆ ಮತ್ತೆ ಮತ್ತೆ ಸಾಂಸ್ಕೃತಿಕ ಗುಲಾಮಗಿರಿತನಕ್ಕೆ ಶರಣಾಗುತ್ತಿರುವುದನ್ನು ಅರಿತು ಕವಿಹೃದಯ ಮೇಲಿನಂತೆ ನೊಂದು ನುಡಿದಿರುವುದು ಅರ್ಥಪೂರ್ಣವಾಗಿದೆ. 'ಶತಮಾನಗಳ ಕಾಲ ಕೊರಳಪಟ್ಟಿಯಲ್ಲೇ ಬೆಳೆದ ನಾಯಿಗಳು ನಾವು' ಎಂಬ ಮಾತು ನಮ್ಮ ರಾಜಕೀಯ ಹಾಗೂ ಸಾಂಸ್ಕೃತಿಕ ಗುಲಾಮಗಿರಿಯನ್ನು ಸಶಕ್ತವಾಗಿ ರೂಪಕದ ಮೂಲಕ ಹಿಡಿದಿಟ್ಟಿದೆಯೆನ್ನಬೇಕು.

ನಾವು ಸೆಂಟ್ ಪರ್ಸೆಂಟ್ ಗುಲಾಮರು ಪೂರ್ವದಿಂದ
ಪಶ್ಚಿಮಕ್ಕೆ ಅಗ್ಗದ ಬಟ್ಟೆಯ ಮಗ್ಗದಲ್ಲಿ ಸದಾ
ಲಾಳಿಯಾಡುವ ಮಂದಿ, ಇದ್ದ ಆತ್ಮವನು ಕುತ್ತಿಗೆ
ಹಿಸುಕಿ, ವಿಲಾಯಿತಿಯ ಹುಲ್ಲನ್ನು ತುರುಕಿ
ನಿಲ್ಲಿಸಿದ ಬೆದರುಬೊಂಬೆಗಳು ನಾವು
ಶುದ್ಧ ಗುಲಾಮರು, ನಾವು ಶುದ್ಧ ಗುಲಾಮರು (ಅದೇ)

ಕವಿಯ ಈ ಮಾತುಗಳು ಭಾರತೀಯರು ತಮ್ಮ ಸ್ವಂತಿಕೆಯ ಆತ್ಮವನ್ನು ನಾಶಮಾಡಿ ಪರಕೀಯತೆ, ಅನ್ಯದೇಶೀಯತೆಯನ್ನು ಮೈಮನಗಳಲ್ಲಿ ಆವಾಹಿಸಿಕೊಂಡು ಬೆದರುಗೊಂಬೆಗಳಾದ, ಗುಲಾಮರಾದ ಸ್ಥಿತಿಯನ್ನು ಖೇದದಿಂದ ಅನಾವರಣ ಮಾಡಿರುವುದನ್ನು ನೋಡಬಹುದಾಗಿದೆ.

'ಹಣತೆ' ಎಂಬ ಕವನ ಮುರುಕು ಗುಡಿಸಲಲ್ಲಿ ಬೆಳಗುವ ಕಿರುಹಣತೆಯ ಮಹಿಮೆಯನ್ನು ಕುರಿತದ್ದು. ಈ ಹಣತೆ ಬಡವರ ಆತ್ಮದ ಸಂಕೇತ.

ಈ ಮುರುಕು ಗುಡಿಸಲಲಿ
ಕಿರಿಹಣತೆ ಬೆಳಗುತಿದೆ
ಧ್ಯಾನಸ್ಥ ಯೋಗಿಯೊಲು ಸ್ತಿಮಿತವಾಗಿ
ಬಡವರಾತ್ಮದ ಹಣತೆ
ಇಂತೆ ಬೆಳಗುವುದಲ್ತೆ
ಅಜ್ಞಾತವಾಸದಲಿ ದೀನವಾಗಿ

ಅಲ್ಲಿ ಸೌಧಗಳಲ್ಲಿ
ಬೀದಿ ಸಾಲುಗಳಲ್ಲಿ
ಮಿಂಚುಸೊಡರುಗಳೆನಿತೊ ಶೋಭಿಸಿರೆ ಕೋಟಿ
ಧ್ಯಾನಗಾಂಭೀರ್ಯದಲಿ
ಮತ್ತೆ ಸರಳತೆಯಲ್ಲಿ
ಯಾವುದೀ ಬಡಗುಡಿಸಲ ಸೊಡರಿಗೆ ಸಾಟಿ ? (ಹಣತೆ-ಸಾಮಗಾನ)

ಈ ದೇಶದ ಬಡವರ ಆತ್ಮದ ಸಂಕೇತವಾಗಿ ಮುರುಕು ಗುಡಿಸಲಲ್ಲಿ ಸಣ್ಣಗೆ ಬೆಳಗುವ ಕಿರುಹಣತೆ ಧ್ಯಾನಸ್ಥ ಯೋಗಿಯಂತೆ ತನ್ನ ಪಾಡಿಗೆ ತಾನು ಇರುವಂಥದ್ದು. ಗುಡಿಸಲಿನ ಈ ಹಣತೆ ಗುಡಿಸಲಿನಲ್ಲಿ, ಕೊಳೆಗೇರಿಯಲ್ಲಿ ವಾಸಮಾಡುವ ಬಡವರ, ದೀನದಲಿತರ, ಶ್ರಮಜೀವಿಗಳ ಸಂಕೇತ. ಈ ತಳಮೂಲ ಶ್ರಮಸಂಸ್ಕೃತಿಯ ಜನರಿಂದಲೇ ಈ ಜಗತ್ತು ಅಭಿವೃದ್ಧಿ ಹೊಂದಿರುವುದು, ಹೊಂದುತ್ತಿರುವುದು. ಆದರೆ ಈ ಕಾಯಕಜೀವಿಗಳಿಗೆ ಅವರ ಶ್ರಮಕ್ಕೆ ಪ್ರತಿಯಾಗಿ ಸರಿಯಾದ ಫಲ ದೊರಕದೆ ಬಂಡವಾಳಶಾಹಿಗಳು, ಧನಿಕರು, ಅಧಿಕಾರಿಗಳು, ಅಧಿಕ ಫಲವನ್ನು ಮೋಸದಲ್ಲಿ ಕಬಳಿಸಿಬಿಡುವುದರಿಂದ ದೇಶ ಬೆಳಗುವ ಈ ಬಡವರೆಂಬ ಕಿರುಹಣತೆಗಳು ಅರೆಹೊಟ್ಟೆಯಲ್ಲಿ ಕುಟುಕುಜೀವ ಹಿಡಿದುಕೊಂಡು ಬದುಕುತ್ತಿವೆ.

ಆದರೆ ಸುಂದರ ಸೌಧಗಳಲ್ಲಿ ಬೆಡಗಿನ ದೀಪಗಳು ಪ್ರಜ್ವಲಿಸುವುದು ಶ್ರೀಮಂತರ ಶ್ರೀಮಂತಿಕೆಯ ಕುರುಹಾಗಿದೆ. ಹೀಗೆ ಬಡವ-ಬಲ್ಲಿದರ ನಡುವಣ ಅಂತರ ಹೆಚ್ಚುತ್ತಲೇ ಸಾಗಿರುವುದು ಈ ದೇಶದ ದೊಡ್ಡ ದುರಂತವೇ ಸರಿ.

ಅನಾಥ ವೃದ್ಧೆಯ ದೀನ ಸ್ಥಿತಿಯನ್ನು ಕಟ್ಟಿಕೊಡುವ ಒಂದು ಉತ್ತಮ ಕವನ 'ಮುದುಕಿ'. ಕವನದ ಮೊದಲೆರಡು ನುಡಿಗಳಲ್ಲಿ ಮುದುಕಿಯ ವೃದ್ಧಾಪ್ಯದ ಕರುಣಾಜನಕ ಸ್ಥಿತಿಯನ್ನು ಕಟ್ಟಿಕೊಡುವ ಕವಿ, ಕೊನೆಯಲ್ಲಿ-

ಯಾವ ಊರೋ ಎಲ್ಲಿಯವಳೋ !
ಎಲ್ಲಿಗಿಂತು ಸಾಗುತಿಹಳೊ
ನನಗೆ ಮಾತ್ರ ಜಗದ ಜೀವ
ನಡೆಯುವಂತೆ ತೋರಿದೆ
ಅರಿಯದಿರುವ ಭಾವವೊಂದು
ಎದೆಯನೆಲ್ಲ ಕಲಕಿ ನಿಂದು
ನಿಷ್ಕಾರಣದೊಲವು ಮೂಡಿ
ಕಣ್ಣು ಹನಿಯ ತುಂಬಿದೆ (ಮುದುಕಿ-ಸಾಮಗಾನ)

ಎಂದು ನುಡಿದಿರುವುದು ಅರ್ಥಪೂರ್ಣವಾಗಿದೆ. 'ಜಗದ ಜೀವ ನಡೆಯುವಂತೆ' ಈ ಮುದುಕಿ ಕವಿಗೆ ತೋರಿರುವುದು ಗಮನಾರ್ಹ ಸಂಗತಿಯಾಗಿದೆ. ಈ ಮುದುಕಿ ಅಪರಿಚಿತೆ ಮತ್ತು ಅನಾಥೆ. ಈಕೆಯ ದೈನ್ಯ ಸ್ಥಿತಿಯನ್ನು ಕಂಡು, ಕವಿಹೃದಯ ಕಲುಕಿ ಕಣ್ಣು



ಹನಿದುಂಬುವುದು ಇಲ್ಲಿನ ಮುಖ್ಯ ಸಂಗತಿ. ಏಕೆಂದರೆ ವೈಯಕ್ತಿಕ ಸಂಬಂಧದ ನೆಲೆಯಲ್ಲಿ ಮಾತ್ರ ನೋವು ಸಂಕಟ ಎದುರಾದಾಗ ನಮ್ಮ ಹೃದಯ ದುಃಖಕ್ಕೆ ಈಡಾಗುವುದು ಸಹಜ. ಆದರೆ ಇಲ್ಲಿ ಕವಿಹೃದಯ ಅಪರಿಚಿತ ವೃದ್ಧೆಯ ನೋವಿಗೆ, ಅನಾಥ ಸ್ಥಿತಿಗೆ ಮರುಗಿ ಕಣ್ಣೀರು ಮಿಡಿದಿರುವುದು ಅವರ ಹೃದಯವೈಶಾಲ್ಯಕ್ಕೆ ಹಿಡಿದ ಕನ್ನಡಿಯಾಗಿದೆ. ಮುದುಕಿ ಅಪರಿಚಿತಳಾದರೂ ಅವಳ ನೋವು ದುಃಖ ನಮ್ಮದೂ ಆಗುವುದು, ಮುದುಕಿ ನಮ್ಮ ಅಜ್ಜಿಯೋ, ತಾಯಿಯೋ ಆಗುವುದು ಬಹಳ ಮುಖ್ಯ. ಇನ್ನೊಬ್ಬರ ದುಃಖ ನೋವುಗಳು ಹೀಗೆ ನಮ್ಮದಾಗುವುದು, ಆ ನೋವನ್ನು ದೂರ ಮಾಡಲು ಮುಂದಾಗುವುದು ಇಂದಿನ ಅಗತ್ಯವಾಗಿದೆ. ಕವಿಹೃದಯ ಆ ನಿಟ್ಟಿನಲ್ಲಿ ಚಿಂತಿಸಿರುವುದು ಇಲ್ಲಿನ ವಿಶೇಷ.

ಈ ಭಾವದ ಮುಂದುವರಿಕೆಯಾಗಿ 'ಕಣ್ಣೀರು' ಎಂಬ ಕವನ ರಚಿತವಾಗಿದೆ ಎನ್ನಬಹುದು. ಇಲ್ಲಿ 'ಕಣ್ಣೀರು' ಎಂಬುದು ನೋವಿನ, ದುಃಖದ ಸಂಕೇತ ಮಾತ್ರವಲ್ಲ, ಕರುಣೆಯ, ಪ್ರೀತಿಯ ಸಂಕೇತವೂ ಆಗಿದೆ.

ಕಣ್ಣೀರ ಹನಿಯಲ್ಲಿ ಮೊಗದ ನಗೆಯನು ಕಂಡೆ
ಕಣ್ಣೀರ ಹನಿಯಲ್ಲಿ ಜಗದ ಹೃದಯವ ಕಂಡೆ
ಕಣ್ಣೀರಿನಲಿ ವಿವಿಧ ಅನುಭವದ ಸವಿಯುಂಡೆ
ಕಣ್ಣೀರಿಗಿಂತ ಮಿಗಿಲು ತತ್ವಬೋಧಕರಿಲ್ಲ
ಮುನ್ನೀರು ಎಂಬುದು ಕಣ್ಣೀರೆ ಎಲ್ಲ ! (ಕಣ್ಣೀರು-ಸಾಮಗಾನ)

ಎಂಬಲ್ಲಿ ಈ ಭಾವ ಧ್ವನಿಪೂರ್ಣವಾಗಿ ವ್ಯಕ್ತವಾಗಿದೆ. 'ಕಣ್ಣೀರಿಗಿಂತ ಮಿಗಿಲು ತತ್ವಬೋಧಕರಿಲ್ಲ' ಎಂದಿರುವುದು ಕವಿಯು ಬದುಕಿನಲ್ಲಿ ಕಂಡುಕೊಂಡ ಸತ್ಯವಾಗಿದೆ.

'ನನ್ನ ಹಣತೆ' ಕವನ ಅಜ್ಞಾನದ ಕತ್ತಲನ್ನು ಸ್ವಲ್ಪವಾದರೂ ಸರಿಸಲು ಅರಿವಿನ ಹಣತೆಯ ಅವಶ್ಯಕತೆ ಇರುವುದನ್ನು ತಿಳಿಸುತ್ತದೆ.

ಹಿಂದೆ ಎಷ್ಟೋ ಜನ ಚಿಂತಕರು, ಸುಧಾರಕರು, ತತ್ವಜ್ಞಾನಿಗಳು, ವಿಜ್ಞಾನಿಗಳು ಜಗವನ್ನು ಆವರಿಸಿರುವ ಅಜ್ಞಾನದ ಕತ್ತಲನ್ನು ನಿವಾರಿಸಲು ಶ್ರಮಪಟ್ಟಿದ್ದರೂ 'ಕೊನೆಯಿರದ ಬಾಯಾರಿಕೆ' ಯನ್ನು ಉಸಿರಾಡುತ್ತಿರುವ ಈ ಕತ್ತಲು, ಬೆಳಕಿನ ಎಲ್ಲ ಕಿರಣಗಳನ್ನೂ ನುಂಗಿ ನೊಣೆದಿರುವುದು ಕವಿಗೂ ತಿಳಿದಿದೆ.

ಆದರೂ ಹಣತೆ ಹಚ್ಚುತ್ತೇನೆ ನಾನೂ,
ಕತ್ತಲೆಯನ್ನು ದಾಟುತ್ತೇನೆಂಬ ಭ್ರಮೆಯಿಂದಲ್ಲ
ಇರುವಷ್ಟು ಹೊತ್ತು ನಿನ್ನ ಮುಖ ನಾನು, ನನ್ನ ಮುಖ ನೀನು
ನೋಡಬಹುದೆಂಬ ಒಂದೇ ಒಂದು ಆಸೆಯಿಂದ (ನನ್ನ ಹಣತೆ-ಗೋಡೆ)

ಎಂದು ನುಡಿದಿರುವುದು ಗಮನಿಸತಕ್ಕ ಸಂಗತಿಯಾಗಿದೆ. ಇಂದು ಮನುಷ್ಯ ತಾನೇ ಸೃಷ್ಟಿಸಿಕೊಂಡ ಜಾತಿಭೇದ, ವರ್ಗಭೇದ, ಮತಭೇದಗಳೆಂಬ ಹಲವು ಭೇದ-ಭಾವಗಳ

ಕತ್ತಲಿನಲ್ಲಿ ಕಳೆದುಹೋಗಿದ್ದಾನೆ. ಈ ವಿವಿಧ ಬಗೆಯ ಕತ್ತಲನ್ನು ಒಂದೇ ಬಾರಿಗೆ ನಿವಾರಿಸುತ್ತೇನೆಂಬ ಭ್ರಮೆ ಕವಿಗೂ ಇಲ್ಲ. ಆದರೆ ಬದುಕಿರುವವರೆಗೆ ಪರಸ್ಪರ ಮುಖ ನೋಡಿಕೊಂಡು ಬದುಕಬೇಕಲ್ಲ! ಈ ಭೇದಭಾವದ ಅಜ್ಞಾನದ ಕತ್ತಲಿನಲ್ಲಿ ಎದುರಿಗಿರುವ ಮನುಷ್ಯನ ಮುಖ ಕಾಣಲಾದರೂ ಬೆಳಕು ಬೇಕಲ್ಲ! ಅಷ್ಟು ಮಾತ್ರಕ್ಕಾದರೂ ತಾವೂ ಹಚ್ಚುವ ಕಿರುಹಣತೆಯ ಬೆಳಕಿನ ಅವಶ್ಯಕತೆ ಇದೆ ಎಂದು ಕವಿ ನುಡಿಯುವುದು ಅರ್ಥಪೂರ್ಣ. ಪ್ರತಿಯೊಬ್ಬರೂ ಇಂಥ ಹಣತೆಯನ್ನು ಹಚ್ಚುವ ಸಣ್ಣ ಕೈಂಕರ್ಯದಲ್ಲಿ ತೊಡಗಿದರೆ ನಮ್ಮನ್ನು ಆವರಿಸಿರುವ ಅಜ್ಞಾನದ ಕತ್ತಲು ಸ್ವಲ್ಪ ಮಟ್ಟಿಗಾದರೂ ಸರಿದು ನಮ್ಮ ಮುಖವನ್ನು ನಾವು ಪರಸ್ಪರ ನೋಡಿಕೊಳ್ಳಲು ಸಾಧ್ಯವಾಗಬಹುದು ಎಂಬುದು ಕವಿಯ ಆಶಯವಾಗಿದೆ. 'ವ್ಯರ್ಥ' ಎಂಬ ಕವಿತೆಯ ಆಶಯವೂ ಇದೇ ಆಗಿದೆ.

> ಇಲ್ಲ, ನಾವೂ ನೀವೂ ಸೇರಲೇ ಇಲ್ಲ;
> ಮುಖಕ್ಕೆ ಮುಖ, ಎದೆಗೆ ಎದೆ ಹತ್ತಿರ ತಂದು
> ಮಾತಾಡಲೇ ಇಲ್ಲ (ವ್ಯರ್ಥ-ಗೋಡೆ)

ಮುಖಕ್ಕೆ ಮುಖ ಕೊಡುವ, ಎದೆಗೆ ಎದೆ ಕೊಡುವ ಕಾರ್ಯವನ್ನು ಮನುಷ್ಯ ಮಾಡದೆ ಇರುವ ದುರಂತವನ್ನು ಇದು ತಿಳಿಸುತ್ತದೆ. ಕವಿತೆಯ ಮುಂದಿನ ಭಾಗದಲ್ಲಿ

> ಮುಚ್ಚಿದ ಕಿಟಕಿ ಬಾಗಿಲಿನ ಮನೆಯ ಹೊಗೆಹಿಡಿದ ಒಡೆದ ಕನ್ನಡಿಯಲ್ಲಿ
> ಮುಖ ನೋಡಿಕೊಳ್ಳುತ್ತ, ಅರಳುವ ಪ್ರೀತಿಯ ಮೊಗ್ಗುಗಳನ್ನು
> ನಾಶ ಮಾಡುತ್ತ, ಉರಿವ ಅರಿವಿನ ಹಣತೆಗಳನ್ನು ನಂದಿಸುತ್ತ
> ಕತ್ತಲಲ್ಲೆ ತಡಕಾಡಿಕೊಂಡು ಕುಳಿತಿರುವ ನಾವು
> 'ರಾಂಗ್ ನಂಬರಿಗೆ ಟೆಲಿಫೋನು ಮಾಡಿ
> ಉತ್ತರಕ್ಕೆ ಕಾಯುತ್ತ ಕೂರುತ್ತೇವೆ' (ಅದೇ)

ಎಂದು ನುಡಿದಿರುವುದು, ಪರಸ್ಪರ ಪ್ರೀತಿ, ವಿಶ್ವಾಸದ ನೆಲೆಯಲ್ಲಿ ಸಂಬಂಧವನ್ನು ಸ್ಥಾಪಿಸಿಕೊಳ್ಳಲಾರದ ಮನುಷ್ಯನ ಎಡಬಿಡಂಗಿತನವನ್ನು, ಸ್ವಾರ್ಥ, ಸಂಕುಚಿತ ದೃಷ್ಟಿಕೋನವನ್ನು ವ್ಯಂಜಿಸಿದೆ.

'ಗೋಡೆ'ಕವನದ ಆಶಯವೂ ಇದೇ ಆಗಿದ್ದು ಇದು ಶಿವರುದ್ರಪ್ಪನವರ ಮಹತ್ವದ ಕವನಗಳಲ್ಲಿ ಒಂದಾಗಿದೆ.

> ಒಂದೊಂದು ಸಲ ನನಗೂ ನಿನಗೂ ನಡುವೆ
> ಇದ್ದಕ್ಕಿದ್ದಂತೆ ಗೋಡೆ ಏಳುತ್ತದೆ
> ಎಲ್ಲಿಂದಲೋ ಏನೊ ಇಟ್ಟಿಗೆಯ ಮೇಲೆ ಇಟ್ಟಿಗೆ ಬಂದು
> ಕೂತುಕೂತಲ್ಲಿಯೇ ನಮ್ಮನ್ನು ಹೂತು
> ಸುತ್ತಲೂ ಗೋಡೆ ಕಟ್ಟುತ್ತವೆ
> ಎದ್ದ ಗೋಡೆಯ ತುಂಬ ಕೆಂಗಣ್ಣು ಕೆಮ್ಮೀಸೆ



> ಮೀಸೆಯ ಕೆಳಗೆ ಸೊಟ್ಟ ಮೂತಿಯ ಕೆಟ್ಟ ಬಾಯಿ
> ಉರಿಯುತ್ತದೆ ಬೆಂಕಿ (ಗೋಡೆ-ಗೋಡೆ)

ವ್ಯಕ್ತಿವ್ಯಕ್ತಿಗಳ ನಡುವೆ ಸಲ್ಲದ ಕಾರಣಗಳಿಗಾಗಿ ಏಳುವ ವಿವಿಧ ಭೇದಭಾವದ ಗೋಡೆಗಳು ಹೇಗೆ ಪರಸ್ಪರ ಪ್ರೀತಿ ವಿಶ್ವಾಸದ ಮಾನವಸಂಬಂಧಗಳನ್ನು ಹಾಳುಮಾಡಿ ಸಂದೇಹ, ನೋವು, ಖಿನ್ನತೆಯನ್ನು ಹುಟ್ಟುಹಾಕುತ್ತವೆ ಎಂಬುದನ್ನು ಇಲ್ಲಿ ಕಟ್ಟಿಕೊಡಲಾಗಿದೆ. ವ್ಯಕ್ತಿಗಳ ಮಧ್ಯ ಎದ್ದಿರುವ ಗೋಡೆಗೆ ಎಷ್ಟೋ ಸಲ ಸರಿಯಾದ ಕಾರಣವಿಲ್ಲದೆ ಇರಬಹುದು. ಆದರೆ ತಿಳಿವಳಿಕೆಯ ಕೊರತೆಯಿಂದಾಗಿ, ಅಹಂನ ಕಾರಣದಿಂದಾಗಿ ಈ ಗೋಡೆಗಳು ಏಳುವ ಸಂದರ್ಭವುಂಟು. ಇದು ಕವಿಗೆ ತಿಳಿದಿರುವುದರಿಂದಲೇ ಆತಂಕದಿಂದ ಮೇಲಿನಂತೆ ನುಡಿದಿರುವುದು. ಕವನದ ಮುಂದಿನ ಭಾಗದಲ್ಲಿ

> ನಾನೂ ನೀನೂ ಬಹು ಕಾಲದಿಂದ ನೀರೆರೆದು ಬೆಳೆಸಿದ
> ಹೂವಿನ ತೋಟ ಸೀದು ಹೊಗೆಯಾಡುತ್ತದೆ
> ಹೊಗೆಯಲ್ಲಿ ಉಸಿರು ಕಟ್ಟಿಕೊಂಡು
> ನಾನು ಮತ್ತು ನೀನು
> ಗೋಡೆಯೆರಡೂ ಬದಿಗೆ
> ನರಳಿ ಹೊರಳುತ್ತೇವೆ (ಗೋಡೆ-ಗೋಡೆ)

ಗೋಡೆ ಎದ್ದಾದ ಮೇಲೆ ವ್ಯಕ್ತಿಗಳು ಇಲ್ಲಿಯವರೆಗೆ ನೀರೆರೆದು ಜನತದಿಂದ ಕಟ್ಟಿ ಬೆಳೆಸಿ ಕಾಪಾಡಿದ ಪ್ರೀತಿ-ವಿಶ್ವಾಸದ ಸಂಬಂಧದ ಹೂವಿನ ತೋಟ ಸಂದೇಹ, ದ್ವೇಷದ ಹೊಗೆಯಲ್ಲಿ ಸೀದುಹೋಗಿ ಆ ಹೊಗೆಯಲ್ಲಿ ಉಸಿರು ಕಟ್ಟುವ ವಾತಾವರಣ ನಿರ್ಮಾಣವಾಗಿ ಬದುಕು ಅಸಹನೀಯ ನೋವು ಸಂಕಟಕ್ಕೆ ಈಡಾಗುತ್ತದೆಂದು ನುಡಿದಿರುವುದು ಗಮನಿಸತಕ್ಕ ಸಂಗತಿಯಾಗಿದೆ. ಏಕೆಂದರೆ ಒಮ್ಮೆ ಗೋಡೆ ಎದ್ದು ನಿಂತರೆ ಅದನ್ನು ಅಷ್ಟು ಸುಲಭವಾಗಿ ಕೆಡವುವುದು ಸಾಧ್ಯವಿಲ್ಲ. ಇದರ ಅರಿವು ಇರುವ ಕವಿ, ವ್ಯಕ್ತಿಗಳ ಮಧ್ಯ ಅನಗತ್ಯವಾಗಿ ಗೋಡೆಗಳನ್ನು ನಿರ್ಮಿಸಿಕೊಳ್ಳುವುದು ಸಾಧುವಲ್ಲವೆಂಬ ಆಶಯವನ್ನು ಇಲ್ಲಿ ವ್ಯಕ್ತಪಡಿಸಿದ್ದಾರೆ.

ಶಿವರುದ್ರಪ್ಪನವರು ದೈವಕೇಂದ್ರಿತ ನೆಲೆಯಿಂದ ಬದುಕನ್ನು ಗ್ರಹಿಸಿದವರಲ್ಲ. ಪ್ರಕೃತಿ ಮತ್ತು ಮಾನವಪ್ರೀತಿಯಲ್ಲಿ ದೈವದ ಅಂಶವನ್ನು ಕಂಡವರು. ಹಾಗಾಗಿ ಅವರ ದೃಷ್ಟಿಯಲ್ಲಿ ದೇವರು ಗುಡಿ-ಗುಡಾರಗಳಲ್ಲಿ ಪ್ರತಿಷ್ಠಾಪನೆಗೊಂಡಿರುವ ವಿವಿಧ ಬಗೆಯ ದೇವರ ಮೂರ್ತಿಯಲ್ಲಿ ಅಡಗಿಲ್ಲ ಮತ್ತು ಆ ದೇವರು ಮೂರ್ತಸ್ವರೂಪನೂ ಅಲ್ಲ ಎಂಬುದನ್ನು ತಮ್ಮ ಕವಿತೆಗಳಲ್ಲಿ ಹೇಳಲು ಇಚ್ಛಿಸಿದ್ದಾರೆ.

> ಎಲ್ಲೋ ಹುಡುಕಿದೆ ಇಲ್ಲದ ದೇವರ
> ಕಲ್ಲು ಮಣ್ಣುಗಳ ಗುಡಿಯೊಳಗೆ

ಇಲ್ಲೇ ಇರುವ ಪ್ರೀತಿ-ಸ್ನೇಹಗಳ
ಗುರುತಿಸದಾದೆನು ನಮ್ಮೊಳಗೆ (ಅನ್ವೇಷಣೆ-ಗೋಡೆ)

ದೇವರು ಕಲ್ಲು ಮಣ್ಣುಗಳ ಗುಡಿಯಲ್ಲಿರದೆ ನಮ್ಮ ಸುತ್ತಮುತ್ತಲಿರುವ ಮಾನವರ ಪ್ರೀತಿ-ಸ್ನೇಹಗಳ ಒಳಗೆ ಅಡಗಿ ಕುಳಿತಿದ್ದಾನೆಂದು ಶಿವರುದ್ರಪ್ಪನವರು ಬಗೆದಿರುವುದು ಅರ್ಥಪೂರ್ಣವಾಗಿದೆ. ಮಾನವನ ಅಂತರಂಗವೆಂಬ ಗುಡಿಯಲ್ಲಿ ನೈಜ ಪ್ರೀತಿ-ಸ್ನೇಹಗಳ ರೂಪದಲ್ಲಿ ದೇವರಿದ್ದಾನೆಂದು ತಿಳಿದಿರುವುದು ಗಮನಾರ್ಹ ಸಂಗತಿಯಾಗಿದೆ. ನಾಕ-ನರಕ, ನಂದನ-ಬಂಧನ ಎಲ್ಲಾ ಈ ಭೂಲೋಕದಲ್ಲೇ ಇದ್ದು ಮನುಷ್ಯ ತನ್ನ ಅಹಂಕಾರದ ಕೋಟೆಯಲ್ಲಿ ಬಂದಿಯಾಗಿ ಜಗತ್ತು ನೀಡುವ ಪ್ರೀತಿ-ವಿಶ್ವಾಸವೆಂಬ ಅಮೃತದಿಂದ ದೂರವಿರುವ ಸಂಗತಿಯನ್ನು ಮುಂದಿನ ಚರಣಗಳಲ್ಲಿ ಧ್ವನಿಪೂರ್ಣವಾಗಿ ಕಟ್ಟಿಕೊಟ್ಟಿದ್ದಾರೆ.

'ನಮ್ಮ ದೇವರು' ಎಂಬ ಕವನವೂ ದೇವರ ಅಸ್ತಿತ್ವವನ್ನು ಕುರಿತದ್ದು. ದೇವರ ಸೃಷ್ಟಿಯಾದ ಪೂಜಾರಿಗೆ ದೇವರು ತನ್ನ ಸ್ವಾರ್ಥಸಾಧನೆಗಾಗಿ ಬೇಕಾಗಿದ್ದಾನೆ. ಆದರೆ ವಿರಾಗಿಯ ದೃಷ್ಟಿಯೇ ಬೇರೆ. ಅವನಿಗೆ ತನ್ನಲ್ಲಿಯೇ ದೈವವನ್ನು ಕಾಣುವ ತವಕ.

ದೇವಸ್ಥಾನ ಎನ್ನುವುದೊಂದು ಭಕ್ತಿಯ
ಕ್ರೀಡಾಂಗಣ - ಗಣಗಣ ಗಂಟೆ, ಮಣ ಮಣ
ಮಂತ್ರ - ಪೂಜಾರಿಯ ಸುತ್ತ ನಿತ್ಯವೂ
ತಿರುಗುತ್ತಿರುವ ಉತ್ಸವಗಳ ಯಂತ್ರ (ನಮ್ಮ ದೇವರು-ಅಗ್ನಿಪರ್ವ)

ದೇವರು ಮತ್ತು ದೇವಸ್ಥಾನದ ಬಗೆಗೆ ಕವಿ ಶಿವರುದ್ರಪ್ಪನವರು ತಾಳಿರುವ ಖಚಿತವಾದ ನಿಲುವು ಇದು. ಪುರೋಹಿತಶಾಹಿಯ ಹೊಟ್ಟೆಹೊರೆಯುವ ಕಾಯಕವಾಗಿ ಇವೆಲ್ಲವೂ ಸೃಷ್ಟಿಗೊಂಡಿವೆ ಎಂಬುದು ಕವಿಯ ಸ್ಪಷ್ಟ ತಿಳಿವಳಿಕೆ. ಕವಿಯ ಈ ಜಿಜ್ಞಾಸೆ ಮುಂದುವರಿದು ಬುದ್ಧ ಮತ್ತು ಅಲ್ಲಮನ ದೇವರ ಕಲ್ಪನೆಯವರೆಗೂ ವಿಸ್ತರಿಸಿಕೊಳ್ಳುತ್ತದೆ. ಎರಡೂವರೆ ಸಾವಿರ ವರ್ಷಗಳ ಹಿಂದೆ -

ಬುದ್ಧ: ದೇವರಿದ್ದಾನೆಯೋ ಇಲ್ಲವೋ
ಪರಲೋಕವಿದೆಯೋ ಇಲ್ಲವೋ
ಯಾರಿಗೆ ಬೇಕು ಅದೆಲ್ಲ? ನಮ್ಮ ಕಣ್ಣೆದುರಿಗೇ
ಇದೆ ಒಂದು ದುಃಖಭೂಯಿಷ್ಠವಾದ ಜಗತ್ತು
ಆ ದುಃಖವನ್ನೊಂದಿಷ್ಟು ಕಡಿಮೆ ಮಾಡುವುದು
ಸಾಧ್ಯವಾದರೆ ನಿಮಗೆ, ಅದೇ ಪರಮಾರ್ಥ (ನಮ್ಮ ದೇವರು-ಅಗ್ನಿಪರ್ವ)

ದುಃಖಭೂಯಿಷ್ಠವಾದ ನಮ್ಮ ಕಣ್ಣೆದುರುಗಿನ ಈ ಜಗತ್ತಿನ ಅಪಾರ ನೋವು-ದುಃಖವನ್ನು ಸ್ವಲ್ಪವಾದರೂ ಕಡಮೆ ಮಾಡಲು ಸಾಧ್ಯವಾದರೆ ಅದುವೇ ಪರಮಾರ್ಥ ಎಂದ ಬುದ್ಧನ ವಾಸ್ತವ ತಿಳಿವಿನ ಮಾನವ ಪ್ರೀತಿ ಮತ್ತು ನೈಜ ಕಾಳಜಿಯನ್ನು



ತಿಳಿಸಿಕೊಡುವುದರ ಜೊತೆಗೆ ಮಾನವಪ್ರೀತಿಯಲ್ಲೇ ದೈವವನ್ನು ಕಾಣಬೇಕೆಂಬ ಆಶಯ ಇರುವುದನ್ನು ನೋಡುತ್ತೇವೆ. ಹಾಗೆಯೇ ಮುಂದಿನ ನುಡಿಯಲ್ಲಿ ಅಲ್ಲಮನು ಗುಹೇಶ್ವರ ಲಿಂಗಕ್ಕೆ "ನಾ ದೇವನಲ್ಲದೆ ನೀ ದೇವನೇ? ನೀ ದೇವನಾದೊಡೆ ಎನ್ನನೇಕೆ ಸಲಹೆ?" ಎಂದು ಕೇಳುವ ಪ್ರಶ್ನೆಯಲ್ಲೇ ಮನುಷ್ಯ ದೇವರನ್ನು ಹೊರಗೆ ಕಾಣದೆ ತನ್ನಲ್ಲಿಯೇ ಕಂಡುಕೊಳ್ಳಬೇಕೆಂಬ ಧೋರಣೆ ಇರುವುದು ಸ್ಪಷ್ಟವಾಗುತ್ತದೆ. 'ಮಣ್ಣ ಬಿಟ್ಟು ಮಡಕೆ ಇಲ್ಲ; ತನ್ನ ಬಿಟ್ಟು ದೇವರಿಲ್ಲ' ಎಂಬ ಸರಳ ಸತ್ಯವನ್ನು ಅರಿಯಬೇಕಾದುದು ಎಲ್ಲ ಕಾಲದ ಅಗತ್ಯವಾಗಿದೆ. ಶಿವರುದ್ರಪ್ಪನವರು ತಮ್ಮ ಕವಿತೆಗಳ ಮೂಲಕ ಈ ಆಶಯವನ್ನು ಬಿತ್ತರಿಸಲು ಪ್ರಯತ್ನಿಸಿರುವುದನ್ನು ಕಾಣಬಹುದಾಗಿದೆ.

'ಇವೇ ನಮ್ಮ ದೇವರು' ಎಂಬ ಕವನದಲ್ಲಿ ಶಿವರುದ್ರಪ್ಪನವರು ಮಾನವ ಪ್ರೀತಿ, ಕರುಣೆ, ಸ್ನೇಹ, ದಯೆ - ಇವುಗಳೇ ನಮ್ಮ ದೇವರೆಂದು ಪ್ರತಿಪಾದಿಸಿದ್ದಾರೆ.

ಪ್ರೀತಿ ಕರುಣೆ ಸ್ನೇಹ ಮರುಕ
ಇವೇ ನಮ್ಮ ದೇವರು
ಕಂಬನಿಯೇ ಇಲ್ಲಿ ತೀರ್ಥ
ನಿಟ್ಟುಸಿರೇ ಧೂಪವು
ತಾನು ತನ್ನದೆನ್ನುವುದನು
ಕೊಡುವುದೆ ನೈವೇದ್ಯವು
ಬೇಡ ಬೇರೆ ದೇಗುಲ
ಇಲ್ಲಿ ಎಲ್ಲ ನಿರ್ಮಲ
ಇದು ಬೆಳಕಿನ ವರ್ತುಲ (ಇವೇ ನಮ್ಮ ದೇವರು-ತೆರೆದ ದಾರಿ)

ಹೀಗೆ ಶಿವರುದ್ರಪ್ಪನವರು ಮಾನವ ಪ್ರೀತಿ, ಕರುಣೆ, ದಯೆ, ವಾತ್ಸಲ್ಯಗಳೇ ದೇವರಾಗಿ ಮಾನವ ಬದುಕನ್ನು ತಿದ್ದಿ ತೀಡಿ ಹಸನುಗೊಳಿಸಬೇಕು; ಈ ಮಾನವ ಲೋಕದ ನೋವು, ನಿಟ್ಟುಸಿರು, ಕಣ್ಣೀರು ಇಲ್ಲವಾಗಿ ಎಲ್ಲರೂ ಎಲ್ಲವನ್ನೂ ಸಮಾನವಾಗಿ ಹಂಚಿಕೊಂಡು ಬದುಕಬೇಕು; ಸಮಾನತೆ ಸಹಬಾಳ್ವೆ ಬದುಕಿನ ಉಸಿರಾಗಬೇಕೆಂಬ ಆಶಯವನ್ನು ವ್ಯಕ್ತಪಡಿಸಿರುವುದು ಅವರ ಚಿಂತನೆ ಮತ್ತು ಬದುಕಿನ ಎತ್ತರ-ಬಿತ್ತರವನ್ನು ಪ್ರಕಟಪಡಿಸುತ್ತದೆ.

ದಿನನಿತ್ಯವೂ ಪತ್ರಿಕೆಗಳಲ್ಲಿ ಬರುವ ಸುದ್ದಿಗಳನ್ನು ಕುರಿತದ್ದು 'ಹೊರ ದಾರಿ' ಎಂಬ ಕವನ. ಮುಖಪುಟದಲ್ಲಿ ಒಳ್ಳೆಯ ಸುದ್ದಿಗಳ ಸುಳಿವಿರದೆ ರಸ್ತೆಯಪಘಾತದಲ್ಲಿ ಸತ್ತವರ, ವರದಕ್ಷಿಣೆಗೆ ಬಲಿಯಾದ ಮುಗ್ಧ ವಧುವಿನ ಬವಣೆ, ದಲಿತ ಮಹಿಳೆಯ ಮೇಲೆ ನಡೆದ ಅತ್ಯಾಚಾರ, ಭಯೋತ್ಪಾದಕರ ದಾಳಿಗೆ ಅಮಾಯಕ ಜನ ಹತರಾದದ್ದು, ಪಕ್ಕದಲ್ಲೇ ಮಂತ್ರಿ ಮಹೋದಯರ ವದನಾರವಿಂದದ ಪರಿಹಾರ ಘೋಷಣೆ ಮತ್ತು ಪೊಳ್ಳು ಆಶ್ವಾಸನೆಗಳು, ಒಳಪುಟದಲ್ಲಿ ಬಳುಕುವ ಭುವನಸುಂದರಿಯ ಸೋಪಿನ ದೊಡ್ಡ ಜಾಹೀರಾತು ಮುಂತಾದ ಸುದ್ದಿಗಳೇ ಪ್ರಧಾನವಾಗಿ ಕಾಣಿಸಿಕೊಂಡು, ಕವಿಮನ ನೊಂದುಕೊಂಡು ಕುಡಿಯುತ್ತಿರುವ ಸಕ್ಕರೆ ಹಾಕಿದ ಕಾಫಿಯೂ ಕಹಿಯಾಗುತ್ತಿರ

ಬೇಕಾದರೆ, ಒಳಪುಟದ ಮೂಲೆಯಲ್ಲೊಂದು ಕಡೆ ಸಾಲುಮರದ ತಿಮ್ಮಕ್ಕ, ಸಾಲುಮರಗಳನ್ನು ನೆಟ್ಟು ಬಹುಕಾಲ ನೀರೆರೆದು ಮಕ್ಕಳಂತೆ ಅವುಗಳನ್ನು ಪ್ರೀತಿಯಿಂದ ಬೆಳೆಸಿದ ಸತ್ಕಾರ್ಯಕ್ಕಾಗಿ ಸರ್ಕಾರ ರಾಷ್ಟ್ರೀಯ ಪ್ರಶಸ್ತಿಯನ್ನು ನೀಡಿರುವ ಸುದ್ದಿಯನ್ನು ಕಂಡು ಕವಿಗಳು ಸ್ವಲ್ಪ ಉಲ್ಲಸಿತರಾಗುತ್ತಾರೆ. ಏಕೆಂದರೆ ಅಂದಿನ ಪತ್ರಿಕೆಯಲ್ಲಿನ ಒಳ್ಳೆಯ ಸುದ್ದಿ ಅದೊಂದೇ ಆಗಿರುತ್ತದೆ. ತಕ್ಷಣವೇ ಕವಿಯು ಪತ್ರಿಕೆಯನ್ನು ಬಿಸಾಡಿ ಆ ಸಾಲುಮರಗಳನ್ನು ಮತ್ತು ತಿಮ್ಮಕ್ಕನನ್ನು ಕಾಣಲು ಹೊರದಾರಿ ಹುಡುಕಿಕೊಂಡು ಹೊರಟುಬಿಡುತ್ತಾರೆ.

ಇಂದು ನಮ್ಮ ಮಾಧ್ಯಮಗಳು ಬೇಡವಾದ, ಪ್ರಮುಖವಲ್ಲದ ವಿಷಯಗಳಿಗೆ ಪ್ರಾಮುಖ್ಯತೆ ನೀಡಿ ಅತಿರಂಜನೆಯಲ್ಲಿ ಪ್ರಚಾರ, ಪ್ರಸಾರ ಮಾಡುವುದನ್ನು ನೋಡುತ್ತಿರುವ ನಮಗೆ ಬೇಸರವೂ, ಒಂದು ಬಗೆಯ ತಿರಸ್ಕಾರವೂ ಮೂಡುತ್ತಿರುವುದು ನಿಜವಲ್ಲವೇ! ಒಳ್ಳೆಯ ಸುದ್ದಿಗಳನ್ನು ಗೌಣವಾಗಿಸಿ ಸಾವು, ಅಪಘಾತ, ಅನಾಹುತ, ಪೊಳ್ಳು ಜಾಹೀರಾತುಗಳನ್ನು ಪ್ರಮುಖ ಸುದ್ದಿಗಳಂತೆ ಅರಿರಂಜನೆಯಲ್ಲಿ ವೈಭವೀಕರಿಸಿ ಪ್ರಸಾರ ಮಾಡುತ್ತಿರುವುದು ಮಾಧ್ಯಮಗಳ ಬೇಜವಾಬ್ದಾರಿತನವಲ್ಲದೆ ಬೇರೇನೂ ಅಲ್ಲ. ಇದರ ಸ್ಪಷ್ಟ ಅರಿವಿರುವ ಶಿವರುದ್ರಪ್ಪನವರು ತಮ್ಮ 'ಹೊರದಾರಿ' ಎಂಬ ಕವನದಲ್ಲಿ ಮಾಧ್ಯಮಗಳ ಈ ಬೂಟಾಟಿಕೆ, ಬೇಜವಾಬ್ದಾರಿತನವನ್ನು ತುಂಬ ವಸ್ತುನಿಷ್ಠವಾಗಿ, ನಿರ್ಲಿಪ್ತವಾಗಿ ಕಂಡರಿಸಿದ್ದಾರೆನ್ನಬೇಕು.

'ಅಗ್ನಿಪರ್ವ' ಶಿವರುದ್ರಪ್ಪನವರ ಉತ್ತಮ ಕವನಗಳಲ್ಲೊಂದು ಮಾತ್ರವಲ್ಲ. ಕನ್ನಡ ಕಾವ್ಯಪರಂಪರೆಯಲ್ಲಿ ಕಾಣಸಿಗುವ ಒಂದು ಉತ್ಕೃಷ್ಟ ಕವಿತೆ ಎಂದು ಹೇಳಬೇಕಾಗಿದೆ. ಕವಿಯ ವಾಸ್ತವ ಅರಿವಿಗೆ ಮತ್ತು ಸಾಮಾಜಿಕ ಪ್ರಜ್ಞೆಗೆ ಹಿಡಿದ ಕನ್ನಡಿಯಾಗಿದೆ, ಈ ಕವಿತೆ. ಜಗತ್ತನ್ನು, ಈ ಧರೆಯನ್ನು ಹೊತ್ತಿ ಉರಿಸುತ್ತಿರುವ ಕೋಮುವಾದ, ಜಾತಿವಾದ, ಪ್ರತ್ಯೇಕತಾವಾದ, ಮತಭೇದ, ಭಯೋತ್ಪಾದನೆಗಳ ಅಟ್ಟಹಾಸವನ್ನು, ಅವುಗಳ ವಿನಾಶಕಾರಿ ಗುಣವನ್ನು ಕುರಿತ ಕವಿತೆ ಇದು:

> ಒಲೆ ಹತ್ತಿ ಉರಿದಡೆ ನಿಲ್ಲಬಹುದ
> ಲ್ಲದೆ ಧರೆ ಹತ್ತಿ ಉರಿದಡೆ ಎಲ್ಲೋಡ
> ಬಹುದೋ? ಧಗದ್ ಧಗದ್ ಧಗಾ
> ಯಮಾನವಾದ ಈ ಬಕಾಸುರ ಬೆಂಕಿಗೆ
> ಭಯಂಕರ ಹಸಿವು. ತಳಿರುಗಳನ್ನು
> ಹೂವುಗಳನ್ನು ಹೀಚುಗಳನ್ನು ಹಣ್ಣು
> ಗಳನ್ನು ಒಂದೇ ಸಮನೆ ತಿನ್ನುವುದೆ
> ಕೆಲಸ. ಹೊತ್ತಿಕೊಂಡಿದೆ ಬೆಂಕಿ ಮಂ
> ದಿರಕ್ಕೆ ಮಸೀದಿಗೆ, ಚರ್ಚಿಗೆ, ಚಲಿಸು
> ತ್ತಿರುವ ರೈಲಿಗೆ ಓಡುತ್ತಿರುವ ಬಸ್ಸಿಗೆ



> ಹಾರುವ ವಿಮಾನಕ್ಕೆ, ಆಕಾಶಕ್ಕೆ ಮುಡಿ
> ಯೆತ್ತಿ ನಿಂತಿರುವ ಸೌಧಗಳಿಗೆ, ಬಡ
> ವರ ಜೋಪಡಿಗಳಿಗೆ ತಿನ್ನುವ
> ಅನ್ನಕ್ಕೆ ಕುಡಿಯುವ ನೀರಿಗೆ ಉಸಿ
> ರಾಡುತ್ತಿರುವ ಗಾಳಿಗೆ ಬಹುಕಾಲದಿಂದ
> ಹೇಗೋ ಕಾಪಾಡಿಕೊಂಡು ಬಂದಿರುವ
> ಪಾರಿವಾಳಗಳ ಕನಸಿನ ಗೂಡಿಗೆ (ಅಗ್ನಿಪರ್ವ-ಅಗ್ನಿಪರ್ವ)

ಈ ಜಾತಿ, ಮತ, ಕೋಮು ಭೇದಭಾವದ ಭಯಂಕರ ಹಸಿವಿನ ಭಯೋತ್ಪಾದನೆಯ ಬೆಂಕಿಯು ತಳಿರು, ಹೂವು, ಹೀಚು, ಹಣ್ಣು, ಮಂದಿರ, ಮಸೀದಿ, ಚರ್ಚು, ಬಸ್ಸು, ರೈಲು, ವಿಮಾನ, ಬಡವರ ಗುಡಿಸಲು, ಶ್ರೀಮಂತರ ಸೌಧಗಳು, ತಿನ್ನುವ ಅನ್ನ, ಉಸಿರಾಡುವ ಗಾಳಿ ಕೊನೆಗೆ ಪಾರಿವಾಳದ ಕನಸಿನ ಗೂಡನ್ನೂ ತಿಂದು ತೇಗಬೇಕೆಂಬ, ಈ ಧರೆಯನ್ನು ತನ್ನ ಉರಿನಾಲಿಗೆಯಲ್ಲಿ ನುಂಗಿ ನೊಣೆಯುವಂಥ ದುರುದ್ದೇಶವನ್ನು ಹೊಂದಿರುವಂಥದ್ದು ಎಂಬುದನ್ನು ಮೇಲಿನ ನುಡಿಯಲ್ಲಿ ವ್ಯಂಜಿಸುವ ಕವಿ, ಮುಂದಿನ ಭಾಗದಲ್ಲಿ -

> ಈ ಉರಿವ ಬೆಂಕಿಯ ಸುತ್ತ ಛಳಿ ಕಾ
> ಯಿಸಿಕೊಳ್ಳುತ್ತ, ಆಗಾಗ ಎಣ್ಣೆ ಹೊ
> ಯ್ಯುತ್ತ ಕೂತ ಮಹನೀಯರೆ, ನೀವು
> ಯಾರು? ಮಾತನಾಡಿಸಲೆಂದು ಬಂದರೆ
> ಹತ್ತಿರ, ನಿಮಗೆ ಮುಖವೇ ಇಲ್ಲ! ಬರೀ
> ಮುಖವಾಡ. ಸಾಧ್ಯವೇ ಸಂವಾದ ಮುಖ
> ವಾಡಗಳ ಜತೆಗೆ? (ಅಗ್ನಿಪರ್ವ-ಅಗ್ನಿಪರ್ವ)

ಬೆಂಕಿಯನ್ನು ಹಚ್ಚಿ ಆ ಬೆಂಕಿಯುರಿಯಲ್ಲಿ ತಮ್ಮ ಸ್ವಾರ್ಥವನ್ನು ಸಾಧಿಸಿಕೊಳ್ಳುವವರನ್ನು ಕವಿ ನೋಡಬೇಕೆಂದರೆ ಅವರುಗಳಿಗೆ ಮುಖವೇ ಇಲ್ಲ. ಬರೀ ಮುಖವಾಡವೇ ಆವರಿಸಿಕೊಂಡಿದೆ. ಮುಖವಾಡಗಳೊಂದಿಗೆ ಸಂವಾದ ಸಾಧ್ಯವಾಗದಿದ್ದರೂ ಮುಖವಾಡಗಳ ಹಿಂದಿರುವ ಅಸಲಿ ಮುಖದ ಬಗ್ಗೆ ಕವಿಗೆ ತಿಳಿದಿದೆ. ಹಾಗಾಗಿ ಕವಿ:

> ಏನೆಂದು ಗುರುತಿಸಲಿ ಹೇಳಿ ನಿಮ್ಮನ್ನು?
> ಈ ಮಹಾಜನದ ಪ್ರತಿನಿಧಿಗಳೆಂದೇ?
> ಗದ್ದುಗೆ ಏರಿ ಕೂತಿರುವ ಪ್ರಭುಗಳೆಂದೇ?
> ಅಥವಾ ನಮ್ಮೊಳಗೆ ಮನೆಮಾಡಿರುವ
> ತಲಾತಲದ ವಿಕೃತಿಗಳ ಮೂರ್ತ
> ರೂಪಗಳೆಂದೇ? (ಅಗ್ನಿಪರ್ವ-ಅಗ್ನಿಪರ್ವ)

ಎಂದು ಬೆಂಕಿಯನ್ನು ಹಚ್ಚುವವರು ಮಹಾಜನರ ಪ್ರತಿನಿಧಿಗಳು, ಇಲ್ಲವೆ ಗದ್ದುಗೆ ಏರಿ ಕುಳಿತಿರುವ ಪ್ರಭುಗಳು ಅಥವಾ ತಲತಲಾಂತರದಿಂದ ನಮ್ಮಲ್ಲೇ ಅಡಗಿ

ಕುಳಿತಿರುವ ಭೇದಭಾವದ ವಿಕೃತ ರೂಪಗಳಾಗಿರಬೇಕೆಂದು ನುಡಿದಿರುವುದು ಸಮಂಜಸವಾದುದಾಗಿದೆ. ಕವಿ ಮುಂದುವರೆದು:

ಹಳೆಯ ಗುಡಿಗೋಪು
ರದ ಕಲಶಗಳನ್ನು ಈಟಿಯ ಮಾಡಿ ನೀಲಾ
ಕಾಶದೆದೆ ಸೀಳಿ ಕತ್ತಲನು ಕರೆದವರೆ
ಗರ್ಭಗುಡಿಯೊಳಗುರಿವ ನಂದಾದೀಪ
ಗಳಿಂದ ಪಂಜು ಹೊತ್ತಿಸಿಕೊಂಡು ದೆವ್ವಂ
ಗುಣಿವ ತಮಸ್ಸಿನಾರಾಧಕರೆ, ಹಿಂಸಾ
ರತಿಯ ಪೂಜಾರಿಗಳೆ, ಎಲ್ಲಿದ್ದರೂ ನೀವು
ಒಂದೆ ಜಾತಿಯ ಜನವೇ! ಜಗತ್ತಿನಾ
ದ್ಯಂತ ಭಯೋತ್ಪಾದನೆಯ ಬಲೆನೆಯ್ದ
ಪಡೆಂಭೂತ ಜೇಡಗಳೆ, ಏನಾಗಿದೆ ನಿಮಗೆ
ಇನ್ನೂ ಏನಾಗಬೇಕಾಗಿದೆ ಈ ಮನುಕುಲಕ್ಕೆ ? (ಅಗ್ನಿಪರ್ವ-ಅಗ್ನಿಪರ್ವ)

ಗುಡಿಗೋಪುರದ ಶುಭಕಲಶಗಳನ್ನು ಈಟಿ ಮಾಡಿಕೊಂಡು, ನೀಲಾಕಾಶದ ಎದೆ ಸೀಳಿ ಸೂರ್ಯನನ್ನು ಸಂಹಾರ ಮಾಡಿ ಕತ್ತಲನ್ನು ಕರೆದವರು, ಗರ್ಭಗುಡಿಯ ಜ್ಞಾನಜ್ಯೋತಿಯ ಸಂಕೇತವಾದ ನಂದಾದೀಪಗಳಿಂದ ಪಂಜು ಹೊತ್ತಿಸಿಕೊಂಡು ವಿನಾಶಕಾರಿ ದೆವ್ವಂಗುಣಿತ ಕುಣಿದವರು ಹಿಂಸಾರತಿಯ ಪೂಜಾರಿಗಳಲ್ಲದೆ ಬೇರೇನೂ ಅಲ್ಲ ಎಂಬ ಸ್ಪಷ್ಟ ಅಭಿಪ್ರಾಯವನ್ನು ಕವಿ ಮಂಡಿಸುತ್ತಿರುವುದು ಸರಿಯಾಗಿಯೇ ಇದೆ. ಇಂಥ ಮತಿಗೇಡಿ ಹಿಂಸಾರತಿಯ ಪೂಜಾರಿಗಳಿಂದಲೇ ಇಂದು ಭಾರತ ಮಾತ್ರವಲ್ಲ ಇಡೀ ಜಗತ್ತೇ ಭಯೋತ್ಪಾದನೆಯ ಹಿಂಸೆ, ಸಾವು, ನೋವುಗಳಲ್ಲಿ ತನ್ನ ಅಸ್ತಿತ್ವವನ್ನು ಅಸ್ಮಿತೆಯನ್ನು ಕಳೆದುಕೊಳ್ಳುವ ಅಪಾಯದಲ್ಲಿದೆ. ಇದರ ಅರಿವಿರುವ ಕವಿ ಕವನದ ಕೊನೆಯಲ್ಲಿ-

ಪಾಚಿಗಟ್ಟುತ್ತಿರುವ ಈ ನೀರುಗಳನ್ನು
ಶುದ್ಧೀಕರಿಸುವುದು ಹೇಗೆ? ಶತ
ಚ್ಛಿದ್ರವಾಗುತ್ತಿರುವ ಈ ಮನಸ್ಸುಗಳನ್ನು
ಹಿಡಿದು ಕೂಡಿಸುವುದು ಹೇಗೆ? ಪುರಾಣ
ಗಳಲ್ಲಿ ಸ್ಥಗಿತಗೊಳ್ಳುತ್ತಿರುವ ಬುದ್ಧಿ
ಗಳನ್ನು ವರ್ತಮಾನದ ವಾಸ್ತವದೊಳಕ್ಕೆ
ತರುವುದು ಹೇಗೆ? ಗುಡಿ-ಚರ್ಚು-ಮಸ
ಜೀದಿಗಳ ಬಿಟ್ಟು ಹೊರಬರುವಂತೆ
ಮಾಡುವುದು ಹೇಗೆ? ವೇದ-ಖುರಾನು-ಬೈ
ಬಲ್ಲಿಂದಾಚೆ ಬಯಲ ಬೆಳಕಿನ ಕೆಳಗೆ
ಬದುಕುವುದನ್ನು ಇನ್ನಾದರೂ ಕಲಿಯು
ವುದು ಹೇಗೆ?



ಎಂದು ಚಿಂತಿಸುತ್ತಾರೆ. ಚಿಂತಿಸುವಂತೆ ಪ್ರೇರಣೆ ಒದಗಿಸುತ್ತಾರೆ. ಎಲ್ಲ ಜಾತಿ ಮತ ಧರ್ಮಗಳ ಕಟ್ಟುಪಾಡುಗಳನ್ನು, ಅವು ಸೃಷ್ಟಿಸುವ ಮತಭೇದಗಳನ್ನು ಮೀರಿ ದಿಗಂಬರನಾಗಿ ಬಯಲ ಬೆಳಕಿನ ಕೆಳಗೆ ಬದುಕುವುದೇ ಮನುಷ್ಯನ ಇಂದಿನ ಅಗತ್ಯವೆಂಬ ಸತ್ಯವನ್ನು ಪ್ರತಿಪಾದಿಸುತ್ತಾರೆ. ಇದು ಜಿಎಸ್ಎಸ್ ಅವರ ಚಿಂತನೆಯ ಪ್ರೌಢಿಮೆ ಮತ್ತು ಸಮತಾದೃಷ್ಟಿಯನ್ನು ಸೂಚಿಸುತ್ತದೆ.

'ಕೆಲವು ಪ್ರಶ್ನೆಗಳು' ಎಂಬ ಕವಿತೆ ಕೂಡಾ ಇದೇ ಭಾವವನ್ನು ಸ್ಫುರಿಸುವ ಒಂದು ಉತ್ತಮ ಕವನ:

ಈ ಪವಿತ್ರ ಭಾರತದಲ್ಲಿ
ಹಿಂದೂಗಳಿದ್ದಾರೆ, ಮುಸ್ಲಿಮರಿದ್ದಾರೆ
ಕ್ರೈಸ್ತರಿದ್ದಾರೆ, ಶಿಖ್ಖರಿದ್ದಾರೆ
ಜೈನರಿದ್ದಾರೆ, ಬೌದ್ಧರಿದ್ದಾರೆ,
ಬ್ರಾಹ್ಮಣರಿದ್ದಾರೆ, ಲಿಂಗಾಯತರಿದ್ದಾರೆ
ಒಕ್ಕಲಿಗರಿದ್ದಾರೆ, ಅಸ್ಪೃಶ್ಯರಿದ್ದಾರೆ
ಆದರೆ ನಾನು ಹುಡುಕುತ್ತಿರುವುದು
ಮನುಷ್ಯರನ್ನು!
ದಯಮಾಡಿ ಹೇಳಿ
ಅವರೆಲ್ಲಿದ್ದಾರೆ? (ಕೆಲವು ಪ್ರಶ್ನೆಗಳು-ಅಗ್ನಿಪರ್ವ)

ಈ ಭಾರತ ದೇಶದ ಜನರೆಲ್ಲ ಜಾತಿಮತಗಳ ಸಂಕುಚಿತತೆಯಲ್ಲಿ ಕೂಪಮಂಡೂಕಗಳಾಗಿ ಬದುಕುತ್ತಿರಲು; ಇದೆಲ್ಲವನ್ನೂ ಮೀರಿ ಕೇವಲ ಮನುಷ್ಯರಾದವರನ್ನು ಕವಿ ಹುಡುಕುತ್ತಿದ್ದಾರೆ. ಆದರೆ ಕವಿಗೆ ಅಂಥ ಅಪ್ಪಟ ಮಾನವೀಯ ನೆಲೆಯ ಮನುಷ್ಯ ಇನ್ನೂ ಸಿಕ್ಕಿಲ್ಲ; ಸಿಗುವುದೂ ದುರ್ಲಭ. ಆದರೆ ಮನುಷ್ಯ ಕೇವಲ ಮನುಷ್ಯನಾಗಿ ತನ್ನ ಅಸ್ತಿತ್ವವನ್ನು ಕಾಪಾಡಿಕೊಳ್ಳಬೇಕು. ಬದುಕಬೇಕೆಂದು ಕವಿಯ ಆಶಯ.

ಮುಂದಿನ ನುಡಿಯಲ್ಲಿ ದೇಶದ ಉದ್ದಗಲಕ್ಕೂ ಅಸಂಖ್ಯಾತ ಗುಡಿ, ಮಂದಿರ, ಮಸೀದಿ, ಚರ್ಚು, ಮಠಗಳಿದ್ದರೂ ಅಲ್ಲಿ ದೇವರನ್ನು ಕಾಣದ ಕವಿ, ಆ ದೇವರು ಎಲ್ಲಿದ್ದಾನೆಂದು ಪ್ರಶ್ನಿಸುತ್ತಾರೆ. ದೇವರು ಮನುಷ್ಯ ನಿರ್ಮಿಸಿದ ಜಡ ಧಾರ್ಮಿಕ ಸಂಸ್ಥೆಗಳಲ್ಲಿ ಇರುವುದು ಅಸಾಧ್ಯವೆಂಬ ಸತ್ಯವನ್ನು ಇಲ್ಲಿ ಕಂಡರಿಸಿದ್ದಾರೆ. ಕವನದ ಕೊನೆಯಲ್ಲಿ, ಎಲ್ಲ ಧರ್ಮದವರಿಗೂ ಅವರವರಿಗೆ ಬೇಕಾದ ಧಾರ್ಮಿಕ ಗ್ರಂಥ ಗಳಿದ್ದರೂ ನೈಜ ಮಾನವ ಪ್ರೀತಿ ಎಲ್ಲಿದೆ ಎಂದು ಪ್ರಶ್ನಿಸುತ್ತಾರೆ. ಹೀಗೆ ಮತಧರ್ಮಗಳ ಭೇದಭಾವದಲ್ಲಿ ಕಳೆದುಹೋಗದೆ ಕೇವಲ ಮನುಷ್ಯರಾಗಿ ಪ್ರೀತಿಯನ್ನು ಹೃದಯದಲ್ಲಿ ತುಂಬಿಕೊಂಡು ಬದುಕಬೇಕಾದುದು ಇಂದಿನ ತುರ್ತು ಎಂಬ ಸೂಚನೆಯನ್ನು ನೀಡುತ್ತಿದ್ದಾರೆ.

ಯಂತ್ರನಾಗರಿಕತೆಯ ದುಷ್ಪರಿಣಾಮದಿಂದ ಇಡೀ ಪ್ರಕೃತಿ, ಪರಿಸರ, ಮಾನವ ಜಗತ್ತು ಮಲಿನಗೊಂಡಿರುವ ಬಗೆ ಮತ್ತು ಬಂಜೆತನವನ್ನು ಸಶಕ್ತವಾಗಿ ಕಟ್ಟಿಕೊಡುವ ಕವನ 'ಪ್ರಶ್ನೆ':

ಹಗಲೂ ಇರುಳೂ ಯಾಕಿಷ್ಟೊಂದು
ಸಾವಿರ ಗಾಲಿಗಳುರುಳು?
ಈ ಗದ್ದಲದೊಳು ಕೇಳಿಸದಾಗಿದೆ
ನಿನ್ನ ಜೋಗುಳದ ಕೊರಳು (ಪ್ರಶ್ನೆ-ಅಗ್ನಿಪರ್ವ)

ಎನ್ನುವಲ್ಲಿ ಯಂತ್ರನಾಗರಿಕತೆಯ ದುಷ್ಪರಿಣಾಮವನ್ನು ಧ್ವನಿಪೂರ್ಣವಾಗಿ ಹಿಡಿದಿಟ್ಟಿರುವುದನ್ನು ಕಾಣಬಹುದಾಗಿದೆ.

ಆಧುನಿಕ ಸ್ವಾರ್ಥಭರಿತ ಬದುಕು, ನೆಮ್ಮದಿ, ಶಾಂತಿ, ಒಗ್ಗಟ್ಟಿನ ನೆಲವೀಡಾಗಿದ್ದ ಅವಿಭಕ್ತ ಕುಟುಂಬದ ಪರಿಕಲ್ಪನೆಯನ್ನು ನಾಶ ಮಾಡಿ ಮನುಷ್ಯ ಒಂಟಿಯಾಗಿ ಅಸಹಾಯಕನಾಗಿ ಬದುಕುವ ದುರಂತವನ್ನು ತಿಳಿಸುತ್ತದೆ, 'ಅವರವರ ದಾರಿ' ಕವನ, ಹಣಪ್ರಧಾನವಾದ ಇಂದಿನ ಕಾಲದಲ್ಲಿ ಮಾನವಸಂಬಂಧಗಳಿಗೆ ಬೆಲೆಯಿಲ್ಲವಾಗಿದೆ. ಎಲ್ಲ ಸಂಬಂಧಗಳನ್ನೂ ಹಣದಿಂದಲೇ ಅಳೆಯುವ ದುಷ್ಟ ಚಾಳಿ ಚಾಲ್ತಿಯಲ್ಲಿದೆ; ಇದರಿಂದ ಬದುಕು ನರಕವಾಗುತ್ತಿದೆ; ಅದನ್ನು ಸಶಕ್ತವಾಗಿ ವ್ಯಂಜಿಸಿದೆ ಈ ಕವನ.

ದೇಶದ ರಾಜಕೀಯ ನಾಯಕರಾಗಿ ಬೆಳೆಯಲು ಕಾಲೇಜು ಒಂದು ತರಬೇತಿ ರಂಗವಿದ್ದ ಹಾಗೆ ಎನ್ನುವ ಸತ್ಯವನ್ನು ಮತ್ತು ಕಾಲೇಜು ಅಧ್ಯಯನ ಮುಗಿದ ಮೇಲೆ ನೇರ ರಾಜಕೀಯಕ್ಕೆ ನುಗ್ಗಿ ದೇಶದ ಆಡಳಿತದ ಚುಕ್ಕಾಣಿ ಹಿಡಿದು ದೇಶ ಮತ್ತು ಜನರನ್ನು ಸುಳ್ಳು ಆಶ್ವಾಸನೆಗಳ, ಮೋಸದ ನಡೆಯ ಮೂಲಕ ವಂಚಿಸಿ ಸ್ವಾರ್ಥ ಸಾಧಿಸುವ ರಾಜಕಾರಣಿಗಳ ವರ್ತನೆಯನ್ನು 'ಜನಗಣಮನ ಅಧಿನಾಯಕ' ಎಂಬ ಕವನದಲ್ಲಿ ವ್ಯಂಗ್ಯದ ದಾಟಿಯಲ್ಲಿ ಜರೆಯಲಾಗಿದೆ.

ನಮ್ಮೀ ಜನಗಣಮನ ಅಧಿನಾಯಕ
ಎಲ್ಲಿದ್ದಾನೆ?
ಇದ್ದಾನೆ ಇಲ್ಲೇ ಇದ್ದಾನೆ
ಕೈಯಲಿ ಕಲ್ಲನು ಹಿಡಿದಿದ್ದಾನೆ
ಬೀದಿ ದೀಪಗಳ ಕಿಟಕಿಗಾಜುಗಳ
ಒಡೆದಿದ್ದಾನೆ
ಬಸ್ಸಿಗೆ ಬೆಂಕಿ ಹಚ್ಚಿದ್ದಾನೆ
ಪುಸ್ತಕಗಳ ಎಸೆದಿದ್ದಾನೆ ಮರಗಳ ಮುರಿದಿದ್ದಾನೆ
ಹೂಗಳ ಹೊಸಕಿದ್ದಾನೆ
ವರುಷಕ್ಕೊಂದೆರಡಾದರು ಲಂಕಾದಹನದ



ನಾಟಕ ಆಡುತ್ತಾನೆ
ಸದಾ ಎಚ್ಚರವಾಗಿದ್ದಾನೆ (ಜನಗಣಮನ ಅಧಿನಾಯಕ-ಗೋಡೆ)

ಕಾಲೇಜುರಂಗದ ವಿದ್ಯಾರ್ಥಿಜೀವನದಲ್ಲಿ ಅರ್ಥವಿಲ್ಲದ, ಕೆಲಸಕ್ಕೆ ಬಾರದ ಚಳವಳಿಗಳನ್ನು ಹುಟ್ಟುಹಾಕಿ, ದೊಂಬಿ ಎಬ್ಬಿಸಿ, ಹಿಂಸೆಯನ್ನು ಹುಟ್ಟುಹಾಕಿ ತಾನು 'ಯುವ ನಾಯಕ' ಎಂದು ಬಿಂಬಿಸಿಕೊಂಡು ಮುಂದಿನ ರಾಜಕೀಯ ಪ್ರವೇಶಕ್ಕೆ ದಾರಿ ಮಾಡಿಕೊಳ್ಳುವವರ ಮರ್ಮವನ್ನು ಇಲ್ಲಿ ವಿವರಿಸಲಾಗಿದೆ. ಮುಂದಿನ ನುಡಿಯಲ್ಲಿ ಇಂಥವರೇ ವಿಧಾನಸೌಧ, ಲೋಕಸಭೆಗಳನ್ನು ಪ್ರವೇಶಿಸಿ ನಮ್ಮನ್ನು ಆಳುವ ದೊರೆಗಳಾಗುವ ದುರಂತವನ್ನು ಚಿತ್ರಿಸಲಾಗಿದೆ. ಪ್ರಜೆಗಳಾದ ನಾವು ಅವರಿಗೆ 'ಜಯ ಹೇ' ಅನ್ನದಿದ್ದರೆ ನಮಗೆ ನಾವು ಯಾರೆಂಬುದನ್ನು ಅರ್ಥಮಾಡಿಸುತ್ತಾರೆಂದು ಕವಿ ಹೇಳುವಲ್ಲಿ ನಮ್ಮ ರಾಜಕಾರಣದ ಪಾಳೇಗಾರಿಕೆ ಪ್ರವೃತ್ತಿ ಮತ್ತು ಜನಸಾಮಾನ್ಯರ ಅಸಹಾಯಕಸ್ಥಿತಿ ಅಡಗಿರುವುದನ್ನು ಕಾಣಬಹುದಾಗಿದೆ. ಪ್ರಜಾಪ್ರಭುತ್ವದ ಇಂದಿನ ಸಂದರ್ಭದಲ್ಲೂ ಸರ್ವಾಧಿಕಾರವೇ ಮೇಲುಗೈ ಸಾಧಿಸುವ ದುರಂತವನ್ನು ಕವಿ ಶಿವರುದ್ರಪ್ಪನವರು ಇಲ್ಲಿ ಕಾಣಿಸಿರುವುದು ಗಮನಾರ್ಹ ಸಂಗತಿಯಾಗಿದೆ.

'ಕಸಪೊರಕೆ' ಎಂಬ ಕವನದಲ್ಲಿ ದಿನದಿನವೂ ಕಸ ಗುಡಿಸುತ್ತ ತನಗೆ ಏನೂ ತಿಳಿಯದಂತೆ ತನ್ನ ಪಾಡಿಗೆ ತಾನು ಇದ್ದುಬಿಡುವ ಕಸಪೊರಕೆಯ ಸೇವಾಮನೋಧರ್ಮ ಮತ್ತು ತ್ಯಾಗವನ್ನು ಬಿಂಬಿಸಲಾಗಿದೆ.

ಕಸಪೊರಕೆಯಲ್ಲದೆಯೆ
ಬೇರೆ ಗುರುವೇತಕ್ಕೆ ಮಾನವತೆಯನು ಮೇಲೆ
ಎತ್ತಿ ಕೊಂಡೊಯ್ಯುವುದಕೆ! ಈ ಜಗವೆಂಬುದೊಂದು
ಕಸ ತುಂಬಿದರಮನೆಯೋ! ಯುಗಯುಗದಿ ಒಂದೊಂದು
ಹಿರಿಯ ಪೊರಕೆಯು ಬಂದು ಗುಡಿಸುವುದು ಈ ಮನೆಯ
ಆ ಪೊರಕೆಯನೆ ನಾವು 'ಅವತಾರ'ವೆನ್ನುತ್ತ
ಪೂಜಿಪೆವು .................

ಕಸಪೊರಕೆಯೆನಗೆ ಗುರು; ಮತ್ತೆನ್ನ ಬಾಳ ಗುರಿ (ಕಸಪೊರಕೆ-ಚೆಲುವು-ಒಲವು)

ಜಗದ ಕಸ ಗುಡಿಸಿ ಸ್ವಚ್ಛಗೊಳಿಸುವ ಕಸಪೊರಕೆಯ ನಿಸ್ವಾರ್ಥ ಸೇವಾಮನೋಭಾವ, ತ್ಯಾಗಗುಣ ಕವಿಗೆ ಮತ್ತು ಜಗತ್ತಿಗೆ ಅನುಕರಣೀಯವೆಂದು ತೋರುತ್ತಿದೆ. ಜಗದ ಕಸ ಗುಡಿಸುವ ಈ ಕಸಪೊರಕೆ ಜಗದ ಮಾನವನ ಅಂತರಂಗದ ಕಸ ಗುಡಿಸುವ ಮಹಾನ್ ವ್ಯಕ್ತಿಗಳ ವ್ಯಕ್ತಿತ್ವ ಮತ್ತು ಕ್ರಿಯಾಶೀಲತೆಗೆ ಸಾಟಿ ಎನ್ನುವ ಕವಿ, ಕಸಪೊರಕೆಯೆ ತಮಗೆ ಗುರು ಮತ್ತು ಬಾಳ ಗುರಿ ಎಂದು ನುಡಿದಿರುವುದು ಮುಖ್ಯ ಸಂಗತಿಯಾಗುತ್ತದೆ. ಕಸಪೊರಕೆಯ ಅಹಂಕಾರವಿಲ್ಲದ ನಿಸ್ವಾರ್ಥ ಸೇವೆ, ತ್ಯಾಗ ಗುಣಗಳು ಯಾರಿಗಾದರೂ ಗುರು ಮತ್ತು ಗುರಿಯಾಗುವ ಸತ್ವ ಹೊಂದಿವೆ. ಇಲ್ಲಿ ಕಸಪೊರಕೆ ತಳಸಂಸ್ಕೃತಿಯ,

ಶ್ರಮಸಂಸ್ಕೃತಿಯ ಸಂಕೇತವೂ ಆಗುತ್ತದೆ ಎಂದು ಭಾವಿಸಲು ಅವಕಾಶವಿದೆ.

'ಮುಂಬೈ ಜಾತಕ' ಎಂಬ ಕವಿತೆ ಶಿವರುದ್ರಪ್ಪನವರ ಉತ್ತಮ ಕವನಗಳಲ್ಲೊಂದಾಗಿದ್ದು ನಗರ ಬದುಕಿನ ಕೃತಕತೆ, ಒಂಟಿತನ, ಪರಕೀಯತೆ, ಅಸಹಾಯಕತೆ, ದ್ವಂದ್ವವನ್ನು ಸಾರ್ಥಕ ರೀತಿಯಲ್ಲಿ ಹಿಡಿದಿಟ್ಟಿದೆ.

ಹುಟ್ಟಿದ್ದು: ಆಸ್ಪತ್ರೆಯಲ್ಲಿ

ಬೆಳೆದದ್ದು: ಬಸ್ಸು ಟ್ರಾಂ ಕಾರು ಟ್ಯಾಕ್ಸಿ ಎಲೆಕ್ಟ್ರಿಕ್ ಟ್ರೇನುಗಳಲ್ಲಿ

ಕುಡಿದದ್ದು: ಕಾಣದೆಮ್ಮೆಯ ಕೆಚ್ಚಲು ಕರೆದು ಹಳುಹಿಸಿದ ಬಾಟ್ಲಿಯ ಹಾಲು, ಗ್ರೈಪ್ ಸಿರಪ್, ಹಾರ್ಲಿಕ್ಸ್ ಇತ್ಯಾದಿ

ಕಂಡದ್ದು: ಬೆಳಗಿಂದ ಸಂಜೆಯತನಕ ಲಕ್ಷ ಚಕ್ರದ ಉರುಳು ಅವಸರದ ಹೆಜ್ಜೆಯ ಮೇಲೆ ಸರಿವ ಸಾವಿರ ಕೊರಳು

ಕಲಿತದ್ದು: ಕ್ಯೂ ನಿಲ್ಲು;ಫುಟ್‌ಪಾತಿನಲ್ಲೇ ಸಂಚರಿಸು ರಸ್ತೆದಾಟುವಾಗೆಚ್ಚರಿಕೆ; ಓಡು, ಎಲ್ಲಿಯೂ ನಿಲ್ಲದಿರು, ಹೇಗೋ ಅವರಿವರ ತಳ್ಳಿ, ಮುನ್ನುಗ್ಗು, ಎಲ್ಲಾದರು ಸರಿಯೆ ಬೇರೂರು ಹೀರು.

ತಾಯಿ: ಸಾವಿರ ಗಾಲಿ ಉರುಳಿ ಹೊರಳುವ ರಸ್ತೆಯಂಚಿನಲ್ಲೇ ಕೈಹಿಡಿದು ನಡೆಸಿದವಳು. ಇರುವ ಒಂದಿಂಚು ಕೋಣೆಯಲ್ಲೇ ಹೊರಲೋಕವನು ಪರಿಚಯಿಸಿ ಎಚ್ಚರಿಕೆ ಕೊಟ್ಟವಳು.

ತಂದೆ: ಬೆಳಗಿಂದ ಸಂಜೆಯ ತನಕ ಕಣ್ಮರೆಯಾಗಿ ಒಮ್ಮೊಮ್ಮೆ ರಜ ದಿನದಲ್ಲಿ ಕಣ್ಣಿಗೆ ಕಂಡು ಕುಳಿತು ಕೆಮ್ಮುವ ಪ್ರಾಣಿ

(ಮುಂಬೈ ಜಾತಕ-ತೆರೆದ ದಾರಿ)

ನಿಸರ್ಗಸಂಸರ್ಗದಿಂದ ದೂರವಾದ, ತೀರ ಕೃತಕವಾದ, ಪರಕೀಯಭಾವದ ಮುಂಬೈ ನಗರದ ಅರ್ಥರಹಿತ ಬದುಕನ್ನು ಅತ್ಯಂತ ಮಾರ್ಮಿಕವಾಗಿ ಈ ಕವಿತೆಯಲ್ಲಿ ಕಟ್ಟಿಕೊಟ್ಟಿದ್ದಾರೆ, ಕವಿ ಶಿವರುದ್ರಪ್ಪನವರು. ಈ ಕವನ ಮತ್ತು ಇಂಥ ಇನ್ನೂ ಹಲವು ಕವನಗಳು ಶಿವರುದ್ರಪ್ಪನವರು ನವ್ಯ ಪಂಥ'ಕ್ಕೆ ಸೇರಿದ ಕವಿಗಳೆಂಬ ಅನಿಸಿಕೆಯನ್ನುಂಟುಮಾಡುತ್ತವೆ. ಆದರೆ ತೆರೆದ ಮನಸ್ಸಿನ ಶಿವರುದ್ರಪ್ಪನವರು ಎಲ್ಲ ಪಂಥಗಳ ಸಂವೇದನೆಗಳನ್ನು ತಮ್ಮದಾಗಿಸಿಕೊಂಡು ಕಾವ್ಯಕೃಷಿ ಮಾಡಿರುವುದು ಅವರ ಅಂತರಂಗದಲ್ಲಿನ ಕವಿಯ ಬೆಳವಣಿಗೆಯ ದ್ಯೋತಕವೆಂದು ಹೇಳಬಹುದು. ಇಲ್ಲಿ ಹುಟ್ಟಿದ್ದು, ಬೆಳೆದದ್ದು, ಕುಡಿದದ್ದು, ಕಂಡದ್ದು, ಕಲಿತದ್ದು, ತಾಯಿ, ತಂದೆ, ವಿದ್ಯೆ, ಜೀವನ-ಬದುಕಿನ ವಿವಿಧ ಹಂತದ ಈ ಎಲ್ಲ ಸಂಗತಿಗಳೂ ನೈಸರ್ಗಿಕ ಬದುಕಿನಿಂದ



ದೂರವಾದ, ಸಹಜ ಮಾನವಸಂಬಂಧಗಳಿಂದ ದೂರ ಉಳಿದ ಆಧುನಿಕ ನಗರಜೀವನದ ಕೃತಕತೆ, ಪರಕೀಯತೆ, ಏಕಾಕಿತನಗಳನ್ನು ಅತ್ಯಂತ ಧ್ವನಿಪೂರ್ಣವಾಗಿ ವ್ಯಂಜಿಸುತ್ತವೆ. ಕವಿ ಶಿವರುದ್ರಪ್ಪನವರು ಮುಂಬೈ ಜಾತಕವನ್ನು ತುಂಬ ಅರ್ಥಪೂರ್ಣವಾಗಿಯೇ ಬರೆದಿದ್ದಾರೆ. ಇಲ್ಲಿ ನಗರ ಜೀವನದ ಸಂಕೀರ್ಣ ಅನುಭವವನ್ನು ತುಂಬ ಸರಳವಾಗಿ, ತಟಸ್ಥವಾಗಿ ಮತ್ತು ಅಷ್ಟೇ ಧ್ವನಿಪೂರ್ಣವಾಗಿ ಕಟ್ಟಿಕೊಟ್ಟಿರುವುದು ಶಿವರುದ್ರಪ್ಪನವರ ಕಾವ್ಯರಚನೆಯ ಶಕ್ತಿಯನ್ನು ಬಿಂಬಿಸುತ್ತದೆನ್ನಬೇಕು. 'ಇದು ನಗರ' ಎಂಬ ಕವನವೂ ಇದೇ ಮಾದರಿಯದಾಗಿದ್ದು ನಗರಜೀವನದ ಮೋಸ, ಕೃತಕತೆ, ಸಂಕಷ್ಟಗಳನ್ನು ಅರ್ಥಪೂರ್ಣವಾಗಿ ಬಿಂಬಿಸುತ್ತದೆ. 'ಮಾರ್ಕೆಟ್ಟಿನಲ್ಲಿ ಬೇಸಿಗೆ' ಎಂಬ ಕವನವೂ ಯಾಂತ್ರಿಕವಾದ, ಅಸ್ತವ್ಯಸ್ತವಾದ, ಕೃತಕ ನಗರಜೀವನದ ಗೊಂದಲ, ಗಡಿಬಿಡಿ, ಗೋಜಲುಗಳನ್ನು ಹಿಡಿದಿಟ್ಟಿರುವ ಉತ್ತಮ ರಚನೆಯಾಗಿದೆ. ಇಲ್ಲಿ ಮಾನವ ಸಂಬಂಧಗಳಿಗೆ ಬೆಲೆಯಿರದ, ಕೇವಲ ವ್ಯಾಪಾರಿ ಮನೋಭಾವ, ಅಸಹಜತೆ ಮನೆಮಾಡಿರುವ ಸಂಗತಿಯನ್ನು ಕವಿ ಸಮರ್ಥವಾಗಿ ಬಿಡಿಸಿದ್ದಾರೆ.

'ಒರೆಗಲ್ಲು' ಎಂಬ ಕವಿತೆ ಕಣ್ಣಿಗೆ ಕಾಣದ, ಕೈಗೆ ಸಿಗದ ವಂಚಕರನ್ನು ಎದುರಿಸಲು ಬೇಕಾದ ಶಕ್ತಿ, ನಿಯತ್ತುಗಳ ಅವಶ್ಯಕತೆ ಇದೆಯೆಂಬ ಸಂದೇಶವನ್ನು ನೀಡುವ ಉತ್ತಮ ಕವನವಾಗಿದೆ.

ನೂರಾರು ಹಾಲುಬಿಳಿ ಕೊರಳಿನ ಸುತ್ತ ಕಂಸನ ಬೆರಳ
ನೊತ್ತುಗಳ ತೋರಿಸಲೆ?
ನಕಲಿ ಪಾರ್ಥರಿಗಾಗಿ ಏಸೋ ಜನ ಏಕಲವ್ಯರ ಬೆರಳ
ಕತ್ತರಿಸುವಾಚಾರ್ಯ ತಂತ್ರಗಳ ಗರಡಿಗಳ ತೋರಿಸಲೆ?
ಕೆಂಪು ಟೇಪಿನ ಕೋಟೆಯಲಿ ಸೆರೆಯಾಗಿ ಬಿದ್ದಿರುವ
ನೂರಾರು ಮುಗ್ಧರದೃಷ್ಟಗಳ ತೋರಿಸಲೆ?
ಕ್ಷಣಾತ್ರದಲಿ ಸ್ಮಾರಕನಿಧಿಗೆ ಗೋರಿ ಕಟ್ಟುವ
ಕುಶಲ ರೂವಾರಿಗಳತೋರಿಸಲೆ? (ಒರೆಗಲ್ಲು-ಅನಾವರಣ)

ಈ ಆಧುನಿಕ ಕಾಲದಲ್ಲಿಯೂ ಪುರಾಣದ ಕಂಸ, ಪಾರ್ಥ, ದ್ರೋಣಾಚಾರ್ಯರಂಥ ಮೋಸದ ಜನರು ಇರುವುದನ್ನು ಕವಿ ತಮ್ಮ ಸೂಕ್ಷ್ಮ ದೃಷ್ಟಿಯಿಂದ ಗ್ರಹಿಸಿ ತೋರಿಸಲು ಸನ್ನದ್ಧರಾಗಿರುವುದು ಅವರ ಸಾಮಾಜಿಕ ಪ್ರಜ್ಞೆ ಮತ್ತು ಎಚ್ಚರದ ಸ್ಥಿತಿಯನ್ನು ಪ್ರಕಟಪಡಿಸುತ್ತದೆ.

'ಜಾತ್ರೆ' ಎಂಬ ಕವನವು ಜಿಎಸ್‌ಎಸ್ ಅವರ ಸಾಮಾಜಿಕ ಪ್ರಜ್ಞೆ, ಮಾನವೀಯತೆ, ಪ್ರಾಣಿದಯೆಗೆ ಹಿಡಿದ ಕನ್ನಡಿಯಾಗಿದೆ. ಜಾತ್ರೆಯ ಸಂದರ್ಭದಲ್ಲಿ ಹತ್ತಾರು ಗ್ರಾಮದೇವತೆಗಳ ಮೆರವಣಿಗೆ, ಕುರಿ, ಕೋಳಿ, ಕೋಣಗಳ ಬಲಿ; ಬೀಗದ ಹರಕೆ, ಬೆತ್ತಲೆಸೇವೆ, ಸಿಡಿ ಏರುವುದು ಮುಂತಾದ ಅನಾಗರಿಕ ಆಚರಣೆಗಳು ವಿಜೃಂಭಿಸಿ

ಅದೊಂದು ರೀತಿಯ ಪುರಾಣಕಾಲದ ಗೊಡ್ಡು ಸಂಪ್ರದಾಯ, ಮೂಢನಂಬಿಕೆಗಳ ಸಂತೆಯಾಗುವ ಸಂದರ್ಭವೇ ಅಧಿಕವಾಗಿರುತ್ತದೆ. ಇವೆಲ್ಲವೂ ಮಾನವ ಶೋಷಣೆಯ ವಿವಿಧ ಬಗೆಗಳೆಂಬುದು ಕವಿಯ ಇಂಗಿತ. ಹಾಗಾಗಿ,

ಈ ಎಲ್ಲದಕ್ಕೂ ಹಿನ್ನೆಲೆಯಾದ ಏ ಪೂಜಾರಿ ಶತಮಾನದಿಂದಲೂ
ನಡೆಯುತ್ತಿದೆಯಯ್ಯ ನಿನ್ನ ಈ ಚಾತುರ್ಯ
ನಿನಗೋ ಮಡಿ;ಪುರಾತನ ಮಂತ್ರ ತಂತ್ರದ ಗರಡಿ
ಯಲ್ಲಿ ನುರಿತವನು ನೀನು. ನಿನಗೆ ಬೇಕಾದದ್ದು
ಬರೀ ದಕ್ಷಿಣೆ ಗೊತ್ತು ನೀನೇ ರಚಿಸಿದ್ದು ಈ
ನಂಬಿಕೆಯ ವ್ಯೂಹ, ನಿನಗೊ ತೀರದ ದಾಹ (ಜಾತ್ರೆ-ಅನಾವರಣ)

ಹೀಗೆ ಪುರಾಣದ ಮೂಢನಂಬಿಕೆ, ಗೊಡ್ಡು ಸಂಪ್ರದಾಯ ಆಚರಣೆಗಳನ್ನು ಪೂಜಾರಿ ತನ್ನ ಹೊಟ್ಟೆಪಾಡಿನ ದಕ್ಷಿಣೆ ಮತ್ತು ಸುಖದ ಬದುಕಿಗಾಗಿ ಸೃಷ್ಟಿಸಿ ಜನಮನದಲ್ಲಿ ನೆಲೆಯಾಗಿಸಿ, ತನ್ನ ಸ್ವಾರ್ಥಸಾಧನೆ ಮಾಡಿಕೊಳ್ಳುತ್ತಿರುವುದನ್ನು ಕವಿ ಕಟುವಾಗಿ ವಿಡಂಬಿಸುತ್ತಾರೆ.

'ಗಾಂಧಿ' ಎಂಬ ಕವನ ಉತ್ತಮ ರಚನೆಯಾಗಿದ್ದು, ಗಾಂಧೀಜಿಯವರ ಸರಳತೆ, ಅಹಿಂಸಾತ್ಮಕ ಹೋರಾಟ, ಸತ್ಯಸಂಧತೆಯನ್ನು ಕವನದ ಪೂರ್ವಾರ್ಧದಲ್ಲಿ ಚಿತ್ರಿಸಿ, ಅವರ ಮರಣದ ನಂತರ ದೇಶದ ಮೂಲೆಮೂಲೆಗಳಲ್ಲಿ ಗಾಂಧಿಪ್ರತಿಮೆಗಳನ್ನು ಸ್ಥಾಪಿಸಿ, ಅವರ ಆದರ್ಶ, ಕನಸು, ಮೌಲ್ಯಗಳನ್ನು ಗಾಳಿಗೆ ತೂರಿ ಜನ ತಮ್ಮ ಪಾಡಿಗೆ ತಾವು ಸ್ವಾರ್ಥಸಾಧನೆಯಲ್ಲಿ ತೊಡಗಿರುವುದನ್ನು ಉತ್ತರಾರ್ಧದಲ್ಲಿ ಚಿತ್ರಿಸಲಾಗಿದೆ. ಗಾಂಧಿಯುಗದ ನಂತರದ ಪೀಳಿಗೆಗೆ 'ಗಾಂಧಿ' ಯಾರು ಎಂಬುದೇ ತಿಳಿದಿಲ್ಲ. ಗಾಂಧಿ ಪ್ರತಿಮೆಗಳು ಧೂಳು, ಕಸಕಡ್ಡಿಗಳಿಂದ ಆವರಿಸಿದ್ದರೂ ಹಸನು ಮಾಡುವ ಜನರಿಲ್ಲ. ಹೀಗೆ ಸ್ವಾತಂತ್ರ್ಯಾನಂತರದಲ್ಲಿ ಗಾಂಧಿಯವರ ವ್ಯಕ್ತಿತ್ವ ಮತ್ತು ಅವರ ಸಿದ್ಧಾಂತಗಳು ಜನರಿಂದ ಕಣ್ಮರೆಯಾಗಿರುವ ನೋವಿನ, ದುರಂತದ ಸ್ಥಿತಿಯನ್ನು ಈ ಕವನದಲ್ಲಿ ಕವಿ ತುಂಬ ಮಾರ್ಮಿಕವಾಗಿ ಕಡೆದಿಟ್ಟಿದ್ದಾರೆನ್ನಬೇಕು.

'ಕೃಷಿಕನಿಗೆ' ಎಂಬ ಕವನದಲ್ಲಿ ಬಹುಕಾಲ ಬಾಳುವ, ಬಾಳ ಬೆಳಗುವ, ಹೊಟ್ಟೆ ತುಂಬುವ ಹಣ್ಣು, ಕಾಯಿ, ಫಲಗಳ ಮರಗಳನ್ನು ಬೆಳೆಗಳನ್ನು ರೈತ ಬೆಳೆದು ಅವನ ಜೀವನ ಹಸನಾಗಲೆಂಬ ಆಶಯವಿದ್ದರೆ, 'ಇದೋ ನಿಮಗೆ ವಂದನೆ' ಎಂಬ ಕವನದಲ್ಲಿ ಚಳಿ ಮಳೆ ಬಿಸಿಲಿಗೆ ಅಂಜದೆ, ವೈರಿಗಳನ್ನು ಹಿಮ್ಮೆಟ್ಟಿಸಿ ದೇಶವನ್ನು ಕಾಯುವ ಸೈನಿಕನ ತ್ಯಾಗಮನೋಭಾವದ ಚಿತ್ರಣವಿದೆ.

'ಖಾಲಿ ಸೈಟಿನ ಕಡೆಗೆ' ತುಂಬ ಅರ್ಥಪೂರ್ಣ ಕವನ. ಕವನದ ಮೊದಲ ಭಾಗದಲ್ಲಿ ಬಡಾವಣೆಯ ಖಾಲಿ ಸೈಟಿನಲ್ಲಿ ನಿವೇಶನದ ಮಾಲೀಕ ಕಲ್ಲು, ಜಲ್ಲಿ, ಮರಳು,



ಸಿಮೆಂಟು, ಕಬ್ಬಿಣ ತುಂಬಿಸಿ ಮನೆ ಕಟ್ಟುತ್ತಾನೆ. ವೈಭವದಿಂದ ಗೃಹಪ್ರವೇಶವಾಗುತ್ತದೆ. ಆದರೆ ಮನೆ ಕಟ್ಟಿದ, ಸ್ವತಃ ಮನೆಯಿಲ್ಲದ ಅನಾಥ ಕೂಲಿಗಳು ಆ ಸಂಭ್ರಮದಿಂದ ದೂರ ಉಳಿದು ಗೃಹಪ್ರವೇಶದ ಔತಣದ ಚೂರುಪಾರಿಗೆ ಕಾದು ನಿಲ್ಲುತ್ತಾರೆಂದು ಕವಿ ಹೇಳಿರುವುದು ಸತ್ಯಸಂಗತಿಯಾಗಿದ್ದು, ಈ ದೇಶದ ಬಡವ-ಬಲ್ಲಿದನ ಅಂತರವನ್ನು ಧ್ವನಿಸುತ್ತದೆ. ಈ ಹೊಸ ಮನೆಗೆ ಪ್ರವೇಶ ಮಾಡಿದ ಮಾಲೀಕ ದಿನ ಕಳೆದಂತೆ ವಯಸ್ಸಾಗಿ ಬೆನ್ನುಬಾಗಿ ಕೋಲೂರಿ ಕೊನೆಗೆ ಮರಣಹೊಂದುತ್ತಾನೆ. ಅವನ ಶವವನ್ನು ಮತ್ತೆ ಖಾಲಿ ಸೈಟಿಗೆ ಸಾಗಿಸಲಾಗುತ್ತದೆ. ಒಟ್ಟಿನಲ್ಲಿ ಈ ಕವನ ಮಾನವ ಬದುಕಿನ ಆರಂಭ ಹಾಗೂ ಅಂತ್ಯವನ್ನು ಪ್ರತಿಮಾರೂಪದಲ್ಲಿ ಸಾಂಕೇತಿಕವಾಗಿ ಕಟ್ಟಿಕೊಟ್ಟಿರುವ ಉತ್ತಮ ಕವನವೆನ್ನಬೇಕು.

'ಉರಿವ ಒಲೆಗಳ ಮುಂದೆ' ಎಂಬ ಕವನ ಶ್ರೀಮತಿ ಆರ್. ನಿರ್ಮಲಾ ಅವರ ಕವನಸಂಕಲನಕ್ಕೆ ಬರೆದ ಮುನ್ನುಡಿ ಕವಿತೆಯಾಗಿದ್ದರೂ ಉರಿವ ಒಲೆಗಳ ಮುಂದೆ ತಮ್ಮ ಜೀವನವನ್ನು ಸವೆಸುವ ಸ್ತ್ರೀಜೀವನದ ದುರಂತವನ್ನು ಧ್ವನಿಪೂರ್ಣವಾಗಿ ಕಟ್ಟಿಕೊಡುವ ಒಂದು ಶ್ರೇಷ್ಠ ಕವಿತೆಯೆನ್ನಬೇಕು.

ಉರಿವ ಒಲೆಗಳ ಮುಂದೆ
ನೋಡುತ್ತಾಳೆ ನಿರ್ಮಲಾ
ಪಾತ್ರೆಯ ಒಳಗೆ ಕೊತಕೊತ ಕುದಿವ ಅನುಭವಗಳನ್ನು
(ಉರಿವ ಒಲೆಗಳ ಮುಂದೆ- ಅಗ್ನಿಪರ್ವ)

ಹೀಗೆ ತನ್ನ ದೇಹ, ಮನಸ್ಸು ಎಂಬ ಪಾತ್ರೆಯಲ್ಲಿ ಕೊತಕೊತನೆ ಕುದಿಯುವ ಅನುಭವ ಗಳನ್ನು ಸ್ತ್ರೀಯು ನೋಡುತ್ತಿದ್ದಾಳೆ, ಅನುಭವಿಸುತ್ತಿದ್ದಾಳೆ. ಆದರೆ ಅವೆಲ್ಲವನ್ನೂ ಅಕ್ಷರದ ಮೂಲಕ ಹೊರಚೆಲ್ಲುವ ಆಸೆ ಇದ್ದರೂ ಅದು ಸಾಧ್ಯವಾಗದ ಪುರುಷಪ್ರಧಾನ ಸಮಾಜದ ಇಕ್ಕಟ್ಟಿನಲ್ಲಿ ಸಿಲುಕಿ ಒದ್ದಾಡುತ್ತಿದ್ದಾಳೆ. ಇದು ನಮ್ಮ ದೇಶದ ಮಹಿಳೆ ಯರಿಗೆ ನಿರಂತರ ಒದ್ದಾಟ, ನೋವು, ತಳಮಳದ ಸಂಗತಿಯೇ ಆಗಿದೆ. ಕೊನೆಗೆ ಕವಿ 'ಉರಿವ ಒಲೆಗಳ ನಡುವೆ ಬೆಳದಿಂಗಳನ್ನು, ಉತ್ಕಟ ಜೀವನಪ್ರೀತಿಯನ್ನು' ಉಳಿಸಿಕೊಳ್ಳ ಬೇಕೆಂದು ಹಾರೈಸುತ್ತಾರೆ. ಈ ಹಾರೈಕೆ ಫಲಿಸಬೇಕಾದರೆ ಪುರುಷಪ್ರಧಾನ ಸಮಾಜದ ನಡವಳಿಕೆ, ರೀತಿನೀತಿಗಳು ಬದಲಾಗಬೇಕಾಗಿದೆ; ಸ್ತ್ರೀಯೂ ಕೂಡ ಬದುಕಿನ ಬಹುದೊಡ್ಡ ಚೇತನ, ಶಕ್ತಿ ಎಂಬುದನ್ನು ಎಲ್ಲರೂ ಅರಿಯಬೇಕಾಗಿದೆ; ಅವಳಿಗೆ ಸ್ವಾತಂತ್ರ್ಯ ವನ್ನು ನೀಡಬೇಕಾಗಿದೆ. ಕವಿ ಶಿವರುದ್ರಪ್ಪನವರು ತಮ್ಮ 'ಅವಲೋಕನ' ಎಂಬ ಕವಿತೆಯಲ್ಲಿ:

ನಾನು ನನ್ನದೇ ಆದೊಂದಿಷ್ಟು ನೆಲವ
ನ್ನುತ್ತು ಬಿತ್ತಿ ಫಸಲು ತೆಗೆದಿದ್ದೇನೆ
ಕತ್ತಲೆಯ ಓಣಿಗಳಲ್ಲಿ ಹಣತೆ ಹಚ್ಚಿದ್ದೇನೆ

ಮಲಗಿದ್ದ ತಂತಿಗಳ ಮೇಲೆ ಬೆರಳಾಡಿಸಿದ್ದೇನೆ
ಈ ನೂರು ಮರ ನೂರು ಸ್ವರಗಳ ನಡುವೆ
ನನ್ನದೂ ಒಂದು ಸ್ವರ ಎಂದು ತಿಳಿದಿದ್ದೇನೆ (ಅವಲೋಕನ-ಅಗ್ನಿಪರ್ವ)

ಎಂದು ತಮ್ಮ ಕಾವ್ಯ ಕೃಷಿಯ ಬಗ್ಗೆ ವಿನಯದಿಂದ ಹೇಳಿಕೊಂಡಿದ್ದಾರೆ. ಆದರೆ ನೂರು ಮರ ನೂರು ಸ್ವರಗಳ ನಡುವೆ ಶಿವರುದ್ರಪ್ಪನವರ ಸ್ವರವು ವಿಶೇಷ ರೀತಿಯಲ್ಲಿ ಸತ್ವಶಾಲಿಯಾಗಿರುವುದಲ್ಲದೆ, ಅದು ಘನತೆಯಿಂದ ಕೂಡಿರುವ ಮಹತ್ವದ ಕಾವ್ಯದಾಖಲೆಯೆಂಬುದು ಅವರ ಕಾವ್ಯದ ಓದಿನಿಂದ ತಿಳಿಯುವ ಸಂಗತಿಯಾಗಿದೆ.

□

ಅರ್ಥಪ್ರಾಣಾಭಿಮಾನವ ಕೊಟ್ಟೆನೆಂಬರಲ್ಲದೆ
ಕೊಟ್ಟ ಭಕ್ತರನಾರನೂ ಕಂಡುದಿಲ್ಲ.
ದಾಸ ತನ್ನ ವಸ್ತ್ರವ ಕೊಟ್ಟನಲ್ಲದೆ ತನ್ನ ಕೊಟ್ಟುದಿಲ್ಲ.
ಬಲ್ಲಾಳ ತನ್ನ ವಧುವ ಕೊಟ್ಟನಲ್ಲದೆ ತನ್ನ ಕೊಟ್ಟುದಿಲ್ಲ.
ಸಿರಿಯಾಳ ತನ್ನ ಮಗನ ಕೊಟ್ಟನಲ್ಲದೆ ತನ್ನ ಕೊಟ್ಟುದಿಲ್ಲ.
ಇವೆಲ್ಲ ಹೊರಗಣ ಮಾತು !
ಕೂಡಲಸಂಗಮದೇವರಲ್ಲಿ ತನ್ನ ಕೊಟ್ಟ ಸಿಂಧುಮರಾಳ.
- **ಬಸವಣ್ಣ**

# ಶಿವ-ಜಗತ್ತುಗಳ ಕಾರ್ಯಕಾರಣಭಾವ: ಒಂದು ಚಿಂತನೆ

**ವಿದ್ವಾನ್ ಎಚ್.ವಿ. ನಾಗರಾಜರಾವ್**

ಭಗವಂತನಾದ ಶಿವನಿಂದ ಜಗದುದಯಸ್ಥಿತಿಪ್ರಳಯಗಳು ನಡೆಯುವುವು. ಅವೆಲ್ಲವೂ ಅವನ ಇಚ್ಛಾಶಕ್ತಿಯ ಪ್ರಭಾವ ಎನ್ನುವುದು ಆಸ್ತಿಕರ ವಿಶ್ವಾಸ. ಜಗತ್ತಿನ ಮೂಲಕಾರಣವನ್ನು ಶಿವ, ವಿಷ್ಣು, ಬ್ರಹ್ಮ ಇತ್ಯಾದಿ ನಾನಾ ಹೆಸರುಗಳಿಂದ ಬೇರೆ ಬೇರೆ ಮತಗಳು ಕರೆಯಬಹುದು. ಜಗತ್ತು ಕಾರ್ಯ, ಭಗವಂತನು ಕಾರಣ ಎಂದು ಕಾರ್ಯಕಾರಣಭಾವ. ಕಾರ್ಯವಾದ ಜಗತ್ತು ಪ್ರತ್ಯಕ್ಷ, ಕಾರಣ ಅಪ್ರತ್ಯಕ್ಷ. ಕಾರಣವಿಲ್ಲದೆ ಕಾರ್ಯವುಂಟಾಗದು. ಬೆಂಕಿಯಿಲ್ಲದೆ ಹೊಗೆಯಿಲ್ಲ. ಹಾಲಿಲ್ಲದೆ ಬೆಣ್ಣೆಯಿಲ್ಲ. ಇದನ್ನೇ ಬ್ರಹ್ಮಸೂತ್ರವು 'ಜನ್ಮಾದ್ಯಸ್ಯ ಯತಃ' ಎಂದು ಪ್ರತಿಪಾದಿಸಿದೆ. ನಾನಾ ವೈಚಿತ್ರ್ಯಯುತವಾದ, ನಮ್ಮ ಬುದ್ಧಿಗೆ ಸಂಪೂರ್ಣವಾಗಿ ಗೋಚರವಾಗದ, ಊಹೆಗೂ ನಿಲುಕದಷ್ಟು ವಿಶಾಲವಾದ ಈ ವಿಶ್ವದ ಉತ್ಪತ್ತಿ-ಸ್ಥಿತಿ-ಲಯಗಳು ಯಾವುದರಿಂದ ಆಗುತ್ತಿರುವುವೋ ಅದು 'ಬ್ರಹ್ಮ' ಎಂದು ಅದರ ತಾತ್ಪರ್ಯ.

ಆದರೆ ಆ ಕಾರಣ ಯಾವ ಸ್ವರೂಪದ್ದು ಎಂಬುದು ಜಿಜ್ಞಾಸೆಗೆ ವಿಷಯವಾಗಿದೆ. ಒಂದೇ ಕಾರ್ಯಕ್ಕೆ ಅನೇಕ ಕಾರಣಗಳು ಇರುತ್ತವೆ. ಅತ್ಯಂತ ಸರಳವಾದ, ಸರ್ವರಿಗೂ ಪರಿಚಿತವಾದ ಒಂದು ಉದಾಹರಣೆಯನ್ನು ತೆಗೆದುಕೊಳ್ಳೋಣ. ಘಟ (ಮಡಕೆ) ಎಂಬುದು ಒಂದು ಕಾರ್ಯ. ಇದರ ಕಾರಣಗಳು ಹಲವು. ಮಣ್ಣು ಇಲ್ಲದಿದ್ದರೆ ಮಡಕೆಯಾಗದು. ಆದ್ದರಿಂದ ಮಣ್ಣು ಪ್ರಥಮ ಕಾರಣ. ಇದನ್ನು ಶಾಸ್ತ್ರಜ್ಞರು 'ಉಪಾದಾನಕಾರಣ' ಎಂದು ಕರೆಯುತ್ತಾರೆ. ಇದನ್ನೇ ಇಂಗ್ಲಿಷ್‌ನಲ್ಲಿ Material Cause ಎನ್ನುತ್ತಾರೆ. ಕೇವಲ ಮಣ್ಣು ಇದ್ದರೆ ಅದು ಎಂದೂ ಮಡಕೆ ಆಗುವುದಿಲ್ಲ. ಮಡಕೆಯನ್ನು ಮಾಡಲು ಇಷ್ಟಪಡುವ, ಹೇಗೆ ಮಾಡುವುದೆಂದು ತಿಳಿದಿರುವ ಕುಂಬಾರನು ಬೇಕು. ಆ ಕುಂಬಾರನು ಘಟದ ನಿಮಿತ್ತಕಾರಣ. ಇದನ್ನು ಇಂಗ್ಲಿಷ್‌ನಲ್ಲಿ Efficient Cause ಎಂದು ಕರೆಯುತ್ತಾರೆ. ಇದರ ಜೊತೆಗೆ ಕುಂಬಾರನ ಚಕ್ರ, ಆ ಚಕ್ರವನ್ನು ತಿರುಗಿಸಲು ಕೋಲು, ಮಾಡುವ ಸ್ಥಳ, ಕಾಲ ಇವೆಲ್ಲವೂ ಬೇಕು. ಅವು ಸಹಕಾರಿ ಕಾರಣಗಳು. ಇವೆಲ್ಲವುಗಳ ಸಂಯೋಗದಿಂದ 'ಘಟ' ಎಂಬ ಕಾರ್ಯದ ಉತ್ಪತ್ತಿ.

ಹೀಗಿರುವಾಗಿ ಶಿವನು (ಬ್ರಹ್ಮ, ವಿಷ್ಣು) ಜಗತ್ತಿಗೆ ಎಂಥ ಕಾರಣ? ಉಪಾದಾನಕಾರಣವೋ ನಿಮಿತ್ತಕಾರಣವೋ ಅಥವಾ ಸಹಕಾರಿ ಕಾರಣವೋ? ಸಹಕಾರಿ

ಕಾರಣಕ್ಕೆ ಜ್ಞಾನೇಚ್ಛಾಪ್ರಯತ್ನಗಳಿರುವುದಿಲ್ಲ. ಕುಂಬಾರನ ಮನೆಯಲ್ಲಿರುವ ಚಕ್ರಕ್ಕೆ ಘಟವಿಷಯಕ ಜ್ಞಾನವಾಗಲಿ, ಘಟವನ್ನು ಮಾಡಬೇಕು ಎಂಬ ಇಚ್ಛೆಯಾಗಲಿ, ಘಟದ ಉತ್ಪತ್ತಿಗೆ ಅನುಕೂಲವಾದ ಪ್ರಯತ್ನವಾಗಲಿ ಇಲ್ಲವೆಂಬುದು ಸ್ಪಷ್ಟ. ಕುಂಬಾರನು ತಿರುಗಿಸಿದಾಗ ಅದು ತಿರುಗುತ್ತದೆ, ಅಷ್ಟೆ.

ಹೀಗೆಯೇ ಉಪಾದಾನಕಾರಣವಾದ ಮಣ್ಣಿನಲ್ಲೂ ಜ್ಞಾನೇಚ್ಛಾಪ್ರಯತ್ನಗಳಿಲ್ಲ. ಅವೆಲ್ಲವೂ ಇರುವುದು ನಿಮಿತ್ತಕಾರಣನಾದ ಕುಂಬಾರನಲ್ಲಿ ಮಾತ್ರ. ಇದೇ ರೀತಿಯಲ್ಲಿ ಜ್ಞಾನೇಚ್ಛಾಪ್ರಯತ್ನಗಳನ್ನು ಹೊಂದಿರುವ ಶಿವನು ಜಗತ್ತಿಗೆ ನಿಮಿತ್ತಕಾರಣ. ನಿತ್ಯವಾದ ಪರಮಾಣುಗಳು ಜಗತ್ತಿನ ಉಪಾದಾನಕಾರಣ ಎಂದು ನೈಯಾಯಿಕರು (ಗೌತಮ ಮಹರ್ಷಿಯ ಅನುಸಾರಿಗಳಾದ ನ್ಯಾಯಮತಾವಲಂಬಿಗಳು) ಹೇಳುತ್ತಾರೆ.

ವೇದಾಂತಮತಾನುಸಾರಿಗಳು ಶ್ರುತಿಪ್ರಾಮಾಣ್ಯವನ್ನು ಒಪ್ಪುತ್ತಾರೆ. ಎಂದರೆ ಅವರಿಗೆ ಉಪನಿಷತ್ತಿನ ಮಾತುಗಳೇ ಪರಮಪ್ರಮಾಣ. ಅವುಗಳು ಹೇಳುವಂತೆ ಬ್ರಹ್ಮವು (ಅಥವಾ ಶಿವ, ವಿಷ್ಣು, ಈಶ್ವರ) ಈ ಜಗತ್ತಿಗೆ ನಿಮಿತ್ತಕಾರಣವೂ, ಉಪಾದಾನಕಾರಣವೂ ಆಗಿದೆ. "ಸೋಽಕಾಮಯತ| ಬಹುಸ್ಯಾಂ ಪ್ರಜಾಯೇಯೇತಿ|" ಎಂದು ಉಪನಿಷದ್ ವಾಕ್ಯ. 'ಆ ಬ್ರಹ್ಮವು ಇಷ್ಟಪಟ್ಟಿತು. ನಾನು ನಾನಾರೂಪಿಯಾಗಬೇಕು ಎಂದು' ಎಂಬುದು ಅದರ ತಾತ್ಪರ್ಯ. ಇಷ್ಟಪಟ್ಟಿತು ಎಂಬುದರಿಂದ ಅದರ ಚೇತನತ್ವವು ಸಿದ್ಧವಾಗಿ ಅದು ನಿಮಿತ್ತಕಾರಣವೆಂಬುದು ದೃಢವಾಗಿದೆ. ನಾನೇ ನಾನಾರೂಪಿಯಾಗಬೇಕು ಎಂದು ಹೇಳಿರುವುದರಿಂದ ಅದೇ ಜಗತ್ತಾಗಿದೆ. ಆದ್ದರಿಂದ ಅದು ಉಪಾದಾನಕಾರಣವೂ ಆಗಿದೆ. ಲೋಕದಲ್ಲಿ ಉಪಾದಾನವೂ, ನಿಮಿತ್ತವೂ ಬೇರೆಬೇರೆಯಾಗಿರುವುದೇ ಕಂಡುಬರುತ್ತದೆ. ಒಂದೇ ಉಪಾದಾನವೂ, ನಿಮಿತ್ತವೂ ಆಗಿರುವುದು ಎಲ್ಲೂ ಕಂಡುಬರುವುದಿಲ್ಲ. ಎಂದರೆ ಈ ಪ್ರಶ್ನೆಗೆ ಉತ್ತರವನ್ನು ಶ್ರುತಿಯು ಜೇಡರಹುಳುವಿನ ದೃಷ್ಟಾಂತದಿಂದ ಕೊಡುತ್ತದೆ.

'ಯಥೋರ್ಣನಾಭಿಃ ಸೃಜತೇ ಗೃಹ್ಣತೇ ಚ'

ಊರ್ಣನಾಭಿಯು (ಜೇಡರಹುಳು) ತನ್ನಿಂದಲೇ ಬಲೆಯನ್ನು ನಿರ್ಮಿಸುತ್ತದೆ. ಆ ಬಲೆಯನ್ನು ತನ್ನಲ್ಲೇ ತನಗೆ ಬೇಕಾದಾಗ ಒಳಗೆಳೆದುಕೊಳ್ಳುತ್ತದೆ. ಇಲ್ಲಿ ಊರ್ಣನಾಭಿಯೇ ಉಪಾದಾನಕಾರಣವೂ, ನಿಮಿತ್ತಕಾರಣವೂ ಆಗಿದೆ. ಇದನ್ನೇ ಶಾಸ್ತ್ರಜ್ಞರು 'ಅಭಿನ್ನನಿಮಿತ್ತೋಪಾದಾನ' ಎಂದು ಕರೆಯುತ್ತಾರೆ. ಅದ್ವೈತ ಸಿದ್ಧಾಂತಾನುಸಾರವಾಗಿ ಬ್ರಹ್ಮವನ್ನು ಬಿಟ್ಟು ಬೇರೆ ಯಾವ ತತ್ತ್ವವೂ ವಸ್ತುತಃ ಇಲ್ಲ. ಆದ್ದರಿಂದ ಬ್ರಹ್ಮವು ಕೇವಲ ನಿಮಿತ್ತ, ಉಪಾದಾನಕಾರಣ ಬೇರೊಂದಿದೆ ಎಂದು ಹೇಳಲಾಗದು.

ಈ ಬಗೆಗೆ ಶಿವಶರಣರ ನಿಲುವೇನು? ಅವರು ಭಿನ್ನನಿಮಿತ್ತೋಪಾದಾನವಾದಿಗಳೋ ಅಥವಾ ಅಭಿನ್ನನಿಮಿತ್ತೋಪಾದಾನ ವಾದವನ್ನು ಒಪ್ಪುವವರೋ? ಈ ಬಗೆಗೆ ಬೆಳಕನ್ನು



ಚೆಲ್ಲುವ ಒಂದೆರಡು ವಚನಗಳನ್ನು ನೋಡೋಣ:

> ಕೀಟಕ ಸೂತ್ರದ ನೂಲ ಗೂಡ ಮಾಡಿ ಸುತ್ತಿರ್ಪಂತೆ
> ಸೂತ್ರಕ್ಕೆ ನೂಲನೆಲ್ಲಿಂದ ತಂದಿತ್ತಯ್ಯಾ?
> ರಾಟೆಯಿಲ್ಲ, ಅದಕ್ಕೆ ಹಂಜಿ ಮುನ್ನವೆ ಇಲ್ಲ, ನೂತವರಾರೋ?
> ತನ್ನೊಡಲ ನೂಲ ತೆಗೆದು ಪಸರಿಸಿ,
> ಅದರೊಳು ಪ್ರೀತಿಯಿಂದೊಲಿದಾಡಿ,
> ತುದಿಯಲ್ಲಿ ತನ್ನೊಳಗದ ಮಡಗಿಕೊಂಡಿಪ್ಪಂತೆ,
> ತನ್ನಿಂದಾದ ಜಗವ ತನ್ನೊಳಗೈದಿಸಿಕೊಳ್ಳಬಲ್ಲ
> ನಮ್ಮ ಕೂಡಲಸಂಗಮದೇವ

ಇಲ್ಲಿ ಕೀಟಕದ ಎಂದರೆ ಜೇಡರಹುಳುವಿನ ದೃಷ್ಟಾಂತವನ್ನೇ ಬಳಸಿಕೊಂಡಿರುವುದು ಸ್ಪಷ್ಟ. ಕೂಡಲಸಂಗಮದೇವನಿಂದಲೇ, ಬೇರೆ ಉಪಾದಾನವಿಲ್ಲದೆ ಜಗತ್ತು ಆವಿರ್ಭವಿಸಿದೆ. ತನ್ನೊಳಗೇ ಅದನ್ನು ಅವನೇ ಅಡಗಿಸಿ ಇಟ್ಟುಕೊಳ್ಳುತ್ತಾನೆ ಎಂದು ಹೇಳಿರುವುದರಿಂದ ಬಸವಣ್ಣನವರು ಅಭಿನ್ನನಿಮಿತ್ತೋಪಾದಾನವನ್ನೇ ಸಮರ್ಥಿಸಿದ್ದಾರೆ.

ಅಲ್ಲಮಪ್ರಭುಗಳೂ ಅಭಿನ್ನನಿಮಿತ್ತೋಪಾದಾನವಾದವನ್ನೇ ಒಪ್ಪಿದ್ದಾರೆಂದು ಅವರ ಒಂದು ವಚನದಿಂದ ಸ್ಪಷ್ಟವಾಗುತ್ತದೆ.

> ಸಮುದ್ರದೊಳಗೆ ನೊರೆತೆರೆಗಳು ನೆಗಳ್ದವೆಂದಡೆ
> ತಾ ಸಮುದ್ರದಿಂದ ಅನ್ಯವಪ್ಪವೆ?
> ನಿರ್ವಿಕಾರ ನಿತ್ಯನಿರಂಜನನಿರ್ಗುಣ ಪರಿಪೂರ್ಣನಿರ್ವಿಕಲ್ಪ
> ಪರಬ್ರಹ್ಮ ಶಿವನಿಂದ ಜಗತ್ತು ಉದಯಿಸಿತ್ತು ಎಂದಡೆ
> ಶಿವನಿಂದ ಅನ್ಯವೆನಬಹುದೆ?
> ಇಂತಪ್ಪ ಅರಿವು ನೀವು ಕೊಟ್ಟ ಸಮ್ಯಗ್ಜ್ಞಾನಕ್ಕೆ
> ಅರಿದಪ್ಪುದಯ್ಯಾ ಗುಹೇಶ್ವರ

ಸಮುದ್ರದಿಂದ ನೂರಾರು ಅಲೆಗಳು, ನೀರ್ಗುಳ್ಳೆಗಳು ಹುಟ್ಟುತ್ತವೆ. ಅದರಲ್ಲೇ ಲೀನವಾಗುತ್ತವೆ. ಅವು ಯಾವುವೂ ಸಮುದ್ರದಿಂದ ಬೇರೆ ಅಲ್ಲ. ಈ ಎಲ್ಲ ವೈವಿಧ್ಯಮಯ ಜಗತ್ತು ಶಿವನಿಂದಲೇ ಉದಯಿಸಿದೆ. ಅವನಲ್ಲೇ ಕೊನೆಗೆ ಅಡಗಿ ಕುಳಿತುಕೊಳ್ಳುತ್ತವೆ. ಇದನ್ನೇ ತೈತ್ತಿರೀಯೋಪನಿಷತ್ತು -

> ಯತೋ ವಾ ಇಮಾನಿ ಭೂತಾನಿ ಜಾಯಂತೇ
> ಯೇನ ಜಾತಾನಿ ಜೀವಂತಿ, ಯಂ ಪ್ರಯಂತ್ಯಭಿಸಂವಿಶಂತಿ
> ತದ್ ಬ್ರಹ್ಮ ತ್ವಂ ವಿಜಿಜ್ಞಾಸಸ್ವ

ಎಂದು ಹೇಳಿದೆ. "ಯಾವುದರಿಂದ ಎಲ್ಲ ಮಹಾಭೂತಗಳು ಹುಟ್ಟಿದುವೋ, ಯಾವುದರಿಂದ ಜೀವಿಸುವುವೋ, ಕೊನೆಯಲ್ಲಿ ಮತ್ತೆ ಯಾವುದನ್ನು ಸೇರುವುವೋ ಅದೇ ಬ್ರಹ್ಮವೆಂದು ತಿಳಿ' ಎಂಬುದು ಇದರ ಭಾವಾರ್ಥ.

ಮೃತ್ತಿಕೆಯಲ್ಲಿ, ಎಂದರೆ ಜೇಡಿಮಣ್ಣಿನಲ್ಲಿ ಮಡಕೆಗಳಿವೆ. ಅವೆಲ್ಲಕ್ಕೂ ಮೃತ್ತಿಕೆಯೇ ಉಪಾದಾನಕಾರಣ. ಕಾರ್ಯವು ಉಪಾದಾನಕಾರಣಕ್ಕಿಂತ ಬೇರೆಯಲ್ಲ. ಕಾರ್ಯಗಳು ನೂರಾರು. ಕಾರಣ ಒಂದೇ. ಇದನ್ನು ಸಿದ್ಧರಾಮನ ಒಂದು ವಚನ ಸ್ಪಷ್ಟಪಡಿಸಿದೆ.

ಮೃತ್ತಿಕೆಯೊಂದರಲ್ಲಿ ಮಡಕೆಗಳು ನೂರಾರು
ಮನವೊಂದರಲ್ಲಿ ಕ್ರಿಯಾದಿಗಳು ನೂರಾರು
ಜನಕನೊಬ್ಬನಲ್ಲಿ ಸಂತತಿಗಳು ನೂರಾರು
ಘನಕ್ಕೆ ಘನವಾದ ಚಿನ್ಮಯ ಕಪಿಲಸಿದ್ಧಮಲ್ಲಿಕಾರ್ಜುನನಲ್ಲಿ
ಜಗತ್ತುಗಳು ನೂರಾರು

ಭಗವಂತನು ಒಬ್ಬ ಕಲಾವಿದ, ಅವನು ಜಗತ್ತೆಂಬ ಚಿತ್ರವನ್ನು ಬರೆಯಲು ಯಾವ ಬಣ್ಣಗಳೂ ಬೇಕಿಲ್ಲ, ಕುಂಚವೂ ಬೇಡ, ಗೋಡೆಯೂ ಅನಾವಶ್ಯಕ. ಏನೂ ಇಲ್ಲದೆ ಜಗಚ್ಚಿತ್ರವನ್ನು ರಚಿಸುವುದೇ ಅವನ ವೈಶಿಷ್ಟ್ಯ- ಎಂದು ಸಂಸ್ಕೃತ ಕವಿಯೊಬ್ಬನು ಬಣ್ಣಿಸಿದ್ದಾನೆ:

ನಿರುಪಾದಾನಸಂಭಾರಮ್ ಅಭಿತ್ತಾವೇವ ತನ್ವತೇ |
ಜಗಚ್ಚಿತ್ರಂ ನಮಸ್ತಸ್ಮೈ ಕಲಾಶ್ಲಾಘ್ಯಾಯ ಶೂಲಿನೇ ||

ಇವರೆಲ್ಲರೂ ಅಭಿನ್ನನಿಮಿತ್ತೋಪಾದಾನವಾದವನ್ನೇ ಒಪ್ಪಿದ್ದಾರೆಂದು ಹೇಳಬಹುದು.

□

ನೀನಿಕ್ಕಿದ ಬೀಯದಲ್ಲಿ ವಂಚನೆಯುಳ್ಳಡೆ
ಸಂಗಾ, ನಿಮ್ಮ ತೊತ್ತುತನಕ್ಕೆ ದೂರವಯ್ಯಾ.
ಕದ್ದು ತಂದಡೆ ಕೈ ಹಿಡಿದೊಮ್ಮೆ ಬಡಿದು
ತುಡುಗುಣಿತನವ ಬಿಡಿಸಯ್ಯಾ.
ಜಂಗಮ ಮನೆಗೆ ಬಂದಲ್ಲಿ ಓಸರಿಸಿದಡೆ
ಹಿಡಿದು ಮೂಗು ಕೊಯ್ಯಯ್ಯಾ,
ಕೂಡಲಸಂಗಮದೇವಾ !

- ಬಸವಣ್ಣ

**ಪ್ರತಿಕ್ರಿಯೆ**

## ಭಗವಾನ್ ಮಹಾವೀರ ಶಕೆಯ ಉಲ್ಲೇಖ

'ಪ್ರಸಾದ' (ಸಂ. 28, ಸಂ. 5 ಸೆಪ್ಟೆಂಬರ್-ಅಕ್ಟೋಬರ್ 2013) ಪತ್ರಿಕೆಯಲ್ಲಿ ಶ್ರೀ ಎಂ.ಎಸ್. ಚಂದ್ರಶೇಖರ್ ಅಯ್ಯರ್‌ರವರ 'ಕಾಲ' ಕುರಿತ ಲೇಖನವು ಸಾಕಷ್ಟು ನಿಖರ ಪ್ರಖರ ಸಂಗತಿಗಳನ್ನೊಳಗೊಂಡು ಉದ್ಬೋಧಕವಾಗಿದೆ. ಆದಾಗ್ಯೂ 'ಭಾರತೀಯ ಕಾಲಮಾನದಲ್ಲಿ ಬರುವ ಮುಖ್ಯ ಅಂಶಗಳು' ಉಪಶೀರ್ಷಿಕೆಯಡಿಯಲ್ಲಿ ಪಟ್ಟಿ ಮಾಡುವಾಗ ಮಹಾವೀರ ಶಕೆಯ ಉಲ್ಲೇಖವು ಗಣನೆಗೆ ಬಾರದಿರುವುದು ಸಖೇದಾಶ್ಚರ್ಯವನ್ನುಂಟುಮಾಡಿದೆ.

ಭಗವಾನ್ ಬುದ್ಧನ ಹಿರಿಯ ಸಮಕಾಲೀನನೂ, ಜೈನ ಧರ್ಮದ ಪುನರುದ್ಧಾರಕನೂ ಆದ ತೀರ್ಥಂಕರ ಮಹಾವೀರನು ಸುಮಾರು 72 ವರ್ಷಗಳ ಕಾಲ ಜೀವಿಸಿದ್ದು ಘಾತಿಕರ್ಮಗಳನ್ನು ಜಯಿಸಿ ಕಾರ್ತಿಕ ಬಹುಳ ಚತುರ್ದಶಿ (14ನೇ ರಾತ್ರಿ) ಮುಗಿದು ಅಮಾವಾಸ್ಯೆಯಂದು ರಾತ್ರಿ ಕೊನೆಯ ಜಾವ (ಅಂತಿಮ ಪ್ರಹರ. ಬೆಳಗಿನ ಜಾವ) ಸೂರ್ಯೋದಯದ ಮಂಗಳವಾರ 15 ಅಕ್ಟೋಬರ್ 527 (ಕ್ರಿ.ಪೂ.) ರಂದು ಅರ್ಥಾತ್ ವಿಕ್ರಮಪೂರ್ವ 470 ರಲ್ಲಿ ಮಧ್ಯಮ ಪಾವಾ ಅಥವಾ ಪಾವಾಪುರಿ ಎಂಬ ಸ್ಥಳದಲ್ಲಿ ನಿರ್ವಾಣ ತಿಥಿ ಹೊಂದಿದನು. ಆಗ ಸ್ವಾತಿ ನಕ್ಷತ್ರವು ಮಿನುಗುತ್ತಿತ್ತು. ಬುದ್ಧನು, ಮಹಾವೀರನು ಇನ್ನೂ ಬದುಕಿರುವಾಗಲೇ ಅಂದರೆ ಅವನಿಗಿಂತ ಮುಂಚೆಯೇ ಪರಿನಿರ್ವಾಣವನ್ನು ಹೊಂದಿದನು. ಪಾವಾಪುರಿಯು ಈಗಿನ ಬಿಹಾರ ರಾಜ್ಯದ ಪಡರವಾಣಾ (Padraona) ಆಗಿದೆ.

ತೀರ್ಥಂಕರ ಮಹಾವೀರನ ನಿರ್ವಾಣ ಕಾಲದ 470 ವರ್ಷಗಳ ತರುವಾಯ ವಿಕ್ರಮ ಸಂವತ್ಸರವು ಆರಂಭವಾಯಿತೆಂದು ಜೈನ ಗ್ರಂಥಗಳಲ್ಲಿ ಹೇಳಲಾಗಿದೆ. ವಿಕ್ರಮ ಸಂವತ್ಸರದ ಕ್ರಿ.ಪೂ. 57 ರಲ್ಲಿ ಪ್ರಾರಂಭವಾಯಿತೆಂಬುದು ಇತಿಹಾಸದ ಪುಟಗಳಲ್ಲಿನ ಸರ್ವಸಮ್ಮತ ಅಭಿಪ್ರಾಯವಾಗಿದೆ. ಅಂದರೆ ಸಂವತ್ 470+57 = ಕ್ರಿ.ಪೂ. 527 ಎಂದಾಗುತ್ತದೆ. ಮಹಾವೀರನ ನಿರ್ವಾಣದ ದಿನದಿಂದ 'ವೀರನಿರ್ವಾಣ ಸಂವತ್' ಎಂದು ನಿರ್ಣಯಿಸಲಾಗಿ ಮಹಾವೀರ ಶಕೆ ಆರಂಭಗೊಂಡಿತು (ಉಲ್ಲೇಖ: ಎಚ್.ಸಿ. ರಾಯ್ ಚೌಧುರಿ ಪೊಲಿಟಿಕಲ್ ಹಿಸ್ಟರಿ ಆಫ್ ಎನ್‌ಶೆಂಟ್ ಇಂಡಿಯ, ಪು. 295).

**ಡಾ. ಹೆಚ್.ಎ. ಪಾರ್ಶ್ವನಾಥ್**
ಪೆಥಾಲಜಿ ಪ್ರಾಧ್ಯಾಪಕರು
ದಿ ಆಕ್ಸ್‌ಫರ್ಡ್ ಮೆಡಿಕಲ್ ಕಾಲೇಜು, ಬೆಂಗಳೂರು
ದೂರವಾಣಿ : 9880443281

# ವಾರ್ತಾವಿಹಾರ

### ವಚನ ಸಾಹಿತ್ಯದಲ್ಲಿ ಜೀವನ ದರ್ಶನ

ವಚನ ಸಾಹಿತ್ಯ ಬದುಕನ್ನು ಆಧರಿಸಿ ರೂಪಿತವಾಗಿದ್ದು, ಇದೊಂದು ಅಸಾಧಾರಣವಾದ ಸಾಹಿತ್ಯಪ್ರಕಾರವಾಗಿದೆ. ಹನ್ನೆರಡನೇ ಶತಮಾನದಿಂದ ಆರಂಭವಾದ ವಚನ ಸಾಹಿತ್ಯ ಪರಂಪರೆ ವಿಶ್ವಕ್ಕೆ ಶ್ರೇಷ್ಠ ಸಾಹಿತ್ಯವನ್ನು ನೀಡಿದೆ ಎಂದು ಕನ್ನಡ ಸಾಹಿತ್ಯ ಪರಿಷತ್ತಿನ ಮಾಜಿ ಅಧ್ಯಕ್ಷ ಡಾ. ಜಿ.ಎಸ್. ಸಿದ್ಧಲಿಂಗಯ್ಯ ತಿಳಿಸಿದರು.

ಜೆಎಸ್‌ಎಸ್ ಮಹಾವಿದ್ಯಾಪೀಠದ ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿ ಆಶ್ರಯದಲ್ಲಿ ನಗರದ ಜೆಎಸ್‌ಎಸ್ ಆಸ್ಪತ್ರೆ ಆವರಣದಲ್ಲಿರುವ ರಾಜೇಂದ್ರ ಭವನದಲ್ಲಿ ದಿನಾಂಕ 2.1.2014 ರಂದು ಆಯೋಜಿಸಿದ್ದ 'ಶ್ರೀ ಸ್ವತಂತ್ರ ಸಿದ್ಧಲಿಂಗೇಶ್ವರರು' ವಿಚಾರ ಸಂಕಿರಣವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಕಸುಬಿನ ಮೂಲಕವೇ ಅದರ ಅನುಭಾವದಿಂದಲೇ ವಚನಕಾರರು ವಚನಗಳನ್ನು ರಚಿಸಿದ್ದಾರೆ. ಇದೊಂದು ಅಭಿವ್ಯಕ್ತಿ ಕ್ರಮ ಅಷ್ಟೇ ಅಲ್ಲ, ಜೀವನ ದರ್ಶನ ಕೂಡ ಎಂದು ಹೇಳಿದ ಅವರು, 12ನೇ ಶತಮಾನದಲ್ಲಿ ಹೊಸ ಸಾಹಿತ್ಯ ಸೃಷ್ಟಿಯಾಯಿತು ಎಂದರು.

ದೇವಭಾಷೆಯನ್ನು ಜನಭಾಷೆಯಾಗಿ ಮಾಡಿದ್ದೇ ಅಲ್ಲದೆ ಹಳಗನ್ನಡ, ನಡುಗನ್ನಡ, ಹೊಸಗನ್ನಡ ಇವೆಲ್ಲವನ್ನೂ ಮೀರಿ ವಚನಕಾರರು ರಚಿಸಿದ ವಚನಗಳು ಪ್ರತಿಭೆ, ಸ್ವೋಪಜ್ಞತೆಯನ್ನು ಒಳಗೊಂಡಿದೆ. ಅದರದೇ ಆದ ವಿಶಿಷ್ಟತೆ ಹೊಂದಿದೆ ಎಂದು ಹೇಳಿದರು.

ಸಮಾರಂಭದ ದಿವ್ಯ ಸಾನ್ನಿಧ್ಯವನ್ನು ಪರಮಪೂಜ್ಯ ಜಗದ್ಗುರುಗಳವರು ವಹಿಸಿದ್ದರು. ಮಾಜಿ ಶಾಸಕರಾದ ಶ್ರೀ ಹೆಚ್. ಗಂಗಾಧರನ್ ಅಧ್ಯಕ್ಷತೆ ವಹಿಸಿದ್ದರು.

ನಂತರ ಗೋಷ್ಠಿಗಳಲ್ಲಿ 'ವಚನ ಸಾಹಿತ್ಯದ ದ್ವಿತೀಯ ಘಟ್ಟದ ಸ್ಥೂಲ ಪರಿಚಯ' ಕುರಿತು ಸಂಶೋಧಕ ಡಾ. ಬಿ. ನಂಜುಂಡಸ್ವಾಮಿ ಹಾಗೂ 'ಜೀವನ ದರ್ಶನ' ಕುರಿತು ಡಾ. ಚಿಕ್ಕಮರಳಿ ಬೋರೇಗೌಡ ವಿಷಯ ಮಂಡಿಸಿದರು. ಡಾ. ವಿ. ಚಂದ್ರಶೇಖರ ನಂಗಲಿ ಅಧ್ಯಕ್ಷತೆ ವಹಿಸಿದ್ದರು.



ಮಧ್ಯಾಹ್ನ ನಡೆದ ಎರಡನೆ ಗೋಷ್ಠಿಯಲ್ಲಿ 'ಅನುಭಾವಿಕ ಅಂಶಗಳು' ಕುರಿತು ಡಾ. ಎಂ. ಶಂಕರ್, 'ಷಟ್ಸ್ಥಲ ಸಿದ್ಧಾಂತ - ಒಂದು ವಿವೇಚನೆ' ಕುರಿತು ಡಾ. ಮೃತ್ಯುಂಜಯ ರುಮಾಲೆ ವಿಷಯ ಮಂಡನೆ ಮಾಡಿದರು. ಡಾ. ಎನ್.ಎಂ. ತಳವಾರ್ ಅಧ್ಯಕ್ಷತೆ ವಹಿಸಿದ್ದರು.

### ಕ್ರೀಡೆಗಳು ಸಮಾಜದ ಅನೇಕ ಸಮಸ್ಯೆಗಳಿಗೆ ಪರಿಹಾರ ಒದಗಿಸಲಿವೆ

ದಿನಾಂಕ 3.1.2014 ರಂದು ಮೈಸೂರಿನ ಆದಿಚುಂಚನಗಿರಿ ಶಿಕ್ಷಣ ಟ್ರಸ್ಟ್ ವತಿಯಿಂದ ಕುವೆಂಪುನಗರದ ಬಿಜಿಎಸ್ ವಿದ್ಯಾಪೀಠದ ಆವರಣದಲ್ಲಿ ಆಯೋಜಿಸಿದ್ದ 17ನೇ ರಾಜ್ಯಮಟ್ಟದ ಕ್ರೀಡಾಕೂಟದ ಉದ್ಘಾಟನಾ ಸಮಾರಂಭದ ಸಾನ್ನಿಧ್ಯವನ್ನು ವಹಿಸಿ ಪರಮಪೂಜ್ಯರು ಮಾತನಾಡುತ್ತ ದೈಹಿಕ ಸಾಮರ್ಥ್ಯ ಕಲ್ಪಿಸುವಲ್ಲಿ ಹಾಗೂ ಪರಸ್ಪರ ಆತ್ಮೀಯತೆ ವೃದ್ಧಿಸುವಲ್ಲಿ ಕ್ರೀಡೆಗಳು ಅವಶ್ಯಕ. ಸಮಾಜದ ಅನೇಕ ಗಂಭೀರ ಸಮಸ್ಯೆಗೆ ಇದು ಪರಿಹಾರ ಒದಗಿಸಲಿದೆ ಎಂದು ಹೇಳಿದರು.

ಕ್ರೀಡೆಯು ಸಂಸ್ಕೃತಿಯ ಅವಿಭಾಜ್ಯ ಅಂಗ. ಅದನ್ನು ಪೋಷಿಸುವುದು ಶಿಕ್ಷಣ ಸಂಸ್ಥೆಗಳ ಜವಾಬ್ದಾರಿ. ಈ ದಿಸೆಯಲ್ಲಿ ಆದಿಚುಂಚನಗಿರಿ ಸಂಸ್ಥೆಯ ಕಾರ್ಯವನ್ನು ರಾಮಕೃಷ್ಣ ಆಶ್ರಮದ ಅಧ್ಯಕ್ಷರಾದ ಶ್ರೀ ಸ್ವಾಮಿ ಮುಕ್ತಿದಾನಂದಜಿ ಶ್ಲಾಘಿಸಿದರು.

ಕ್ರೀಡಾಕೂಟಕ್ಕೆ ಚಾಲನೆ ನೀಡಿ ಮಾತನಾಡಿದ ಕುವೆಂಪು ವಿಶ್ವವಿದ್ಯಾನಿಲಯದ ಕುಲಪತಿ ಡಾ. ಚಿದಾನಂದಗೌಡ ಅವರು ಯಾವುದೇ ಕ್ರೀಡೆಗಳಲ್ಲಿ ಸೋಲು ಗೆಲುವು ಮುಖ್ಯವಲ್ಲ. ಅದರಲ್ಲಿ ಭಾಗವಹಿಸುವುದು ಬಹುಮುಖ್ಯ. ಆದ್ದರಿಂದ ಕ್ರೀಡಾ ಮನೋಭಾವವನ್ನು ಇಂದಿನ ಯುವಜನತೆ ಹೆಚ್ಚಾಗಿ ಮೆರೆಯಬೇಕು. ಇದರಿಂದ ಪರಸ್ಪರ ಸಮಾಜದ ಸಾಮರಸ್ಯ ಹಾಗೂ ದೇಶದ ಐಕ್ಯತೆಗೆ ಸಹಕಾರಿಯಾಗಲಿದೆ ಎಂದರು.

### ಬದಲಾವಣೆಗೆ ಹೊಂದಿಕೊಳ್ಳುವುದು ಪ್ರಕೃತಿ ಸಹಜ ಗುಣ

ದಿನಾಂಕ 9.1.2014 ರಂದು ಮೈಸೂರು ನಗರದ ಶ್ರೀ ಶಿವರಾತ್ರೀಶ್ವರ ನಗರದಲ್ಲಿರುವ ಜೆಎಸ್‌ಎಸ್ ಮೆಡಿಕಲ್ ಕಾಲೇಜಿನ ರಾಜೇಂದ್ರ ಭವನದಲ್ಲಿ ಅಸೋಸಿಯೇಷನ್ ಆಫ್ ಓಟೋಲಾ ರಿಂಗ್ ಲಾಜಟೆಕ್ಸ್ ಆಫ್ ಇಂಡಿಯಾ (ಕಣ್ಣು, ಕಿವಿ, ಮೂಗು) ಮೈಸೂರು ವಿಭಾಗದಿಂದ ಆಯೋಜಿಸಲಾಗಿದ್ದ ಮೂರು ದಿನಗಳ ಕಾಲ ನಡೆದ 66ನೇ ವೈದ್ಯಕೀಯ ರಾಷ್ಟ್ರೀಯ ಸಮ್ಮೇಳನದ ಸಾನ್ನಿಧ್ಯವನ್ನು ವಹಿಸಿ ಮಾತನಾಡಿದ ಪರಮಪೂಜ್ಯರು, ಬದಲಾವಣೆಗೆ ಹೊಂದಿಕೊಳ್ಳುವುದು ಪ್ರಕೃತಿ ಸಹಜ ಗುಣ. ಅದರಂತೆ ವೈದ್ಯಕೀಯದಲ್ಲಿ ಆಗುತ್ತಿರುವ ಬದಲಾವಣೆಗೆ ಯುವ ವೈದ್ಯರು ಹೊಂದಿಕೊಳ್ಳುವುದು ಅನಿವಾರ್ಯ. ಜಾಗತಿಕ ಬದಲಾವಣೆಯಿಂದಾಗಿ ಹೊಸ ಹೊಸ ರೋಗಲಕ್ಷಣಗಳು ಕಾಣಿಸಿಕೊಳ್ಳುತ್ತಿವೆ. ಇದು ವೈದ್ಯಕೀಯಲೋಕಕ್ಕೆ ಸವಾಲಿನ

ವಿಷಯ. ಹಾಗೂ ಬದಲಾದ ಹೊಸ ಹೊಸ ತಂತ್ರಜ್ಞಾನ, ಉಪಕರಣಗಳ ಜೊತೆಗೆ, ಬದಲಾದ ವೈದ್ಯಕೀಯ ಶಿಕ್ಷಣದ ಹೊಂದಾಣಿಕೆಯು ಮುಖ್ಯವಾಗುತ್ತದೆ ಎಂದು ತಿಳಿಸಿದರು.

ವೈದ್ಯಕೀಯ ಶಿಕ್ಷಣ ಸಚಿವ ಡಾ. ಶರಣ ಪ್ರಕಾಶ್ ಆರ್. ಪಾಟೀಲ್‌ರವರು ಮಾತನಾಡಿ, ದಕ್ಷಿಣ ಭಾರತದಲ್ಲಿ ವೈದ್ಯಕೀಯ ಕಾಲೇಜುಗಳ ಸಂಖ್ಯೆ ಕಡಿಮೆಯಿದೆ. ಅದರಲ್ಲೂ ರಾಜ್ಯದಲ್ಲಿ ವೈದ್ಯಕೀಯ ಕಾಲೇಜುಗಳ ಸಂಖ್ಯೆ ಕಡಿಮೆಯಿದೆ. ಮುಂದಿನ ದಿನಗಳಲ್ಲಿ ಸರ್ಕಾರಿ ಮತ್ತು ಖಾಸಗಿ ಸಹಯೋಗದೊಂದಿಗೆ ಎಲ್ಲಾ ಜಿಲ್ಲೆಗಳಲ್ಲಿ ಕಾಲೇಜುಗಳನ್ನು ತೆರೆಯಲು ಕ್ರಮ ಕೈಗೊಳ್ಳಲಾಗುತ್ತಿದೆ ಎಂದರು.

ಮುಂಬೈಯಲ್ಲಿ ಇಎನ್‌ಟಿ ವಿಷಯಗಳಲ್ಲಿ ಕಳೆದ ಮೂವತ್ತು ವರ್ಷಗಳಿಂದ ಸೇವೆ ಸಲ್ಲಿಸಿರುವ ತಜ್ಞ ಡಾ. ಮಿಲಂದ್ ವಿ. ಕೀರ್ತನ್ ಅವರಿಗೆ ಜೀವಮಾನ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ವೇದಿಕೆಯಲ್ಲಿ ಜೆಎಸ್‌ಎಸ್ ಮೆಡಿಕಲ್ ಕಾಲೇಜಿನ ಪ್ರಾಂಶುಪಾಲ ಡಾ. ಎಚ್. ಬಸವನಗೌಡಪ್ಪ, ಡಾ. ಎಲ್.ಎನ್. ನಾಮದೇವ, ಡಾ. ಟಿ. ಶಿವರಾಮ್ ಶೆಟ್ಟಿ, ಡಾ. ಭಾರತಿ, ಡಾ. ವಿಜಯ್ ಶಂಕರ್ ಹಾಗೂ ಮತ್ತಿತರರು ಉಪಸ್ಥಿತರಿದ್ದರು.

**ವಾಟಾಳು ಶ್ರೀಗಳಿಗೆ ಆತ್ಮೀಯ ಗುರುವಂದನೆ**

ದಿನಾಂಕ 12.1.2014 ರಂದು ನಾಗರಿಕ ವೇದಿಕೆ, ನಗರದ ದಸರಾ ವಸ್ತುಪ್ರದರ್ಶನ ಆವರಣದಲ್ಲಿರುವ ಪಿ. ಕಾಳಿಂಗರಾವ್ ಸಭಾಂಗಣದಲ್ಲಿ ಆಯೋಜಿಸಲಾಗಿದ್ದ ವಾಟಾಳು ಶ್ರೀ ಸೂರ್ಯಸಿಂಹಾಸನ ಮಠದ ಶ್ರೀ ಸಿದ್ಧಲಿಂಗ ಶಿವಾಚಾರ್ಯ ಸ್ವಾಮಿಗಳಿಗೆ ವಿವಿಧ ಮಠಾಧಿಪತಿಗಳು, ಗಣ್ಯರು, ಅವರ ಅನುಯಾಯಿಗಳು, ಅಭಿಮಾನಿಗಳು ಹಾಗೂ ಸಾರ್ವಜನಿಕರ ಸಮ್ಮುಖದಲ್ಲಿ ಅತ್ಯಂತ ಗೌರವಪೂರ್ವಕವಾಗಿ ಗುರುವಂದನೆ ಸಲ್ಲಿಸಲಾಯಿತು.

ಪರಮಪೂಜ್ಯ ಜಗದ್ಗುರುಗಳು, ಸಿದ್ಧಗಂಗೆಯ ಕಿರಿಯ ಶ್ರೀಗಳಾದ ಶ್ರೀ ಸಿದ್ಧಲಿಂಗ ಸ್ವಾಮೀಜಿ, ದೇವನೂರು ಮಠದ ಶ್ರೀ ಮಹಾಂತ ಸ್ವಾಮೀಜಿ, ಕಂದಾಯ ಸಚಿವ ಶ್ರೀ ವಿ. ಶ್ರೀನಿವಾಸಪ್ರಸಾದ್, ತೋಟಗಾರಿಕಾ ಸಚಿವರು ಹಾಗೂ ಅಖಿಲ ಭಾರತ ವೀರಶೈವ ಮಹಾಸಭಾ ಅಧ್ಯಕ್ಷರೂ ಆದ ಶ್ರೀ ಶಾಮನೂರು ಶಿವಶಂಕರಪ್ಪ, ಸಹಕಾರ ಸಚಿವ ಶ್ರೀ ಎಚ್.ಎಸ್. ಮಹದೇವಪ್ರಸಾದ್, ಕನ್ನಡ ಚಳವಳಿ ವಾಟಾಳ್ ಪಕ್ಷದ ಅಧ್ಯಕ್ಷ ಶ್ರೀ ವಾಟಾಳ್ ನಾಗರಾಜ್, ಲೋಕಸಭಾ ಸದಸ್ಯ ಶ್ರೀ ಆರ್. ಧ್ರುವನಾರಾಯಣ ಅವರು ಸಮಾರಂಭಕ್ಕೆ ಸಾಕ್ಷಿಯಾದರು.

ತೋಟಗಾರಿಕೆ ಮತ್ತು ಕೃಷಿ ಮಾರುಕಟ್ಟೆ ಸಚಿವರೂ ಆದ ಶ್ರೀ ಶಾಮನೂರು



ಶಿವಶಂಕರಪ್ಪ 'ಸೂರ್ಯ' ಅಭಿನಂದನಾ ಗ್ರಂಥ ಬಿಡುಗಡೆ ಮಾಡಿದರು. ಸಹಕಾರ ಸಚಿವ ಶ್ರೀ ಎಚ್.ಎಸ್. ಮಹದೇವಪ್ರಸಾದ್ ವಿಭಿನ್ನ ಸಮರ್ಥರಿಗೆ ಆರ್ಥಿಕ ನೆರವು ವಿತರಿಸಿದರು. ಸಮಾರಂಭದ ಅಧ್ಯಕ್ಷತೆಯನ್ನು ಕಂದಾಯ ಸಚಿವ ಶ್ರೀ ವಿ. ಶ್ರೀನಿವಾಸ ಪ್ರಸಾದ್ ವಹಿಸಿದ್ದರು. ಸಂಸದ ಶ್ರೀ ಆರ್. ಧ್ರುವನಾರಾಯಣ್ ಮುಖ್ಯ ಅತಿಥಿಗಳಾಗಿದ್ದರು. ಇದೇ ಸಂದರ್ಭದಲ್ಲಿ ಕನ್ನಡ ಚಳವಳಿ ಕೇಂದ್ರ ಸಮಿತಿ ಅಧ್ಯಕ್ಷ ಶ್ರೀ ಮೂಗೂರು ನಂಜುಂಡಸ್ವಾಮಿ ಅವರ ಸಂಪಾದಕತ್ವದ 'ಕನ್ನಡ ಬೆಳಕು' ವಿಶೇಷ ಸಂಚಿಕೆಯನ್ನು ಶ್ರೀ ವಾಟಾಳ್ ನಾಗರಾಜ್ ಬಿಡುಗಡೆ ಮಾಡಿದರು.

ಪ್ರೊ. ಡಿ.ಎಸ್. ಸದಾಶಿವಮೂರ್ತಿ ಅಭಿನಂದನಾ ನುಡಿಗಳನ್ನಾಡಿದರು. ನಾಗರಿಕ ವೇದಿಕೆ ಅಧ್ಯಕ್ಷ, ನಿವೃತ್ತ ಪ್ರಾಧ್ಯಾಪಕ ಪ್ರೊ. ಸುಬ್ಬಪ್ಪ ಸ್ವಾಗತಿಸಿದರು, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಶ್ರೀ ಎಂ. ಚಂದ್ರಶೇಖರ್ ನಿರೂಪಿಸಿದರು. ಚೂಡಾಮಣಿ ಪ್ರಾರ್ಥಿಸಿದರು.

**ಮದ್ಯವ್ಯಸನ ಬಿಟ್ಟು ಸತ್ಕಾರ್ಯ ಮಾಡಿ**

ಕವಿ, ಕಲಾವಿದ, ಸಂಶೋಧಕ, ವಿಜ್ಞಾನಿ ಮೊದಲಾದವರೆಲ್ಲರಲ್ಲೂ ಇರುವ ಅಮಲು ಸಾತ್ವಿಕವಾಗಿದ್ದಾಗ ಮಾತ್ರ ಸಾರ್ಥಕ ಜೀವನ ಸಾಧ್ಯವಾಗುತ್ತದೆ ಎಂದು ಪರಮಪೂಜ್ಯ ಜಗದ್ಗುರುಗಳು ಹೇಳಿದರು.

ದಿನಾಂಕ 12.1.2014 ರಂದು ಸುತ್ತೂರು ಶ್ರೀಕ್ಷೇತ್ರದ ಶ್ರೀ ಸಿದ್ಧನಂಜ ದೇಶಿಕೇಂದ್ರ ಮಂಗಳ ಮಂಟಪದಲ್ಲಿ ಕಳೆದ ಹತ್ತು ದಿನಗಳಿಂದ ನಡೆದ ಕುಡಿತ ತ್ಯಜಿಸುವ ಉಚಿತ ಶಿಬಿರದ ಸಮಾರೋಪ ಸಮಾರಂಭದಲ್ಲಿ ಆಶೀರ್ವಚನ ನೀಡಿದ ಅವರು, ಅಮಲು ಎಂದರೆ ಬೆನ್ನುಹತ್ತಿ ಹೋಗುವುದು. ಉಪಕಾರ, ಸೇವೆ, ಇವೇ ಮೊದಲಾದ ಜೀವನ ಮೌಲ್ಯಗಳನ್ನು ಅಳವಡಿಸಿಕೊಂಡಾಗ ಮಾತ್ರ ದುಶ್ಚಟಗಳಿಂದ ದೂರವಿರಲು ಸಾಧ್ಯವಾಗುತ್ತದೆ ಎಂದರು.

ದುಶ್ಚಟಗಳು ಹಳ್ಳಕೊಳ್ಳಗಳತ್ತಲೇ ಹರಿಯುವ ನೀರಿದ್ದಂತೆ. ಕೆಳಮುಖವಾಗಿ ಹರಿಯುವ ನೀರಿಗೆ ಅಣೆಕಟ್ಟು ಕಟ್ಟಿ ಅದರ ನೈಜ ಶಕ್ತಿ ಏನೆಂಬುದರ ಅರಿವು ಮೂಡಿಸುವ ಕಾರ್ಯವನ್ನು ಶಿಬಿರದಲ್ಲಿ ಮಾಡಲಾಗಿದೆ. ಸಾಮಾಜಿಕವಾಗಿ, ಮಾನಸಿಕವಾಗಿ ಹಾಗೂ ದೈಹಿಕವಾಗಿ ಕೆಡುಕುಂಟುಮಾಡುವ ಮದ್ಯವ್ಯಸನದಿಂದ ಹೊರಬಂದು ಜೀವನ ಶಕ್ತಿಯನ್ನು ಸತ್ಕಾರ್ಯಗಳಿಗೆ ಬಳಸಿ, ಸುಗಮ ಜೀವನ ನಡೆಸುವಂತೆ ಶಿಬಿರಾರ್ಥಿಗಳಿಗೆ ಕರೆ ನೀಡಿದರು.

**ಮೂರು ಮುಖದ ಕಾಯಿಲೆ :** ಆಲ್ಕೋಹಾಲಿಕ್ ಅನಾನಿಮಸ್ ಇಂಡಿಯಾ ಸಂಸ್ಥೆಯ ಶ್ರೀಕಾಂತ್ ಮಾತನಾಡಿ, ಮದ್ಯಪಾನ ಎನ್ನುವುದು ಮೂರು ಮುಖದ ಕಾಯಿಲೆ.

ವ್ಯಕ್ತಿಯ ದೈಹಿಕ, ಮಾನಸಿಕ ಹಾಗೂ ಆಧ್ಯಾತ್ಮಿಕ ಮುಖಗಳನ್ನು ಆವರಿಸಿಕೊಳ್ಳುವ ಈ ಕಾಯಿಲೆ ವ್ಯಸನಿಗಳನ್ನಷ್ಟೇ ಅಲ್ಲದೆ ಅವನ ಇಡೀ ಕುಟುಂಬವನ್ನೇ ಸರ್ವನಾಶದತ್ತ ದೂಡುತ್ತದೆ. ಬದಲಾವಣೆ ನಮ್ಮಿಂದಲೇ ಆಗಬೇಕು ಎಂಬುದನ್ನು ವ್ಯಸನಿಗಳು ಅರಿಯಬೇಕಿದೆ. ಇಂತಹ ಸ್ವಯಂ ಅರಿವು ಮೂಡಿಸುವ ಸ್ವಾರ್ಥರಹಿತ ಸೇವಾ ಶಿಬಿರವನ್ನು ಉಚಿತವಾಗಿ ಏರ್ಪಡಿಸಿರುವ ಸುತ್ತೂರು ಶ್ರೀಮಠಕ್ಕೆ ಎಷ್ಟು ಕೃತಜ್ಞತೆ ಸಲ್ಲಿಸಿದರೂ ಕಡಿಮೆಯೇ ಎಂದು ಧನ್ಯತಾಭಾವ ವ್ಯಕ್ತಪಡಿಸಿದರು.

ಮದ್ಯವ್ಯಸನ ನಿರ್ಮೂಲನಾ ತಂಡದ ಸದಸ್ಯ ಷಣ್ಮುಗಂ ಮಾತನಾಡಿ, ಕುಡಿತ ಬಿಡಿಸಲು ಪ್ರಪಂಚದಲ್ಲೇ ಯಾವುದೇ ರೀತಿಯ ಮದ್ದು-ಮಾತ್ರೆಗಳಿಲ್ಲ. ಆದರೆ ಇವತ್ತೊಂದು ದಿನ ನಾನು ಕುಡಿತದಿಂದ ದೂರ ಇದ್ದೇನೆ ಎಂಬ ದೃಢಸಂಕಲ್ಪದೊಂದಿಗೆ ದಿನಚರಿ ಆರಂಭಿಸುವುದೇ ಈ ದಿಶೆಯಲ್ಲಿ ತಾವು ಗುರಿ ಮುಟ್ಟಲು ಕಂಡುಕೊಂಡಿರುವ ದಾರಿ ಎಂದರು.

ಸದಸ್ಯ ಶ್ರೀ ಲಕ್ಷ್ಮೀನಾರಾಯಣ್, ಜೆಎಸ್‌ಎಸ್ ಕಾಲೇಜಿನ ಕಾರ್ಯನಿರ್ವಾಹಕ ಅಧಿಕಾರಿ ಪ್ರೊ. ಬಿ.ವಿ. ಸಾಂಬಶಿವಯ್ಯ, ಪ್ರಾಂಶುಪಾಲ ಪ್ರೊ. ಮಲ್ಲಿಕಾರ್ಜುನ ಪಂಡಿತ್ ಉಪಸ್ಥಿತರಿದ್ದರು.

**ಅಂತರಂಗ ಮತ್ತು ಬಹಿರಂಗ ಒಂದಾಗಬೇಕು**

ದಿನಾಂಕ 4.2.2014 ರಂದು ತಾವರೆಕೆರೆ ಬಳಿಯ ದೊಡ್ಡನಲ್ಲೂರು ಹಳ್ಳಿಯಲ್ಲಿ ಶ್ರೀ ಅಭಯ ಶನೈಶ್ವರಸ್ವಾಮಿ ದೇವಸ್ಥಾನದಲ್ಲಿ ನಡೆದ ಧರ್ಮ ಜಾಗೃತಿ ಬೃಹತ್ ಸಮಾವೇಶ ಕಾರ್ಯಕ್ರಮವನ್ನು ಉದ್ಘಾಟಿಸಿ ಪರಮಪೂಜ್ಯರು ಆಶೀರ್ವಚನ ನೀಡುತ್ತ ಪ್ರತಿಯೊಬ್ಬರಲ್ಲೂ ಅಂತರಂಗ ಮತ್ತು ಬಹಿರಂಗ ಒಂದಾದರೆ ಮಾತ್ರ ನಮ್ಮ ರಾಜ್ಯ ರಾಮರಾಜ್ಯವಾಗಲು ಸಾಧ್ಯವಾಗುತ್ತದೆ ಎಂದು ಆಶಯ ವ್ಯಕ್ತಪಡಿಸಿದರು. ನಡೆ ನುಡಿಯಲ್ಲಿ ಮನುಷ್ಯನ ಬದುಕು ಎಲ್ಲಿ ಸಮನಾಗಿರುತ್ತದೋ ಅಲ್ಲಿ ಮನುಷ್ಯನು ಶ್ರೇಷ್ಠವಾಗಿರುತ್ತಾನೆ. ನಾವು ಬಹಳ ಪ್ರಾಮಾಣಿಕವಾಗಿ, ಸತ್ಯವಾಗಿ ಇರಬೇಕು. ಆಗ ಮನುಷ್ಯನ ಬಾಳು ವೃದ್ಧಿಯಾಗಲು ಸಾಧ್ಯ. ಮನುಷ್ಯನಲ್ಲಿರುವ ಅಂತರಂಗದ ಭಗವಂತನನ್ನು ಕಾಣಲು ದೇವಸ್ಥಾನಗಳು ಬೇಕು. ಆದ್ದರಿಂದ ದೇವಸ್ಥಾನಗಳಿಗೆ ಹೋದಾಗ ಯಾವ ರೀತಿ ಶ್ರದ್ಧಾಭಕ್ತಿಯಿಂದ ನಡೆದುಕೊಳ್ಳುತ್ತೇವೋ ಅದೇ ರೀತಿ ನಮ್ಮ ಮನಸ್ಸಿನಲ್ಲಿರುವ ಅಂತರಂಗದ ದೇವರ ಬಗ್ಗೆಯೂ ಅದೇ ರೀತಿ ನಡೆದುಕೊಳ್ಳಬೇಕು ಎಂದರು.

ಈ ಧರ್ಮಜಾಗೃತಿ ಸಮಾವೇಶವನ್ನು ಉದ್ಘಾಟಿಸಿ ಆಶೀರ್ವಚನ ನೀಡಿದ ಸಿದ್ಧಗಂಗಾ ಮಠದ ಡಾ. ಶ್ರೀ ಶಿವಕುಮಾರ ಮಹಾಸ್ವಾಮೀಜಿ ಅವರು ಕಳಬೇಡ, ಕೊಲಬೇಡ,



ಅನ್ಯರನ್ನು ಕಂಡು ಅಸಹ್ಯ ಪಡಬೇಡ, ಇದೇ ಅಂತರಂಗದ ಶುದ್ಧಿ, ಜೀವನದಲ್ಲಿರುವ ಎರಡು ಸ್ತೋತ್ರಗಳು ಇವು. ಅಂತರಂಗಶುದ್ಧಿ-ಬಹಿರಂಗಶುದ್ಧಿ. ಇದನ್ನು ಜೀವನದಲ್ಲಿ ಅಳವಡಿಸಿಕೊಂಡು ಗೌರವದಿಂದ ಬಾಳಬೇಕು ಎಂದರು.

**ನಮ್ಮ ಸಂಸ್ಕೃತಿ ಸಂಪ್ರದಾಯ ಪಾಲಿಸಿರಿ**

ನಮ್ಮ ಸಂಸ್ಕೃತಿ ಸಂಪ್ರದಾಯಗಳನ್ನು ಮುನ್ನಡೆಸಿಕೊಂಡು ಹೋಗುವ ಮಹತ್ತರ ಜವಾಬ್ದಾರಿಯ ಸಂಸ್ಕಾರ ಎಲ್ಲರ ಮನಸ್ಸಿನಲ್ಲಿ ಮೂಡಬೇಕು ಎಂದು ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು ತಿಳಿಸಿದರು.

ಹಾನಗಲ್ ತಾಲ್ಲೂಕಿನ ಬಮ್ಮನಹಳ್ಳಿ ಗ್ರಾಮದ ವಿರಕ್ತ ಮಠಕ್ಕೆ ಶಿವಯೋಗೀಶ್ವರ ಶ್ರೀಗಳು ಪಟ್ಟಗೊಂಡ 15 ನೇ ವಾರ್ಷಿಕ ಮಹೋತ್ಸವದ ಅಂಗವಾಗಿ 5.2.2014 ರಂದು ನಡೆದ ಸಾಮೂಹಿಕ ವಿವಾಹ ಮತ್ತು ಧರ್ಮ ಸಂದೇಶ ಸಮಾರಂಭದ ಸಾನ್ನಿಧ್ಯ ವಹಿಸಿದ್ದ ಪರಮಪೂಜ್ಯರು, 'ಭಾರತೀಯ ಶ್ರೀಮಂತ ಸಂಸ್ಕೃತಿಯಲ್ಲಿ ವಿವಾಹ ಬಂಧನವು ಮಹತ್ವದ ಘಟ್ಟವಾಗಿದ್ದು, ಎರಡು ಕಣ್ಣುಗಳು ನೋಡುವ ದೃಶ್ಯ ಒಂದೇ ಎನ್ನುವಂತೆ, ಸತಿಪತಿಗಳು ಏಕ ಮನಸ್ಸಿನಿಂದ ಜೀವನ ಸಾಗಿಸಬೇಕು. ಧರ್ಮಗುರುಗಳ ಸಮ್ಮುಖದಲ್ಲಿ ಒಳ್ಳೆಯ ಸಂಕಲ್ಪದಿಂದ ನಡೆಯುವ ಸಾಮೂಹಿಕ ವಿವಾಹಗಳು ಹೆಚ್ಚೆಚ್ಚು ನಡೆಯುವ ಮೂಲಕ ದುಂದುವೆಚ್ಚಕ್ಕೆ ಕಡಿವಾಣ ಹಾಕಬೇಕು. ಹಣ, ಆಭರಣಗಳ ಆಡಂಬರದ ಮದುವೆಗಿಂತ ಅಂತರಂಗದ ಪ್ರೀತಿಯ ಮದುವೆ ಬೇಕು' ಎಂದರು.

ಹುಬ್ಬಳ್ಳಿ ಮೂರುಸಾವಿರ ಮಠದ ಶ್ರೀ ಗುರುಸಿದ್ಧ ರಾಜಯೋಗೀಂದ್ರ ಶ್ರೀಗಳು ಅಧ್ಯಕ್ಷತೆ ವಹಿಸಿದ್ದರು. ಸಮಾರಂಭದಲ್ಲಿ ಅನೇಕ ಗುರುವರ್ಯರು ಉಪಸ್ಥಿತರಿದ್ದರು.

**ಅರಾಜಕತೆಗೆ ನಾವೇ ಹೊಣೆ**

ದಿನಾಂಕ 6.2.2014 ರಂದು ಹಾವೇರಿ ಜಿಲ್ಲೆಯ ಶಿಗ್ಗಾಂವಿಯಲ್ಲಿ ಆರಂಭವಾದ ತರಳಬಾಳು ಹುಣ್ಣಿಮೆ ಮಹೋತ್ಸವದಲ್ಲಿ ಸಾನ್ನಿಧ್ಯ ವಹಿಸಿ ಮಾತನಾಡಿದ ಪರಮಪೂಜ್ಯರು ಇಂದು ದೇಶ ಸಮಾಜಕ್ಕೆ ಅಂಟಿಕೊಂಡಿರುವ ಭ್ರಷ್ಟಾಚಾರ, ಅರಾಜಕತೆ ಇತ್ಯಾದಿ ಅನಿಷ್ಟಗಳಿಗೆಲ್ಲ ನಾವೇ ಹೊಣೆಗಾರರು ಎಂಬುದನ್ನು ಎಲ್ಲರೂ ಅರ್ಥ ಮಾಡಿಕೊಳ್ಳಬೇಕು. ಸಂತರು, ಶರಣರ ವಾಣಿಗಳನ್ನು ಕೇಳಲಷ್ಟೇ ಸೀಮಿತಗೊಳಿಸದೇ ಆಚರಣೆಗೆ ತರಬೇಕು. ದಾಸರು, ಶರಣರ ಬಹುದೊಡ್ಡ ಪರಂಪರೆ ನಮ್ಮ ರಾಜ್ಯದಲ್ಲಿ ಆಗಿಹೋಗಿದೆ. ಇಂದು ಅದನ್ನು ಉಳಿಸಿಕೊಂಡು, ಜೀವನದಲ್ಲಿ ಅಳವಡಿಸಿಕೊಂಡು ಹೋಗಬೇಕಿದೆ. ಶರಣರ ವಚನಗಳು ಪ್ರತಿಯೊಬ್ಬರಿಗೂ ಹೇಳಿದ ಸಂದೇಶಗಳಾಗಿವೆ. ಅವುಗಳನ್ನು ಅರ್ಥೈಸಿಕೊಂಡು ಅಳವಡಿಸಿಕೊಳ್ಳಬೇಕು. ಅದಕ್ಕಾಗಿ ತರಳಬಾಳು ಹುಣ್ಣಿಮೆ ಜಗತ್ತಿಗೆ ಸಂದೇಶ ನೀಡುತ್ತಿದೆ ಎಂದರು.

ಮರುಳಸಿದ್ಧರು ನೀಡಿರುವ ವಿಶ್ವಬಂಧು ವಿಶೇಷಣವನ್ನು ಸಾಕಾರಗೊಳಿಸುವುದರ ಜೊತೆಗೆ ಜಗತ್ತಿಗೆ ವಿಶ್ವಬಂಧು ಸಂದೇಶವನ್ನು ಸಾರುತ್ತಿರುವುದು ತರಳಬಾಳು ಹುಣ್ಣಿಮೆಯ ಹೆಗ್ಗಳಿಕೆಯಾಗಿದೆ. ಮನುಷ್ಯ ಮನುಷ್ಯರಲ್ಲಿ ಸಂಬಂಧಗಳು ಕಡಿದುಹೋಗುತ್ತಿರುವ ಇಂದಿನ ದಿನಗಳಲ್ಲಿ ಜಗತ್ತಿನಲ್ಲಿರುವ ಪ್ರತಿಯೊಬ್ಬರೂ ಒಂದೇ ಎನ್ನುವ ವಿಶ್ವಬಂಧುತ್ವ ಸಂದೇಶ ಪ್ರಸ್ತುತ ದಿನಗಳಲ್ಲಿ ಹೆಚ್ಚು ಪ್ರಸ್ತುತವಾಗಿದೆ. ಇಂದಿನ ಸರ್ಕಾರಗಳು ನಿಯಂತ್ರಣ ಮಾಡಲು ಸಾಧ್ಯವಾಗದ ಪ್ರಾಣಿಬಲಿಯಂಥ ಹೀನಕೃತ್ಯಕ್ಕೆ ಹನ್ನೆರಡನೇ ಶತಮಾನದಲ್ಲಿ ಕಡಿವಾಣ ಹಾಕಿದ ಶ್ರೇಯಸ್ಸು ವಿಶ್ವಬಂಧು ಮರುಳಸಿದ್ಧರಿಗೆ ಸಲ್ಲುತ್ತದೆ. ಅವರು ಹಾಕಿಕೊಟ್ಟ ಮಾರ್ಗವನ್ನು ಮುಂದುವರಿಸಿಕೊಂಡು ಹೋಗುವ ನಿಟ್ಟಿನಲ್ಲಿ ಸರ್ಕಾರಗಳು ಚಿಂತನೆ ನಡೆಸಬೇಕು ಎಂದರು.

ಸಮಾರಂಭದಲ್ಲಿ ಶ್ರೀ ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳು, ಸಚಿವೆ ಶ್ರೀಮತಿ ಉಮಾಶ್ರೀ, ಧರ್ಮಸ್ಥಳದ ಧರ್ಮಾಧಿಕಾರಿ ಡಾ. ಶ್ರೀ ವೀರೇಂದ್ರ ಹೆಗ್ಗಡೆ, ಸಾಣೇಹಳ್ಳಿ ಡಾ. ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಮುಂತಾದವರು ಉಪಸ್ಥಿತರಿದ್ದರು.

**ಸುತ್ತೂರು ಶಾಲೆಯ ಸುವರ್ಣ ಮಹೋತ್ಸವ**

ಸುತ್ತೂರಿನ ಜೆಎಸ್‌ಎಸ್ ಪ್ರೌಢಶಾಲೆಯ ಸುವರ್ಣ ಮಹೋತ್ಸವ 8.2.2014 ರಂದು ನೆರವೇರಿತು. ಸಮಾರಂಭದ ಸಾನ್ನಿಧ್ಯವನ್ನು ವಹಿಸಿ ಮಾತನಾಡಿದ ಪರಮಪೂಜ್ಯ ಸ್ವಾಮೀಜಿ ಅವರು 50 ವರ್ಷಗಳ ಹಿಂದೆ ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳಿಗೆ ಇದ್ದ ಸಮಸ್ಯೆಗಳನ್ನು ಮನಗಂಡು ಶ್ರೀಮಠ ಪ್ರಾರಂಭಿಸಿದ ಈ ಶಾಲೆ ಇಂದು ಸುವರ್ಣ ಮಹೋತ್ಸವವನ್ನು ಆಚರಿಸುತ್ತಿರುವುದು ಸಂತೋಷ ತಂದಿದೆ.

ಹಿರಿಯ ಜಗದ್ಗುರುಗಳವರ ದೂರದೃಷ್ಟಿ ಮತ್ತು ಶ್ರಮ ಇಂದು ಸುತ್ತೂರು ಮಠವನ್ನು ಶೈಕ್ಷಣಿಕವಾಗಿ ಈ ಮಟ್ಟಕ್ಕೆ ಏರಿಸಿದೆ. ನಮ್ಮ ಎಲ್ಲ ಸಾಧನೆಗೆ ಸ್ಫೂರ್ತಿ ಮತ್ತು ಶಕ್ತಿಯಾಗಿ ಸದಾ ಇರುವವರು ಪರಮಪೂಜ್ಯ ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು ಎಂದು ಮನದುಂಬಿ ಸ್ಮರಿಸಿಕೊಂಡರು.

ಸಮಾರಂಭದಲ್ಲಿ ಭಾಗವಹಿಸಿದ್ದ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಶ್ರೀ ಕಿಮ್ಮನೆ ರತ್ನಾಕರ್, ಮಾಜಿ ಶಿಕ್ಷಣ ಸಚಿವರಾದ ಶ್ರೀ ವಿಶ್ವೇಶ್ವರ ಹೆಗ್ಗಡೆ ಕಾಗೇರಿ, ಶ್ರೀ ಬಿ. ಸೋಮಶೇಖರ್, ಶ್ರೀ ಬಿ.ಕೆ. ಚಂದ್ರಶೇಖರ್, ಶ್ರೀ ಬಸವರಾಜ್ ಹೊರಟ್ಟಿ, ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಶ್ರೀ ವಿ. ಶ್ರೀನಿವಾಸ ಪ್ರಸಾದ್ ಅವರು ಸುತ್ತೂರು ಮಠದ ಸೇವೆಯನ್ನು ಶ್ಲಾಘಿಸಿ ಮಾತನಾಡಿದರು.



**ದೇಹಾಲಸ್ಯ ಲೆಕ್ಕಿಸದೆ ಭಕ್ತರ ಇಷ್ಟಾರ್ಥ ಸಿದ್ಧಿ**

ದಿನಾಂಕ 20.2.2014 ರಂದು ತುಮಕೂರಿನಲ್ಲಿ ನಡೆದ ಸಿದ್ಧಗಂಗಾ ಶ್ರೀಗಳ 106ನೇ ಜನ್ಮ ದಿನೋತ್ಸವ ಹಾಗೂ ಗುರುವಂದನಾ ಕಾರ್ಯಕ್ರಮದ ಸಾನ್ನಿಧ್ಯವನ್ನು ವಹಿಸಿ ಮಾತನಾಡಿದ ಪರಮಪೂಜ್ಯರು, ಶ್ರೀ ಶಿವಕುಮಾರ ಸ್ವಾಮೀಜಿಯವರು ತಮ್ಮ 106ನೇ ವಯೋಮಾನದಲ್ಲಿಯೂ ಜೀವನೋತ್ಸಾಹದಿಂದ ಪುಟಿಯುತ್ತಿದ್ದಾರೆ. ದೇಹಾಲಸ್ಯ, ಆರೋಗ್ಯವನ್ನು ಲೆಕ್ಕಿಸದೆ ಭಕ್ತರ ಇಷ್ಟಗಳನ್ನು ಈಡೇರಿಸುವತ್ತ ಗಮನ ಹರಿಸುತ್ತಿದ್ದಾರೆ ಎಂದು ತಿಳಿಸಿದರು.

ಸಮಾರಂಭವನ್ನು ಉದ್ಘಾಟಿಸಿ ಮಾತನಾಡುತ್ತ 'ಜಗತ್ತಿನಲ್ಲಿ ಅಸ್ತಿತ್ವ ಉಳಿಸಿಕೊಳ್ಳಬೇಕಾದರೆ ಜ್ಞಾನವೇ ಪ್ರಮುಖ ಸಾಧನ. ವ್ಯಕ್ತಿಯ ಉದ್ಧಾರಕ್ಕೆ ಜ್ಞಾನ ಅತ್ಯಾವಶ್ಯಕ. ಈ ನಿಟ್ಟಿನಲ್ಲಿ ಜಾತಿ ವರ್ಗ ತಾರತಮ್ಯವಿಲ್ಲದೆ ಸಾವಿರಾರು ಮಕ್ಕಳಿಗೆ ಉಚಿತ ಅನ್ನ ಆಶ್ರಯ ನೀಡಿ ಜ್ಞಾನಧಾರೆ ಎರೆಯುತ್ತಿರುವ ಸಿದ್ಧಗಂಗಾ ಹಾಗೂ ಸುತ್ತೂರು ಶ್ರೀಗಳಂತಹವರ ಕಾರ್ಯ ಮಾದರಿಯಾಗಿದೆ' ಎಂದು ರಾಜ್ಯಪಾಲ ಶ್ರೀ ಹಂಸರಾಜ್ ಭಾರದ್ವಾಜ್ ಬಣ್ಣಿಸಿದರು.

ಸಮಾರಂಭದಲ್ಲಿ ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್. ಯಡಿಯೂರಪ್ಪ, ಶ್ರೀ ಜಗದೀಶ್ ಶೆಟ್ಟರ್, ಸಚಿವರಾದ ಶ್ರೀ ಟಿ.ಬಿ. ಜಯಚಂದ್ರ, ಶ್ರೀ ಎಚ್.ಎಸ್. ಮಹದೇವಪ್ರಸಾದ್, ಮಾಜಿ ಸಚಿವ ಶ್ರೀ ವಿ. ಸೋಮಣ್ಣ, ಶ್ರೀ ಸಿ. ಚೆನ್ನಿಗಪ್ಪ, ಶಾಸಕರಾದ ಡಾ. ರಫೀಕ್ ಅಹಮದ್, ಡಾ. ಶಿವಯೋಗಿ ಸ್ವಾಮಿ, ಶ್ರೀ ವೈ.ಎ. ನಾರಾಯಣಸ್ವಾಮಿ ಮುಂತಾದವರು ಭಾಗವಹಿಸಿದ್ದರು.

□

**ಫಾರಂ (ರೂಲ್ 8 ರಂತೆ)**

**'ಪ್ರಸಾದ' ದ್ವೈಮಾಸಿಕದ ಮಾಲಿಕತ್ವ ಮತ್ತು ಇತರ ವಿವರಗಳು**

| | | | |
|---|---|---|---|
| 1. | ಪತ್ರಿಕೆಯ ಹೆಸರು<br>ಮತ್ತು ವಿಳಾಸ | : | ಪ್ರಸಾದ<br>ಜೆಎಸ್ಎಸ್ ಮಹಾವಿದ್ಯಾಪೀಠ, ಮೈಸೂರು |
| 2. | ದ್ವೈಮಾಸಿಕವೆ ? ಮಾಸಿಕವೆ ?<br>ವಾರಪತ್ರಿಕೆಯೆ ? | : | ದ್ವೈಮಾಸಿಕ |
| 3. | ಪ್ರಕಾಶಕರ ಹೆಸರು ಮತ್ತು<br>ವಿಳಾಸ | : | ಬಿ.ಎನ್. ಬೆಟ್‌ಕೆರೂರ್<br>ಕಾರ್ಯನಿರ್ವಾಹಕ ಕಾರ್ಯದರ್ಶಿ<br>ಜೆಎಸ್ಎಸ್ ಮಹಾವಿದ್ಯಾಪೀಠ<br>ಮೈಸೂರು 570 004 |
| 4. | ಸಂಪಾದಕರ ಹೆಸರು | : | ಮಲೆಯೂರು ಗುರುಸ್ವಾಮಿ |
| | ಭಾರತೀಯರೆ, ಹೊರದೇಶದವರೆ ? | : | ಭಾರತೀಯರು |
| | ಮತ್ತು ವಿಳಾಸ | : | ಜೆಎಸ್ಎಸ್ ಪ್ರಕಟಣ ವಿಭಾಗ<br>ಜೆಎಸ್ಎಸ್ ಮಹಾವಿದ್ಯಾಪೀಠ<br>ಮೈಸೂರು 570 004 |
| 5. | ಮುದ್ರಕರ ಹೆಸರು ಮತ್ತು<br>ವಿಳಾಸ | : | ಶ್ರೀ ಸದ್ಗುರು ಪ್ರಿಂಟರ್ಸ್<br>ಮೈಸೂರು 570 004 |
| 6. | ಭಾರತೀಯರೆ, ಹೊರದೇಶದವರೆ ? | : | ಭಾರತೀಯರು |
| 7. | ಪತ್ರಿಕೆಯ ಮಾಲೀಕತ್ವ ಮತ್ತು ವಿಳಾಸ<br>ಒಬ್ಬರಿಗಿಂತ ಹೆಚ್ಚು ಜನ ಅದರ<br>ಒಡೆತನದಲ್ಲಿದ್ದರೆ ಅವರ ಹೆಸರು,<br>ವಿಳಾಸ ಮತ್ತು ವಿವರಗಳು | : | ಜೆಎಸ್ಎಸ್ ಮಹಾವಿದ್ಯಾಪೀಠ<br>ಮೈಸೂರು 570 004 |

ಮೇಲಿನ ವಿವರಗಳು ಸತ್ಯ ಮತ್ತು ನೈಜವಾದ ವಿವರಗಳೆಂದು ಹೇಳುತ್ತೇನೆ.

ಬಿ.ಎನ್. ಬೆಟ್‌ಕೆರೂರ್
ಪ್ರಕಾಶಕ, 'ಪ್ರಸಾದ' ದ್ವೈಮಾಸಿಕ
ಜೆಎಸ್ಎಸ್ ಮಹಾವಿದ್ಯಾಪೀಠ, ಮೈಸೂರು



ಕನಕಪುರದ ಶ್ರೀ ದೇಗುಲಮಠದಲ್ಲಿ ನಡೆದ ಪೂಜ್ಯ ಸಿದ್ಧಗಂಗಾ ಶ್ರೀಗಳವರ ಗುರುವಂದನೆ ಹಾಗೂ ಕನಕಪುರ ಹಿರಿಯ ಶ್ರೀಗಳವರ ಸಂಸ್ಮರಣ ಮಹೋತ್ಸವದಲ್ಲಿ ಪರಮಪೂಜ್ಯ ಸುತ್ತೂರು ಜಗದ್ಗುರುಗಳೊಡನೆ ದೇಗುಲಮಠದ ಶ್ರೀಗಳವರು, ಸಿದ್ಧಗಂಗಾ ಶ್ರೀಮಠದ ಕಿರಿಯ ಶ್ರೀಗಳವರು ಮತ್ತು ಮರಳೆಗವಿಮಠದ ಶ್ರೀಗಳವರನ್ನು ಕಾಣಬಹುದು




ಶಿಗ್ಗಾಂವಿಯಲ್ಲಿ ನಡೆದ ತರಳಬಾಳು ಹುಣ್ಣಿಮೆ ಮಹೋತ್ಸವ 2014 ರ ಉದ್ಘಾಟನಾ ಸಮಾರಂಭದಲ್ಲಿ ಪರಮಪೂಜ್ಯ ಜಗದ್ಗುರುಗಳವರು, ತರಳಬಾಳು ಮಠದ ಡಾ. ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮೀಜಿಯವರು, ಧರ್ಮಸ್ಥಳದ ಡಾ. ಶ್ರೀ ವೀರೇಂದ್ರ ಹೆಗ್ಗಡೆಯವರು, ಸಾಣೇಹಳ್ಳಿಯ ಶ್ರೀ ಪಂಡಿತಾರಾಧ್ಯ ಮಹಾಸ್ವಾಮಿಗಳು ಮುಂತಾದವರನ್ನು ಚಿತ್ರದಲ್ಲಿ ಕಾಣಬಹುದು.



ಮೈಸೂರಿನ ಡಿಜಿಟಿಎಂ ವಿದ್ಯಾಸಂಸ್ಥೆಯ ಸಮಾರಂಭದಲ್ಲಿ ಪರಮಪೂಜ್ಯ ಶ್ರೀಗಳು, ಜಿಲ್ಲಾಧಿಕಾರಿ ಶ್ರೀಮತಿ ಶಿಖಾ, ಶಾಸಕ ಸೋಮಶೇಖರ್ ಮುಂತಾದವರು



ಶ್ರೀಕೃಷ್ಣ ಗಾನಸಭಾ ಗೋಕುಲಂ ಮೈಸೂರು: ಪ್ರಶಸ್ತಿ ಪ್ರದಾನ ಸಮಾರಂಭದ ಚಿತ್ರದಲ್ಲಿ ಪರಮಪೂಜ್ಯ ಶ್ರೀಗಳು, ಶ್ರೀಮತಿ ಮಾಧುರಿ ತಾತಾಚಾರಿ, ಶ್ರೀ ವಿ.ಪಿ. ಬಳಿಗಾರ್, ಡಾ. ಎಚ್.ಟಿ. ರಾಮಚಂದ್ರ, ಶ್ರೀ ಶ್ರೀಧರರಾಜೇ ಅರಸ್ ಮುಂತಾದವರನ್ನು ಕಾಣಬಹುದು